
ದುಡಿವ ಜನರ ಪ್ರಾಣ ಮಿತ್ರ

ಐಕ್ಯರಂಗ

ಸಂಪುಟ 27 ಸಂಚಿಕೆ 20 ಮೇ 15, 2005 ಬೆಲೆ ರೂ. 3.00



ಸಂಸದೀಯ ಪ್ರಜಾಪ್ರಭುತ್ವದ ಮೇಲೆ ಬಿಜೆಪಿ ಪ್ರಹಾರಗಳು

ಜಗದಗಲ



ಮೇ ದಿನಾಚರಣೆ

ವಿಛಿದ್ರಕಾರಿ ಚಳುವಳಿಗೆ ಕೋಮುವಾದದ ಗುರಾಣಿ !

- ಸ್ವಸಹಾಯ ಗುಂಪುಗಳು : ಒಂದು ವಿಶ್ಲೇಷಣೆ
- ಅಮೆರಿಕಾ ನೆಲದಲ್ಲಿ ಅದೆಂತಹ ಪ್ರಜಾಪ್ರಭುತ್ವ ?



ಹಿಟ್ಲರ್ ಫ್ಯಾಸಿಸಂ ಮಣ್ಣು ಮುಕ್ಕಿಸಿದ ಮಹಾನ್ ವಿಜಯಕ್ಕೆ 60 ವರ್ಷ

ಮಹಿಳಾ ಸ್ವಸಹಾಯ ಗುಂಪುಗಳು

ಗ್ರಾಮೀಣ ಮಹಿಳೆಯರಲ್ಲಿ ತೀವ್ರ ಆಸಕ್ತಿಯನ್ನು ಕೆರಳಿಸಿರುವ ವಿಶ್ವಬ್ಯಾಂಕ್ ನಿರ್ದೇಶನದಲ್ಲಿ ರೂಪಿಸಿರುವ ಸ್ವಸಹಾಯ ಗುಂಪುಗಳ ಸಾಧಕ-ಬಾಧಕಗಳ ಕುರಿತು ನಡೆಯಬೇಕಾಗಿರುವ ವಿಮರ್ಶೆಗಾಗಿ ಒಂದು ಟಿಪ್ಪಣಿ

ನಿತ್ಯಾನಂದ ಸ್ವಾಮಿ

'ಸ್ವಸಹಾಯ ಗುಂಪುಗಳು' ಎಂಬುದು ಗ್ರಾಮೀಣ ಸಾಲ ವ್ಯವಸ್ಥೆಗೆ ವಿಶ್ವಬ್ಯಾಂಕ್ ರೂಪಿಸಿರುವ ಪರ್ಯಾಯವಾಗಿದೆ. ಉದಾರೀಕರಣದ ಪರಿಣಾಮವಾಗಿ ಗ್ರಾಮೀಣ ಸಾಲ ವ್ಯವಸ್ಥೆ ಗಣನೀಯವಾಗಿ ಕ್ಷೀಣಿಸಿದ್ದು ಇದಕ್ಕೆ ಪರ್ಯಾಯವಾಗಿ ಗ್ರಾಮೀಣ ಜನರಲ್ಲಿ ಉಳಿತಾಯವನ್ನು ಪ್ರೋತ್ಸಾಹಿಸಿ ಸರ್ಕಾರದ ಜವಾಬ್ದಾರಿಯನ್ನು ಕಡಿಮೆ ಮಾಡುವುದು ವಿಶ್ವಬ್ಯಾಂಕ್‌ನ ಗುರಿಯಾಗಿದೆ.

ಭಾರತದಲ್ಲಿ ನಬಾರ್ಡ್ ಮೂಲಕ 1992 ರಲ್ಲಿ ಸ್ವಸಹಾಯ ಗುಂಪುಗಳ ಯೋಜನೆಯನ್ನು ಜಾರಿಗೆ ತರಲಾಯಿತು. ಕೇಂದ್ರಸರ್ಕಾರವು 'ಸ್ವರ್ಣಜಯಂತಿ ಗ್ರಾಮ ಸ್ವಸಹಾಯ ಯೋಜನೆ'ಯ ಅಡಿಯಲ್ಲಿ ಸ್ವಸಹಾಯ ಗುಂಪುಗಳಿಗೆ ರಾಜ್ಯ ಸರ್ಕಾರಗಳ ಮೂಲಕ ಹಣವನ್ನು ಒದಗಿಸುತ್ತದೆ. ಇಂದು ದೇಶದಲ್ಲಿ ಸ್ವಸಹಾಯ ಗುಂಪುಗಳು ಅತ್ಯಂತ ವೇಗವಾಗಿ ಬೆಳೆಯುತ್ತಿದ್ದು, 10 ಲಕ್ಷ ಸ್ವಸಹಾಯ ಗುಂಪುಗಳು ಈಗಾಗಲೇ ರಚನೆಯಾಗಿದ್ದು ನಬಾರ್ಡ್ 2007ಕ್ಕೆ ನಿಗದಿಪಡಿಸಿದ ಗುರಿಯನ್ನು ಈಗಾಗಲೇ ಮುಟ್ಟಿದಂತಾಗಿದೆ. ಇವುಗಳಲ್ಲಿ ಶೇ.75ರಷ್ಟು ಸ್ವಸಹಾಯ ಗುಂಪುಗಳು ದಕ್ಷಿಣದ 4 ರಾಜ್ಯಗಳಾದ ಆಂಧ್ರಪ್ರದೇಶ, ಕರ್ನಾಟಕ, ತಮಿಳುನಾಡು ಮತ್ತು ಕೇರಳದಲ್ಲಿವೆ. ಇವುಗಳಲ್ಲಿ ಶೇ.90ರಷ್ಟು ತಮಿಳುನಾಡು ಮತ್ತು ಕೇರಳದಲ್ಲಿದೆ. ಇವುಗಳಲ್ಲಿ ಶೇ.90ರಷ್ಟು ಗುಂಪುಗಳು ಮಹಿಳಾ ಸ್ವಸಹಾಯ ಗುಂಪುಗಳಾಗಿವೆ.

ಮಹಿಳಾ ಸ್ವಸಹಾಯ ಗುಂಪುಗಳ ಸ್ಥಾಪನೆ ಕಳೆದ ಒಂದು ದಶಕದಲ್ಲಿ ನಮ್ಮ ಮಹಿಳೆಯರು ಸಾಧಿಸಿದ ಅತ್ಯಂತ ಮಹತ್ವಪೂರ್ಣ ಸಾಧನೆಗಳಲ್ಲಿ ಒಂದಾಗಿದೆ. ಸ್ವಸಹಾಯ ಗುಂಪುಗಳ ರಚನೆಯಿಂದಾಗಿ ನಮ್ಮ ಮಹಿಳೆಯರಿಗೆ ಸಂಪನ್ಮೂಲಗಳನ್ನು ಹುಟ್ಟುಹಾಕಲು, ಉಳಿತಾಯ ಮಾಡಲು ಮತ್ತು ಗ್ರಾಮೀಣ ಲೇವಾದೇವಿಗಾರರ ಹಿಡಿತದಿಂದ ಸ್ವಲ್ಪಮಟ್ಟಿಗಾದರೂ ಬಿಡುಗಡೆ ಹೊಂದಲು ಕೆಲವು ಅವಕಾಶಗಳನ್ನು ಒದಗಿಸಿದಂತಾಗಿದೆ. ಮಹಿಳೆಯರು, ತಮಗೆ ಅವಕಾಶವನ್ನು ಕಲ್ಪಿಸಿಕೊಟ್ಟರೆ, ತಮಗೆ ಕೂಡಿಕೊಂಡು ಕೆಲಸ ಮಾಡುವುದು, ಹಣಕಾಸು ವ್ಯವಹಾರಗಳಲ್ಲಿ ಭ್ರಷ್ಟಾಚಾರಕ್ಕೆ ಆಸ್ಪದ ಕೊಡದೆ ಯೋಗ್ಯ ನಿರ್ಧಾರಗಳನ್ನು ಕೈಗೊಳ್ಳುವುದು ಮತ್ತು ಸಾಲ ಮರುಪಾವತಿ ಮಾಡುವುದು ಸಾಧ್ಯವಿದೆ ಎಂದು ತೋರಿಸಿಕೊಟ್ಟಿದ್ದಾರೆ. ಸ್ವಸಹಾಯ ಗುಂಪುಗಳ ಮೂಲಕ ಮಹಿಳೆರಿಗೆ ತಮ್ಮ ಹಕ್ಕುಗಳನ್ನು ಪ್ರತಿಪಾದಿಸಲು ಸಾಧ್ಯವಾಗಿದೆ. ಮಹಿಳೆಯರಿಗೆ ಸ್ವಾಭಿಮಾನ ಮತ್ತು ಸ್ವಾತಂತ್ರ್ಯವನ್ನು ತಂದುಕೊಟ್ಟಿದೆ.

ಆದರೆ, ಕಳೆದ ಒಂದು ದಶಕದ ಅನುಭವವು ಸ್ವಸಹಾಯ ಗುಂಪುಗಳ ಪ್ರಯೋಗದ ಅನೇಕ ಇತಿಮಿತಿಗಳನ್ನು ಬಯಲಿಗೆ ತಂದಿದೆ. ಈ ಯೋಜನೆಯ ಉದ್ದೇಶ ಬಡ ಮಹಿಳೆಯರಿಗೆ ಸಾಂಸ್ಥಿಕ ಹಣಕಾಸು ಸೇವೆಯನ್ನು ಒದಗಿಸುವುದು ಎಂದಿದ್ದರೂ ನಿಗಧಿತ ಆದಾಯ ಇರುವ ಮಹಿಳೆಯರು ಮಾತ್ರ ಸ್ವಸಹಾಯ ಗುಂಪುಗಳ ಸದಸ್ಯರಾಗಿ ಮುಂದುವರೆಯಬಹುದಾಗಿದೆ. ಏಕೆಂದರೆ ನಿಗಧಿತ ಆದಾಯ ಇರುವವರು ಮಾತ್ರ ನಿಗಧಿತ ಉಳಿತಾಯ ಮಾಡಲು ಸಾಧ್ಯ. ಜನವಾದಿ ಮಹಿಳಾ ಸಂಘಟನೆಯವರು ಆಂಧ್ರಪ್ರದೇಶದಲ್ಲಿ ನಡೆಸಿದ ಅಧ್ಯಯನದಲ್ಲಿ ಕಂಡುಬಂದ ಒಂದು ಸಂಗತಿ ಏನೆಂದರೆ, ರಾಜ್ಯದ ಒಟ್ಟು ಸ್ವಸಹಾಯ ಗುಂಪುಗಳಲ್ಲಿ ಶೇ.25ರಷ್ಟಿರುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಮಹಿಳೆಯರ ಸ್ವಸಹಾಯ ಗುಂಪುಗಳು ಬಹುತೇಕ ಸ್ಥಗಿತಗೊಂಡಿವೆ. ರಾಜ್ಯದಲ್ಲಿ ತೀವ್ರಗೊಂಡ ಕೃಷಿ ಬಿಕ್ಕಟ್ಟು ಮತ್ತು ಕೂಲಿ ಕೆಲಸದ ಲಭ್ಯತೆಯ ಕೊರತೆಯಿಂದಾಗಿ ಈ ಮಹಿಳೆಯರಿಗೆ ಉಳಿತಾಯ ಮಾಡುವುದು ಅಸಾಧ್ಯವಾಯಿತು. ಆರಂಭದಲ್ಲಿ ಪ್ರತಿಯೊಂದು ಗುಂಪಿಗೆ ಸರ್ಕಾರ ಒದಗಿಸುತ್ತಿದ್ದ ಇಪ್ಪತ್ತು ಸಾವಿರ ರೂ.ಸಮಾನಹಣವನ್ನು ಸದಸ್ಯರು ತಮ್ಮೊಳಗೆ ಹಂಚಿಕೊಳ್ಳುತ್ತಿದ್ದರು. ಆದರೆ ಸರ್ಕಾರದಿಂದ ಈ ಸಮಾನ ಹಣವನ್ನು ಪಡೆಯಲು

ಅನೇಕ ಸಲ ಮಹಿಳೆಯರು ಸಾಲ ಮಾಡಿ ಸ್ವಸಹಾಯ ಗುಂಪುಗಳಲ್ಲಿ ತಮ್ಮ ಪಾಲಿನ ವಂತಿಗೆಯನ್ನು ತುಂಬುತ್ತಿದ್ದರು. ಆದರೆ ಬರಬರುತ್ತಾ ಅವರ ಆರ್ಥಿಕ ದುಸ್ಥಿತಿಯ ಕಾರಣದಿಂದಾಗಿ ಮಹಿಳೆಯರಿಗೆ ತಮ್ಮ ಪಾಲಿನ ಹಣವನ್ನು ಸಂದಾಯಮಾಡಲು ಸಾಧ್ಯವಾಗಲಿಲ್ಲ. ಸರ್ಕಾರದಿಂದ ದೊರೆಯುತ್ತಿದ್ದ ಹಣವು ಹದಿನೈದು ಸಾವಿರ, ಹತ್ತು ಸಾವಿರ, ಐದು ಸಾವಿರ, ಹೀಗೆ ಇಳಿಯುತ್ತಾ ಹೋಗಿ ಕೊನೆಗೆ ಬಹಳಷ್ಟು ಸ್ವಸಹಾಯ ಗುಂಪುಗಳಿಗೆ ಸರ್ಕಾರದಿಂದ ಯಾವುದೇ ಅನುದಾನ ಸಿಗದಂತಾಯಿತು. ಸರ್ಕಾರವು ಪ್ರತಿ ವರ್ಷ ಈ ಯೋಜನೆಗಾಗಿ 40 ಕೋಟಿ ರೂ.ಗಳನ್ನು ಖರ್ಚು ಮಾಡುತ್ತಿದ್ದರೂ ಈ ಹಣವನ್ನು ಉತ್ಪಾದನೆಯಲ್ಲಿ ತೊಡಗಿಸಲು ಸಾಧ್ಯವಾಗುವಂತೆ ನಿರಂತರ ನೆರವು ನೀಡುತ್ತಿರಲಿಲ್ಲ. ಬಡ ಮಹಿಳೆಯರಿಗೆ ನಿಗದಿತ ವೇತನ ಅಥವಾ ಆದಾಯ ತರುವ ಕೆಲಸದ ಖಾತರಿ ಇಲ್ಲದೆ ಅವರ ನಡುವೆ ಸ್ವಸಹಾಯ ಗುಂಪು ಯೋಜನೆ ಯಶಸ್ವಿಯಾಗಲಾರದು.



ಸಾಮಾಜಿಕ ಭಾಗಿತ್ವ

ಮಹಿಳೆಯರ ಉಳಿತಾಯವು ಆದಾಯವನ್ನು ಹುಟ್ಟುಹಾಕುವಲ್ಲಿ ನೇರವಾಗದಿರುವುದು ಈ ಯೋಜನೆಯ ಇನ್ನೊಂದು ದೌರ್ಬಲ್ಯವಾಗಿದೆ. ಪ್ರಚಲಿತವಿರುವ ತೀವ್ರ ಬಡತನದ ಕಾರಣದಿಂದಾಗಿ ಹಣವೆಲ್ಲ ಬಹುತೇಕವಾಗಿ ಆಹಾರ, ಆರೋಗ್ಯದಂತಹ ಬಳಕೆಯ ಉದ್ದೇಶಗಳಿಗಾಗಿ ಉಪಯೋಗಿಸಲ್ಪಡುತ್ತದೆ. ಆಂಧ್ರ, ತಮಿಳುನಾಡು, ಕರ್ನಾಟಕದಂತಹ ರಾಜ್ಯಗಳಲ್ಲಿ ಬ್ಯಾಂಕುಗಳಿಂದ ಸಾಲ ಪಡೆದು ಸಣ್ಣ ಪ್ರಮಾಣದಿಂದ ಉತ್ಪಾದನೆಯಲ್ಲಿ ತೊಡಗಿರುವ ಸ್ವಸಹಾಯ ಗುಂಪುಗಳ ಸಂಖ್ಯೆ ನಗಣ್ಯವಾಗಿದೆ. ಸ್ವಂತ ಉದ್ಯೋಗ ಮಾಡುತ್ತಿರುವ ಮಹಿಳೆಯರಿಗೆ ಇದರಿಂದ ಸಹಾಯವಾಗಿದೆ. ಆದರೆ ಅಂತವರ ಸಂಖ್ಯೆ ಬಹಳ ಕಮ್ಮಿ. ದಲಿತ ಮತ್ತು ಆದಿವಾಸಿ ಮಹಿಳೆಯರಲ್ಲಿ ಕೇವಲ ಶೇ.20ರಷ್ಟು ಮಹಿಳೆಯರು ಸ್ವಂತ ಉದ್ಯೋಗ ಮಾಡುತ್ತಿದ್ದಾರೆ. ಶೇ.70ರಷ್ಟು ದಲಿತ ಮತ್ತು ಆದಿವಾಸಿ ಮಹಿಳೆಯರು ಗ್ರಾಮೀಣ ಕೂಲಿಕಾರರಾಗಿರುತ್ತಾರೆ. ,ಇಂತಹ ವಿಭಾಗಗಳ ನಡುವಿನ ಸ್ವಸಹಯ ಗುಂಪುಗಳ ಉಳಿತಾಯದ ಹಣವೂ ಹೆಚ್ಚಾಗಿ ದಿನಬಳಕೆಗೆ ಉಪಯೋಗಿಸಲ್ಪಡುತ್ತದೆ.

ಸ್ವಸಹಾಯ ಗುಂಪುಗಳ ಉತ್ಪನ್ನಗಳಿಗೆ ಮಾರುಕಟ್ಟೆಯನ್ನು ಒದಗಿಸಲು ಸರ್ಕಾರಕ್ಕೆ ಸಾಧ್ಯವಾಗದಿರುವುದು ಇನ್ನೊಂದು ಸಮಸ್ಯೆಯಾಗಿದೆ. ಆಂಧ್ರಪ್ರದೇಶ ಸರ್ಕಾರವು ಆರಂಭದಲ್ಲಿ, ಪ್ರಮುಖ ನಗರಕೇಂದ್ರಗಳಲ್ಲಿ ಸ್ವಸಹಾಯ ಗುಂಪುಗಳ ಉತ್ಪನ್ನಗಳನ್ನು ಮಾರಾಟ ಮಾಡುವ ಕೇಂದ್ರಗಳನ್ನು ತೆರೆಯಿತು. ಆದರೆ ಕಚ್ಚಾ ಪದಾರ್ಥಗಳ ಬೆಲೆ ಏರಿಕೆ ಹಾಗೂ ಸ್ಥಳೀಯ ಮಾರುಕಟ್ಟೆಗಳಲ್ಲಿ ದೊಡ್ಡ ಕಂಪನಿ ಪೈಪೋಟಿಯನ್ನು ಎದುರಿಸಲಾಗದೆ ಸ್ವಸಹಾಯ ಗುಂಪುಗಳು ಸ್ಥಗಿತಗೊಂಡವು.

ಸ್ವಸಹಾಯ ಗುಂಪುಗಳ ವಿಷಯದಲ್ಲಿ ಬ್ಯಾಂಕುಗಳ ಧೋರಣೆಯೂ ಪ್ರೋತ್ಸಾಹದಾಯಕವಾಗಿಲ್ಲ. ರಿಸರ್ವ್ ಬ್ಯಾಂಕಿನ ಸ್ಪಷ್ಟ ನಿರ್ದೇಶನವಿದ್ದಾಗ್ಯೂ, ಪ್ರಮುಖ ಬ್ಯಾಂಕುಗಳು ಸ್ವಸಹಾಯ ಗುಂಪುಗಳ ಬಗ್ಗೆ ಆಸಕ್ತಿ ತೋರುತ್ತಿಲ್ಲ. ಬ್ಯಾಂಕುಗಳಿಗೆ ಲಾಭದಾಯಕತೆಯನ್ನು ತೋರಿಸುವ ಒತ್ತಡವಿರುತ್ತದೆ. ಅವುಗಳು ಸಾಮಾಜಿಕ ಜವಾಬ್ದಾರಿಯನ್ನು ಹೊಂದದಿರುವ ಖಾಸಗಿ ಬ್ಯಾಂಕುಗಳೊಂದಿಗೆ ಸ್ಪರ್ಧಿಸಬೇಕಾಗಿರುತ್ತದೆ. ಬ್ಯಾಂಕುಗಳಿಗೆ ಸ್ವಸಹಾಯ ಗುಂಪುಗಳೆಂದರೆ ಲಾಭದಾಯಕವಲ್ಲದ ಗಿರಾಕಿಗಳು, ಈ ಕಾರಣಗಳಿಂದಾಗಿ ಬ್ಯಾಂಕುಗಳು ಸ್ವಸಹಾಯ ಗುಂಪುಗಳೊಂದಿಗೆ ಅತಿ ನಿಷ್ಠುರವಾಗಿ ವರ್ತಿಸುತ್ತದೆ. ಸ್ವಸಹಾಯ ಗುಂಪಿನ ಒಬ್ಬ ಸದಸ್ಯನ ದೂರದ ಸಂಬಂಧಿಯೊಬ್ಬರು ಬ್ಯಾಂಕಿನಿಂದ ಸಾಲವನ್ನು ಪಡೆದಿದ್ದರೆ, ಸಾಲ ಮರುಪಾವತಿಗೆ ಒತ್ತಡ ಹೇರುವ ದೃಷ್ಟಿಯಿಂದ ಆ ಇಡೀ ಸ್ವಸಹಾಯ ಗುಂಪಿಗೆ ಸಾಲ ನೀಡಲು ನಿರಾಕರಿಸಲಾಗುತ್ತಿದೆ. ಅಥವಾ ಆ ಸದಸ್ಯನ ಪಾಲಿನ ಸಾಲದ ಹಣವನ್ನು ಸದಸ್ಯನ ಸಂಬಂಧಿಕನ ಸಾಲಕ್ಕಾಗಿ ಕಡಿತ ಮಾಡುತ್ತಾರೆ. ಸ್ವಸಹಾಯ ಗುಂಪುಗಳ ಬ್ಯಾಂಕ್ ಠೇವಣಿಗಳ ಮೇಲೆ ಕೇವಲ ಶೇ.7-ಶೇ.8ರ ದರದಲ್ಲಿ ಬಡ್ಡಿ ಸಂದಾಯ ಮಾಡುತ್ತವೆ; ಆದರೆ ಬ್ಯಾಂಕುಗಳಿಂದ ಪಡೆದ ಸಾಲಕ್ಕೆ ಶೇ.12ರಿಂದ ಶೇ.18ರ ದರಗಳಲ್ಲಿ ಬಡ್ಡಿ ಆಕರಣೆ ಮಾಡುತ್ತಾರೆ. ನಬಾರ್ಡ್ ಪ್ರಕಾರ ಸ್ವಸಹಾಯ ಗುಂಪುಗಳಿಗೆ ಬ್ಯಾಂಕುಗಳಿಂದ ಒದಗಿಸಲಾದ ಒಟ್ಟು ಸಾಲ ರೂ.3900 ಕೋಟಿ ಒಟ್ಟು. 10 ಲಕ್ಷ ಸ್ವಸಹಾಯ ಗುಂಪುಗಳ ನಡುವೆ ಈ ಮೊತ್ತವನ್ನು ಪಾಲು ಮಾಡಿದರೆ ಒಂದು ಗುಂಪಿಗೆ ಸಿಗುವ ಹಣ ಕೇವಲ ರೂ.39,000. ಪ್ರತಿಯೊಂದು ಗುಂಪಿನಲ್ಲಿ ಸರಾಸರಿ 10 ಜನ ಸದಸ್ಯರಿದ್ದಾರೆ ಎಂದು ಲೆಕ್ಕಹಾಕಿದರೆ ಪ್ರತಿಯೊಬ್ಬ ಮಹಿಳಾ ಸದಸ್ಯಳ ಪಾಲಿಗೆ ಬರುವುದು ಕೇವಲ ರೂ.3900. ಗ್ರಾಮೀಣ ಬಡವರಿಗೆ ಒದಗಿಸುವ ಸಾಲ ಸೌಲಭ್ಯ ಹೇಗೆ ಕ್ಷೀಣಿಸುತ್ತಾ ಹೋಗುತ್ತಿದೆ ಎಂಬುದು ಇಲ್ಲಿ ಮುಖ್ಯ ಪ್ರಶ್ನೆಯಾಗಿದೆ. 1980ಕ್ಕೆ ಹೋಲಿಸಿದರೆ ಐ.ಆರ್.ಡಿ.ಪಿ. ಸಾಲಗಳು ಸಹ ಶೇ.33ರಷ್ಟು ಕಡಿಮೆಯಾಗಿವೆ. ಗ್ರಾಮೀಣ ಬಡವರಿಗೆ ಸಾಲ ಒದಗಿಸುವ ವ್ಯವಸ್ಥೆಗೆ ಸ್ವಸಹಾಯ ಗುಂಪು ವ್ಯವಸ್ಥೆ ಪರ್ಯಾಯವಾಗಲಾರದು ಎಂಬುದು ಇಲ್ಲಿ ಸ್ಪಷ್ಟವಾಗುತ್ತದೆ.

ಕರ್ನಾಟಕದಂತಹ ರಾಜ್ಯಗಳಲ್ಲಿ ಸ್ವಸಹಾಯ ಗುಂಪುಗಳ ರಚನೆಯ ಗುರಿಯನ್ನು ಅಂಗನವಾಡಿ ಕಾರ್ಯಕರ್ತೆಯರ ಮೇಲೆ ಹೇರಲಾಗುತ್ತಿದೆ. ಅನೇಕ ಅನುದಾನ ಆಧಾರಿತ ಬಡತನ ನಿವಾರಣಾ ಕಾರ್ಯಕ್ರಮಗಳನ್ನು ಸ್ವಸಹಾಯಗುಂಪುಗಳಿಗೆ ವಹಿಸಿಕೊಡಲಾಗುತ್ತಿದೆ. ಇದರಿಂದಾಗಿ ಮಹಿಳೆಯರನ್ನು ಸಶಕ್ತಗೊಳಿಸುವ ಬದಲಾಗಿ ಅವರನ್ನು ಬಡತನ ನಿವಾರಣಾ ಯೋಜನೆಗಳ ಜಾರಿಗಾಗಿ ಬಳಸಿಕೊಳ್ಳಲಾಗುತ್ತಿದೆ. ಪಂಚಾಯತಿಗಳ ಮೂಲಕ ನಡೆಯುತ್ತಿದ್ದ ಸ್ವಚ್ಛತಾ ಕೆಲಸಗಳನ್ನು ಸ್ವಸಹಾಯ ಗುಂಪುಗಳಿಂದ ಮಾಡಿಸಲಾಗುತ್ತದೆ. ಇಂತಹ ಕಾರ್ಯಕ್ರಮಗಳಿಗೆ ಸರ್ಕಾರಧ ಅನುದಾನವನ್ನು ಕಡಿತಮಾಡಿ ಮಹಿಳೆಯರ ಉಳಿತಾಯದ ಹಣ ಮತ್ತು ಅದರ ಮೇಲೆ ದೊರೆಯುವ ಬ್ಯಾಂಕ್ ಸಾಲವನ್ನು ಬಳಸಿಕೊಳ್ಳುವುದು ಸರ್ಕಾರದ ಉದ್ದೇಶವಾಗಿದೆ. ಆಂಧ್ರದಲ್ಲಿ ಶಾಲಾ ಮಕ್ಕಳಿಗೆ ಮಧ್ಯಾಹ್ನದ ಊಟವನ್ನು ಒದಗಿಸುವ ಕಾರ್ಯಕ್ರಮವನ್ನು ಸ್ವಸಹಾಯ ಗುಂಪುಗಳಿಗೆ ನೀಡಲಾಗಿತ್ತು. ಸರ್ಕಾರದ ಅನುದಾನಕ್ಕಾಗಿ 3 ತಿಂಗಳುಗಳವರೆಗೆ ಕಾಯಬೇಕಾಗುತ್ತಿದ್ದುದರಿಂದ ಸ್ವಸಹಾಯ ಗುಂಪುಗಳು ಸಾಲ ಮಾಡಿ ಮಕ್ಕಳಿಗೆ ಊಟದ ವ್ಯವಸ್ಥೆ ಮಾಡಬೇಕಾಗುತ್ತಿತ್ತು. ಇದರ ಪರಿಣಾಮವಾಗಿ ಸ್ವಸಹಾಯ ಗುಂಪುಗಳು ಹಾನಿ ಅನುಭವಿಸುವಂತಾಯಿತು.

ಕೆಲವು ಕಡೆಗಳಲ್ಲಿ ಬಹುರಾಷ್ಟ್ರೀಯ ಕಂಪನಿಗಳ ಉತ್ಪನ್ನಗಳನ್ನು ಮಾರಾಟ ಮಾಡಲು ಸ್ವಸಹಾಯ ಗುಂಪುಗಳನ್ನು ಬಳಕೆ ಮಾಡಲಾಗುತ್ತಿದೆ. ಆಂಧ್ರಪ್ರದೇಶದಲ್ಲಿ ಹಿಂದಿನ ನಾಯ್ಡು ಸರ್ಕಾರ ಹಿಂದುಸ್ಥಾನ ಲಿವರ್‌ನಂತಹ ಕಂಪನಿಗಳ ಉತ್ಪನ್ನಗಳನ್ನು ಕಮಿಷನ್ ಆಧಾರದಲ್ಲಿ ಗ್ರಾಮೀಣ ಮಾರುಕಟ್ಟೆಯಲ್ಲಿ ಮಾರಾಟ ಮಾಡುವಂತೆ ಸರ್ಕಾರಿ ಆದೇಶವನ್ನೇ ಹೊರಡಿಸಿತ್ತು. ಕೇರಳದ ಆ್ಯಂಟನಿ ಸರ್ಕಾರವು ಆಮ್‌ವೇ ಮತ್ತು ಮೊದಿಗಾರ್ಡ್‌ಗಳಂತಹ ಕಂಪನಿಗಳ ಉತ್ಪನ್ನಗಳನ್ನು ಮಾರಾಟ ಮಾಡಲು ಸ್ವಸಹಾಯ ಗುಂಪುಗಳಿಗೆ ಪ್ರೋತ್ಸಾಹ ನೀಡುತ್ತಿತ್ತು.

ಈ ಎಲ್ಲ ನಕಾರಾತ್ಮಕ ಬೆಳಣಿಗೆಗಳ ನಡುವೆಯೂ ಕೆಲವು ಕಡೆ ಸಕಾರಾತ್ಮಕ ಅನುಭವದ ಉದಾಹರಣೆಗಳನ್ನು ಕಾಣಬಹುದಾಗಿದೆ. ಕೇರಳದಲ್ಲಿ ನಾಯನಾರ್ ಸರ್ಕಾರ ರೂಪಿಸಿದ

ಪುಟ 3 ಕ್ಕೆ

ಸ್ನೇಹ ಸಂಗಮದಲ್ಲಿ ದ್ವೇಷ ಹಬ್ಬಿಸಲು ಯತ್ನಿಸಿದ ಬಜರಂಗಿಗಳು

ಧರ್ಮದ ನೆಪದಲ್ಲಿ ಮಾನವ ವಿರೋಧಿಯಾದ, ಶಾಂತಿ-ಸಾಮರಸ್ಯ ಕಲಕುವ ಸಂಘ ಪರಿವಾರದ ಮುಖವಾಡ ದಿನದಿನಕ್ಕು ಕಳಚಿ ಬೀಳುತ್ತಿರುವುದರಿಂದ ಹತಾಶರಾದ ಚಡ್ಡಿ ಪಡೆ ದೈಹಿಕ ಆಕ್ರಮಣಕ್ಕೆ ಇಳಿದಿದೆ. ಆದರೆ ಜನರೇ ಇವರಿಗೆ ಬುದ್ಧಿ ಕಳಿಸುತ್ತಿದ್ದಾರೆ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕೋಮುಸೌಹಾರ್ದತೆಯನ್ನು ನಾಶಪಡಿಸಲು ಸಂಘಪರಿವಾರವು ನಿರಂತರವಾಗಿ ಪ್ರಯತ್ನಿಸುತ್ತಿದೆ. ಒಂದಲ್ಲ ಒಂದು ಕ್ಷುಲ್ಲಕ ವಿಷಯಗಳನ್ನೆತ್ತಿ ಹಿಂದೂ ಮುಸ್ಲಿಂ ಐಕ್ಯತೆಯನ್ನು ಒಡೆಯುವ ಮೂಲಕ ಫ್ಯಾಸಿಸ್ಟ್ ಕೃತ್ಯವನ್ನು ನಡೆಸುತ್ತಿದೆ. ಆದಿ ಉಡುಪಿ ಬೆತ್ತಲೆ ಪ್ರಕರಣವು ರಾಜ್ಯದೆಲ್ಲೆಡೆ ಸುದ್ದಿಯಾಗಿ ಸಂಘಪರಿವಾರವು ಸಮಾಜದ ಎದುರು ಬೆತ್ತಲೆಯಾಗಿದ್ದರೂ, ಗೋಹತ್ಯೆ ನಡೆದರೆ ಹಳ್ಳಿ ಹಳ್ಳಿಗಳಲ್ಲಿ ಬೆತ್ತಲೆ ಪ್ರಕರಣ ನಡೆಯಲಿದೆ ಎಂದು ಬಹಿರಂಗವಾಗಿ ಹೇಳಿಕೆ ನೀಡುತ್ತಿದ್ದಾರೆ. ಜಿಲ್ಲೆಯಲ್ಲಿ ಇನ್ನು ಮುಂದಕ್ಕೆ ಯಾವ್ಯಾವ ಪ್ರಕರಣಗಳು ನಡೆಯಲಿಕ್ಕಿಲ್ಲ ಎಂಬ ಭೀತಿ ಜನರಲ್ಲಿ ಮನೆ ಮಾಡಿದೆ.

ಇಂತಹ ಕೋಮುವಾದಿಗಳಿಗೆ ಸವಾಲಾಗಿ ಜಿಲ್ಲೆಯ ಜನತೆಯ ಪ್ರೀತಿ ವಿಶ್ವಾಸವನ್ನು ಗಳಿಸಿದ ಡಿವೈಎಫ್ಐ ಪರ್ಯಾಯ ಶಕ್ತಿಯಾಗಿ ರೂಪುಗೊಳ್ಳುತ್ತಿದೆ. ಸಂಘ ಪರಿವಾರವು ಹಳ್ಳಿಹಳ್ಳಿಗಳಲ್ಲಿ ದ್ವೇಷ ಹಬ್ಬಿಸಿದರೆ, ಡಿವೈಎಫ್ಐ ಸ್ನೇಹ ಸಂಗಮದಂತಹ ಸೌಹಾರ್ದ ಸಮಾವೇಶಗಳನ್ನು ನಡೆಸಿ ಪ್ರೀತಿ ಹಂಚುವ ಕೆಲಸವನ್ನು ವ್ಯವಸ್ಥಿತವಾಗಿ ನಡೆಸುತ್ತಿದೆ. ಈ ಮೂಲಕ ಡಿವೈಎಫ್ಐ ಸಂಗಪರಿವಾರದ ಪ್ರತಿಯೊಂದು ದುಷ್ಕೃತ್ಯಗಳಿಗೂ ಸಿಂಹಸ್ವಪ್ನವಾಗಿ ಕಾಡುತ್ತಾ ಜನತೆಯನ್ನು ಸಂಘಪರಿವಾರದಿಂದ ದೂರ ಸರಿಯುವಂತೆ ಮಾಡುವಲ್ಲಿ ಪ್ರಯತ್ನಿಸುತ್ತಿದೆ.

ಅಂದು ಮೇ-1, ವಿಶ್ವದೆಲ್ಲೆಡೆ ದುಡಿಯುವ ವರ್ಗದ ಜನರಲ್ಲಿ ಮೇ ದಿನಾಚರಣೆಯ ಸಂಭ್ರಮ ಅದೇ ದಿನ ಸಂಜೆ ಹರೇಕಳ ಎಂಬ ಗ್ರಾಮದ ಕಡಲ ಕಿನಾರೆಯಲ್ಲಿ ಡಿವೈಎಫ್ಐ ಆಶ್ರಯದಲ್ಲಿ ಸ್ನೇಹಸಂಗಮ ಕಾರ್ಯಕ್ರಮ ಸುಮಾರು 600ಕ್ಕು ಮಿಕ್ಕಿದ ಯುವಜನತೆ ಸೇರಿದ ಕಾರ್ಯಕ್ರಮದಲ್ಲಿ ಪ್ರೊ.ಹಯವದನ ಉಪಾಧ್ಯ (ಆಯುಕ್ತ ಕಾಲೇಜ್ ಅಧ್ಯಾಪಕರ ಸಂಘಟನೆ)ರವರಿಂದ ಉದ್ಘಾಟನಾ ಮಾತುಗಳು ಪ್ರಮುಖ ಭಾಷಣಕಾರರಾಗಿ ಡಿವೈಎಫ್ಐ ಮಾಜಿ ರಾಜ್ಯ ಕಾರ್ಯದರ್ಶಿ ಎಸ್.ವೈ.ಗುರುಶಾಂತ್‌ರವರು ಭಾಗವಹಿಸಿದ್ದರು. ಡಿವೈಎಫ್ಐ ಜಿಲ್ಲಾಧ್ಯಕ್ಷರಾದ ಸುನಿಲ್‌ಕುಮಾರ್ ಬಜಾಲ್‌ರವರು ಡಿವೈಎಫ್ಐನ ಧ್ಯೇಯ-ಹೋರಾಟಗಳನ್ನು ವಿವರಿಸುತ್ತಾ ಜಿಲ್ಲೆಯಲ್ಲಿ ಮಿತಿ ಮೀರುತ್ತಿರುವ ಕೋಮುವಾದಿಗಳ ಅಟ್ಟಹಾಸವನ್ನು ಬಯಲಿಗೆಳೆದರು. ಆದಿ ಉಡುಪಿ ಪ್ರಕರಣದ ಬಗ್ಗೆ ಮಾತಾಡುತ್ತಿದ್ದಂತೆ, ಪೂರ್ವಯೋಜಿತ



ತಯಾರಿಯಂತೆ ವೇದಿಕೆಯ ಪಕ್ಕದಲ್ಲಿ ಗೂಡಂಗಡಿಯೊಂದರಲ್ಲಿ ಅವಿತು ಕುಳಿತಿದ್ದ 15-20 ಮಂದಿ ಭಜರಂಗಿಗಳು ವೇದಿಕೆಯತ್ತ ಧಾವಿಸಿ ಸೋಡಾಬಾಟ್ಲಿ, ಕಲ್ಲು ತೂರಾಟ ನಡೆಸಿದರು. ಇಡೀ ಕಾರ್ಯಕ್ರಮವನ್ನು ಅಸ್ತವ್ಯಸ್ತಗೊಳಿಸಬೇಕೆಂದು ಮೊದಲೇ ತಯಾರಿ ನಡೆಸಿದ ಭಜರಂಗಿಗಳನ್ನು ಡಿವೈಎಫ್ಐ ನಾಯಕರು ಸಮಾಧಾನ ಪಡಿಸಲೆತ್ನಿಸಿದರು. ಆಗಲೂ ಕಲ್ಲು ತೂರಾಟ ನಡೆದು 4-5 ಮಂದಿ ಡಿವೈಎಫ್ಐ ಕಾರ್ಯಕರ್ತರು ಗಾಯಗೊಂಡರು. ಇದರಿಂದ ಕುಪಿತಗೊಂಡ ನೆರೆದಿದ್ದ ಜನರು ಭಜರಂಗಿಗಳನ್ನು ಬೆನ್ನಟ್ಟಿದರು. ಮತ್ತೆ ಪರಿಸ್ಥಿತಿ ಯಥಾಸ್ಥಿತಿಗೆ ಬಂದು ಎಸ್.ವೈ. ಗುರುಶಾಂತ್‌ರವರು 45 ನಿಮಿಷಗಳ ಕಾಲ ಕೋಮುವಾದಿಗಳ ಹುನ್ನಾರವನ್ನು ಬಯಲಿಗೆಳೆಯುತ್ತಾ, "ಪ್ರತ್ಯೇಕತಾವಾದಿಗಳ, ಭಯೋತ್ಪಾದಕರ, ಉಗ್ರಗಾಮಿಗಳ ವಿರುದ್ಧ ದೇಶದೆಲ್ಲೆಡೆ ಸಮರಧೀರ ಹೋರಾಟ ನಡೆಸಿ ಸಾವಿರಾರು ಕಾರ್ಯಕರ್ತರನ್ನು ಹುತಾತ್ಮರನ್ನಾಗಿಸಿದ ಡಿವೈಎಫ್ಐಗೆ ಇದು ಹೊಸತಲ್ಲ. ಕೋಮುವಾದಿ ಶಕ್ತಿಗಳಿಗೂ ತಕ್ಕ ಪಾಠ ಕಲಿಸಲು ಮುಂದಾಗುವೆವು" ಎಂಬ ಎಚ್ಚರಿಕೆಯನ್ನು ನೀಡಿದರು. ಕಾರ್ಯಕ್ರಮವು ಮುಂದುವರಿಯಿತು. ಮೊದಲೇ ನಿಗದಿಪಡಿಸಿದಂತೆ ಸಂಗೀತ ರಸಮಂಜರಿ ಕಾರ್ಯಕ್ರಮವೂ ನಡೆಯುವ ಮೂಲಕ ಕೋಮುವಾದಿಗಳಿಗೆ ಸವಾಲಾಯಿತು. ಇದರಿಂದ ತೀರಾ ಹತಾಶೆಗೊಂಡ ಭಜರಂಗಿಗಳು ಜಯರಾಮ ಎಂಬವನನ್ನು ಆಸ್ಪತ್ರೆಗೆ ಸೇರಿಸಿ ಡಿವೈಎಫ್ಐ ಜಿಲ್ಲಾಧ್ಯಕ್ಷರಾದ ಸುನಿಲ್‌ಕುಮಾರ್‌ರವರನ್ನು ಸೇರಿಸಿ 15 ಮಂದಿ ಡಿವೈಎಫ್ಐ ಕಾರ್ಯಕರ್ತರ ವಿರುದ್ಧ ಸುಳ್ಳು ಮೊಕದ್ದಮೆ ದಾಖಲಿಸಿದರು. ನಿಜವಾಗಿಯೂ ಗಾಯಗೊಂಡ ಡಿವೈಎಫ್ಐ ಕಾರ್ಯಕರ್ತರು ಸರಕಾರಿ ಆಸ್ಪತ್ರೆಗೆ ದಾಖಲಾಗಿದ್ದರು. ಸ್ಥಳೀಯ ಬಿಜೆಪಿ ಪಂಚಾಯತ್ ಸದಸ್ಯ ಚಿತ್ತರಂಜನ್ ಶೆಟ್ಟಿ ಸೇರಿದಂತೆ 14 ಮಂದಿಯ ವಿರುದ್ಧ ದೂರು ನೀಡಲಾಗಿದೆ.

ಒಟ್ಟಿನಲ್ಲಿ ಸ್ನೇಹಸಂಗಮ ಕಾರ್ಯಕ್ರಮದಲ್ಲಿ ದ್ವೇಷ ಹಬ್ಬಿಸಲು ಹೋಗಿ ವಿನಾಃ ಕಾರಣ ಒದೆ ತಿಂದು ಇಂಗು ತಿಂದ ಮಂಗನಂತಾದ ಭಜರಂಗಿಗಳು ಇನ್ನಾದರೂ ಪಾಠ ಕಲಿಯಲಿ.

ವರದಿ : **'ಸಿಂಚನ' ಮಂಗಳೂರು**

...ಸ್ವಸಹಾಯ ಗುಂಪುಗಳು

→ 'ಕುಟುಂಬಶ್ರೀ' ಕಾರ್ಯಕ್ರಮ ಅಂತಹ ಒಂದು ಉದಾಹರಣೆಯಾಗಿದೆ. ಸರ್ಕಾರ ಪ್ರಾಯೋಜಿತ ಮಾರುಕಟ್ಟೆ ವ್ಯವಸ್ಥೆಯಿಂದಾಗಿ ಕೇರಳದ ಮಹಿಳಾ ಸ್ವಸಹಾಯ ಗುಂಪು ಆರ್ಥಿಕವಾಗಿ ಸದೃಢವಾಗುವಂತಾಯಿತು ಮತ್ತು ಮಹಿಳಾ ಸದಸ್ಯರ ಸಬಲೀಕರಣ ಸಾಧ್ಯವಾಯಿತು. ಪಶ್ಚಿಮ ಬಂಗಾಳದಲ್ಲಿ ಒಂದು ದಾಖಲೆಯ ಅನುಭವವಿದೆ. ಅಲ್ಲಿ 1,15,000 ಮಹಿಳಾ ಸ್ವಸಹಾಯ ಗುಂಪುಗಳ ರಚನೆಯಗಿದೆ. ಮಿಡ್ನಾಪುರ ಜಿಲ್ಲೆಯೊಂದರಲ್ಲೇ 30,000 ಮಹಿಳಾ ಸ್ವಸಹಾಯ ಗುಂಪುಗಳಲ್ಲಿ ಸ್ಥಳೀಯ ಮಾರುಕಟ್ಟೆಗಳಲ್ಲಿ ಅವುಗಳ ಉತ್ಪನ್ನಗಳ ಮಾರಾಟ, ಸರ್ಕಾರದ ನೆರವಿನಿಂದಾಗಿ ಯಶಸ್ವಿಯಾಗಿ ಮುಂದುವರೆಯುತ್ತಿದೆ. ಬರ್ದ್ವಾನ್ ಜಿಲ್ಲೆಯಲ್ಲಿ 40,000 ಮಹಿಳಾ ಸ್ವಸಹಾಯ ಗುಂಪುಗಳು ಯಶಸ್ವಿಯಾಗಿ ಕಾರ್ಯನಿರ್ವಹಿಸುತ್ತಿವೆ.

ಸ್ವಸಹಾಯ ಗುಂಪುಗಳ ಯೋಜನೆಯನ್ನು ಬಲಪಡಿಸುವ ಮೂಲಕ ವಿಶ್ವಬ್ಯಾಂಕ್ ಮಾದರಿಯ ಅಭಿವೃದ್ಧಿ ದಾರಿಯನ್ನು ಬಲಪಡಿಸಿದಂತಾಗುವುದಲ್ಲವೇ ಎಂಬ ಅನುಮಾನ ಉದ್ಭವಿಸುವುದು ಸಹಜವಾಗಿದೆ. ಈ ಯೋಜನೆಯ ಇತಿಮಿತಿಗಳನ್ನು ಗಮನದಲ್ಲಿಟ್ಟುಕೊಂಡು ಅದನ್ನು ಹೇಗೆ ಜನಹಿತಕ್ಕಾಗಿ ಬಳಸಿಕೊಳ್ಳಬಹುದೆಂಬುದು ಇಲ್ಲಿ ಮುಖ್ಯವಾಗಬೇಕು. ಗ್ರಾಮೀಣ ಲೇವಾದೇವಿಗಾರರ ಹಿಡಿತದಿಂದ ಮಹಿಳೆಯರನ್ನು ಹೊರತರಲು ಇದು ಸ್ವಲ್ಪಮಟ್ಟಿಗೆ ನೆರವಾಗಬಹುದು. ಸರ್ಕಾರದ ಪ್ರಾಮಾಣಿಕ ನೆರವು ದೊರೆತರೆ, ಮಹಿಳೆಯರು ಸ್ವಲ್ಪ ಮಟ್ಟಿಗಾದರೂ ತಮ್ಮ ಆದಾಯವನ್ನು ಹೆಚ್ಚಿಸಿಕೊಳ್ಳಬಹುದು. ಆದರೆ ಸ್ವಸಹಾಯ ಗುಂಪುಗಳಿಗೆ ಪ್ರೋತ್ಸಾಹ ಕೊಡುವ ಹೆಸರಿನಲ್ಲಿ ಹೆಚ್ಚೆಚ್ಚು ಖಾಸಗೀಕರಣಕ್ಕೆ ದಾರಿ ಮಾಡಿಕೊಡುವುದನ್ನು ಹಾಗೂ ಬಹುರಾಷ್ಟ್ರೀಯ ಕಂಪನಿಗಳ ಉತ್ಪನ್ನಗಳ ಮಾರಾಟಕ್ಕೆ ಬಳಸಿಕೊಳ್ಳುತ್ತಿರುವುದನ್ನು ದೃಢವಾಗಿ ವಿರೋಧಿಸಬೇಕಾಗಿದೆ. ಸ್ವಸಹಾಯ ಗುಂಪುಗಳಿಗೆ ಬ್ಯಾಂಕುಗಳು ನೀಡುತ್ತಿರುವ ಸಾಲದ ಬಡ್ಡಿದರಗಳನ್ನು ಇಳಿಸಬೇಕೆಂದೂ, ಸ್ವಸಹಾಯ ಗುಂಪುಗಳು ಉತ್ಪಾದನಾ ಘಟಕಗಳಾಗಿ ಯಶಸ್ವಿಯಾಗಿ ಕಾರ್ಯನಿರ್ವಹಿಸುವಂತಾಗಲು ಅಗತ್ಯ ತರಬೇತಿ, ಮಾರುಕಟ್ಟೆ ನೆರವು ಮತ್ತು ಕಚ್ಚಾ ಪದಾರ್ಥಗಳನ್ನು ಒದಗಿಸಬೇಕೆಂದೂ ಒತ್ತಾಯಿಸಬೇಕಾಗಿದೆ. ಮಹಿಳೆಯರನ್ನು ಸಂಘಟಿಸುವಲ್ಲಿ, ಅವರಲ್ಲಿ ಅವರ ಹಕ್ಕುಗಳ ಬಗ್ಗೆ ಜಾಗೃತಿ ಮೂಡಿಸುವಲ್ಲಿ ನೆರವಾಗಬಲ್ಲ ಈ ಕಾರ್ಯಕ್ರಮದ ಸದುಪಯೋಗ ಪಡೆಯಲು ಸಾಧ್ಯವಾಗಬೇಕು.

ಸರ್ಕಾರಿ ನೌಕರರ ಯಶಸ್ವಿ ರ್‍ಯಾಲಿ:

ಸಂಘಟನೆಗೆ ತಿರುಗುಬಿಂದು

ರಾಜ್ಯದ ವಿವಿಧ ಜಿಲ್ಲೆಗಳಿಂದ ಸಾವಿರಾರು ಸರ್ಕಾರಿ ನೌಕರರು ಅಖಿಲ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಒಕ್ಕೂಟದ ನೇತೃತ್ವದಲ್ಲಿ ಏಪ್ರೀಲ್ 26 ರಂದು ಬೆಂಗಳೂರಿನಲ್ಲಿ ನಡೆದ ಬೃಹತ್ ರ್‍ಯಾಲಿಯಲ್ಲಿ ಪಾಲ್ಗೊಂಡಿದ್ದರು. ಗಾಂಧಿ ನಗರದಲ್ಲಿರುವ ಒಕ್ಕೂಟದ ಕಛೇರಿಯಿಂದ ಕಲಾ ಕಾಲೇಜ್ ಮೈದಾನದವರೆಗೆ ಈ ರ್‍ಯಾಲಿ ನಡೆಯಿತು. ಈ ರ್‍ಯಾಲಿಯ ಬಹಿರಂಗ ಸಭೆಯನ್ನುದ್ದೇಶಿಸಿ ಸಿಪಿಐ(ಎಂ) ಶಾಸಕರಾದ ಜಿ.ವಿ.ಶ್ರೀರಾಮರೆಡ್ಡಿ ಮಾತನಾಡಿ ಹಾರ್ನಳ್ಳಿ ರಾಮಸ್ವಾಮಿ ಅವರು ನೌಕರರ ಹಿತಕ್ಕೆ ಧಕ್ಕೆಯಾಗುವಂತಹ ವರದಿ ನೀಡಿದಾಗಲೂ ಸಿಪ್ಪೇಗೌಡರು ಯಾರ ಪರವಾಗಿ ನಿಂತಿದ್ದರು ಎಂದು ಪ್ರಶ್ನಿಸಿದರು. ಕೇಂದ್ರ ಹಾಗೂ ರಾಜ್ಯ ಸರ್ಕಾರಿ ನೌಕರರಲ್ಲಿ ವೇತನ ತಾರತಮ್ಯ ಹೋಗಲಾಡಿಸಬೇಕು. ಸರ್ಕಾರಿ ನೌಕರರು ಕೇವಲ ತಮ್ಮ ಸಂಬಳ ಸವಲತ್ತುಗಳ ಬಗ್ಗೆ ಮಾತ್ರ ದನಿ ಎತ್ತದೆ ವಿವಿಧ ಸಾಮಾಜಿಕ ಸಮಸ್ಯೆಗಳ ಬಗ್ಗೆಯೂ ದನಿ ಎತ್ತಬೇಕು ಎಂದು ಕರೆ ನೀಡದರು.

ಒಕ್ಕೂಡಟ ಕೇಂದ್ರ, ಮುಖಂಡರಾದ ಸುಕುಮಲ್ ಸೇನ್ ಮಾತಾನಾಡಿ ಮುಷ್ಕರ ಪ್ರತಿಭಟನೆ ನೌಕರರ ಹಕ್ಕು. ಇದನ್ನು ಕಸಿದುಕೊಳ್ಳಲು ಯಾರಿಂದಲೂ ಸಾಧ್ಯವಿಲ್ಲ. ಆದರೆ ಈ ರಾಜ್ಯದಲ್ಲಿ ಸಿಪ್ಪೇಗೌಡರ ನೇತೃತ್ವದ ಸಂಘ ಅನೇಕ ಸಂದರ್ಭದಲ್ಲಿ ನೌಕರರ ಹಿತ ಕಾಯುವಲ್ಲಿ ವಿಫಲವಾಗಿದೆ. ಆದ್ದರಿಂದ ಅಖಿಲ ಕರ್ನಾಟಕ ಸರ್ಕಾರಿ ನೌಕರರ ಸಂಘಕ್ಕೆ ಮಾನ್ಯತೆ ನೀಡಬೇಕೆಂದು ಒತ್ತಾಯಿಸಿದರು. ರಾಜ್ಯ ಸರ್ಕಾರಿ ಸಂಘದ ಕೇಂದ್ರ ಸಮಿತಿ ಅಧ್ಯಕ್ಷರಾದ ಆರ್.ಜಿ.ಕಾರ್ನಿಕರ್ ರವರು ಮಾತಾನಾಡಿ ಖಾಸಗಿಕರಣದ ವಿರುದ್ದ ನೌಕರರು ಹೋರಾಟ ನಡೆಸಬೇಕೆಂದು ಕರೆ ನೀಡದರು.



ಉತ್ಸಾಹದಿಂದ ಸಾಗಿ ಬಂದು ಸಾವಿರಾರು ನೌಕರರು

ನೌಕರರ ಸಂಘದ ಮಾಜಿ ಅಧ್ಯಕ್ಷರು ಹಾಗೂ ಶಾಸಕರಾದ ಎಂ.ಟಿ.ಕೃಷ್ಣಪ್ಪ ಮಾತಾನಾಡಿ ನೌಕರರ ಸಂಘ ವಿಫಲವಾಗಿರುವುದರಿಂದ ಒಕ್ಕೂಟಕ್ಕೆ ತಾಲೂಕು ಹಾಗೂ ಜಿಲ್ಲಾ ಮಟ್ಟದಲ್ಲಿ ವ್ಯಾಪಕ ಬೆಂಬಲ ವ್ಯಕ್ತವಾಗಿದೆ. ನೌಕರರ ಸಂಘದ ಅಧ್ಯಕ್ಷರಾದರವರು ಕೇವಲ ವರ್ಗಾವಣೆ ದಂಧೆಯಲ್ಲಿ ತೊದಗಿದ್ದರೆ ನೌಕರರ ವಿರುದ್ದ ಕಾನೂನುಗಳು ಜಾರಿಯಾದರೂ ದನಿ ಎತ್ತಲಿಲ್ಲ ಎಂದು ಟೀಕಿಸಿಡರು. ರಾಜ್ಯ ಸರ್ಕಾರಿ ನೌಕರರ ಒಕ್ಕೂಟದ ಅಧ್ಯಕ್ಷರಾದ ಯು.ಡಿ. ನರಸಿಂಹಯ್ಯ ಮಾತಾನಾಡಿ ರಾಜಕೀಯ ಪಕ್ಷಗಳ ಕಾರ್ಯಕರ್ತರಾದಿದ್ದವರು ಸಚಿವಾಲಯ ನೌಕರರಾಗಿ ಸೇವೆ ಖಾಯಂ ಮಾಡಿಸಿಕೊಳ್ಳುತ್ತಾರೆ, ಆದರೆ ದಿನಗೂಲಿ ನೌಕರರನ್ನು ಖಾಯಂ ಮಾಡಲು ಸಾಧ್ಯವಿಲ್ಲ ಎಂದು ಸರ್ಕಾರ ನ್ಯಾಯಾಲಯದಲ್ಲಿ ಪ್ರಮಾಣ ಪತ್ರ ಸಲ್ಲಿಸುತ್ತದೆ. ಇದರರ್ಥ ಏನೂ? ಎಂದು ಪ್ರಶ್ನಿಸಿದರು. ಇದೇ ಸಂದರ್ಭದಲ್ಲಿ ನೌಕರರ ಬೇಡಿಕೆಗಳಾದ ಹುದ್ದೆಗಳ ಕಡಿತ ಕೈಬಿಡಬೇಕು. ನೌಕರರ ವೇತನ ಹೆಚ್ಚಿಸಬೇಕು, ಮುಷ್ಕರದ ಹಕ್ಕು ನೀಡಬೇಕು, ವೇತನ ಆಯೋಗದ ಬದಲು ತುಟ್ಟಿಭತ್ಯೆ ವಿಲೀನ ಮಾಡಬೇಕು, ಗ್ರಾಮ ಪಂಚಾಯಿತಿ ಕಾರ್ಯದರ್ಶಿಗಳ ಹುದ್ದೆ ಉನ್ನತಿಕರಿಸಬೇಕು. ವರ್ಗಾವಣೆಯಲ್ಲಿ ಪಾರದರ್ಶಕತೆ ಇರಬೇಕು. ಮಹಿಳಾ ಮಹಿಳಾ ಮೀಸಲಾತಿ ಜಾರಿಗೆ ತರಬೇಕು ಇತ್ಯಾದಿ ಬೇಡಿಕೆಯ ಪತ್ರವನ್ನು ಕಾನೂನು ಸಚಿವರಾದ ಹೆಚ್.ಕೆ.ಪಾಟೀಲರಿಗೆ ಸಲ್ಲಿಸಿದರು.

ವೇದಿಕೆಯಲ್ಲಿ ಜಮ್ಮು ಮತ್ತು ಕಾಶ್ಮೀರದ ನೌಕರರ ಸಂಘದ ಅಧ್ಯಕ್ಷರಾದ ಮುಕಬುಲ್ ಅಹ್ಮದ್, ಬಿಹಾರದ ಅಧ್ಯಕ್ಷ ಮಂಜುಲ್ ಕುಮಾರ್ ದಾಸ್, ಎಲ್ಐಸಿ ಸಂಘಟನೆಯ ಅಧ್ಯಕ್ಷೆ ಗೀತಾ, ಸಿಐಟಿಯು ಕಾರ್ಯದರ್ಶಿ ಪ್ರಸನ್ನಕುಮಾರ್, ಬ್ಯಾಂಕ್ ನೌಕರರ ಸಂಘದ ಶೆಣೈ, ನೌಕರರ ಒಕ್ಕೂಡದ ಪ್ರಧಾನ ಕಾರ್ಯದರ್ಶಿ ಸಚ್ಚಿದಾನಂದಮೂರ್ತಿ, ಉಪಾಧ್ಯಕ್ಷ ಮಹಾದೇವಯ್ಯ [illegible] ಉಪಸ್ಥಿತ[illegible]ದರು.



ಬೆಳ್ಳಿಹಬ್ಬ - ಹುತಾತ್ಮ ಭಗತ್‌ಸಿಂಗ್ ದಿನಾಚರಣೆ ಅಂಗವಾಗಿ ನೂರಾರು ಯುವಜನರಿಂದ ರಕ್ತದಾನ

25 ಹೋರಾಟ ತ್ಯಾಗ ಮುನ್ನಡೆ DYFI ಬೆಳ್ಳಿಹಬ್ಬ 1980-2005

ಭಗತ್ ಸಿಂಗ್ ಮತ್ತು ಸಂಗಾತಿಗಳು ಹುತಾತ್ಮರಾದ ತ್ಯಾಗ, ಬಲಿದಾನಗಳ ನೆನಪಿನಲ್ಲಿ ಸೌಹಾರ್ದತೆಗಾಗಿ ರಕ್ತದಾನ ಶಿಬಿರವನ್ನು ಡಿವೈಎಫ್ಐ ಸಂಘಟಿಸಿತ್ತು. ತಾನೇನು ಕಡಿಮೆ ಎಂದು ಭಜರಂಗದಳದ ದಂಡು ಮುತಾಲಿಕನನ್ನು ಕರೆಸಿ ರಕ್ತಹರಿಸುವ ಕಾರ್ಯಕ್ರಮ ನಡೆಸಿತ್ತು.....

ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಷನ್ (DYFI)ನ ಬೆಳ್ಳಿಹಬ್ಬದ ಕಾರ್ಯಕ್ರಮ ಹಾಗೂ ಹುತಾತ್ಮ ಭಗತ್‌ಸಿಂಗ್ ದಿನಾಚರಣೆ ಅಂಗವಾಗಿ ರಾಜ್ಯದ ನೂರಾರು ಯುವಜನ ರಕ್ತದಾನ ಮಾಡಿದರು ಮತ್ತು ಸುಮಾರು ಒಂದು ಸಾವಿರಕ್ಕಿಂತ ಅಧಿಕ ಯುವಜನರು ರಕ್ತಗುಂಪು ಪರೀಕ್ಷೆಗೆ ಒಳಗಾದರು.

ಬೆಳ್ಳಿಹಬ್ಬದ ಅಂಗವಾಗಿ ಈ ವರ್ಷದಲ್ಲಿ ದೇಶಾದ್ಯಂತ 5 ಲಕ್ಷ ಯುವಜನರಿಂದ ರಕ್ತದಾನ ನಡೆಸಲು DYFI ಕೇಂದ್ರಸಮಿತಿ ತೀರ್ಮಾನಿಸಿದೆ. ಕರ್ನಾಟಕದಲ್ಲಿ 5 ಸಾವಿರ ಯುವಜನರಿಂದ ರಕ್ತದಾನ ಮಾಡಿಸುವ ಗುರಿಯನ್ನು DYFI ರಾಜ್ಯಸಮಿತಿ ಹೊಂದಿ ಈಗಾಗಲೇ ಹಲವೆಡೆ 'ಬೆಳ್ಳಿಹಬ್ಬ ಆಚರಣಾ' ಸಮಿತಿಗಳನ್ನು ರಚಿಸಲಾಗಿದೆ. ಬೆಳ್ಳಿಹಬ್ಬದ ಉದ್ಘಾಟನೆಯ ಭಾಗವಾಗಿ 'ರಕ್ತದಾನ' ಶಿಬಿರವನ್ನು ರಾಜ್ಯದ ಕೆಳಗಂಡ ಪ್ರದೇಶದಲ್ಲಿ ನಡೆಸಲಾಗಿದ್ದು ಸುಮಾರು 500ಕ್ಕಿಂತ ಅಧಿಕ ಯುವಜನರು ರಕ್ತದಾನ ಮಾಡಿದರು.

ಬೆಂಗಳೂರು : DYFI ಬೆಂಗಳೂರು ಜಿಲ್ಲಾ ಸಮಿತಿ ಹಾಗೂ ಬೆಳ್ಳಿಹಬ್ಬ ಆಚರಣಾ ಸಮಿತಿ ಆಶ್ರಯದಲ್ಲಿ ಏಪ್ರಿಲ್-3 ರಂದು ಹಮ್ಮಿಕೊಳ್ಳಲಾಗಿದ್ದು ರಕ್ತದಾನ ಶಿಬಿರದಲ್ಲಿ 111 ಯುವಜನರು ರಕ್ತದಾನ ಮಾಡಿದರು. ಬೆಳ್ಳಿಹಬ್ಬ ಆಚರಣಾ ಸಮಿತಿಯ ಕಾರ್ಯಾದ್ಯಕ್ಷರು ಹಾಗೂ ಎಐಎಲ್‌ಯು ಮುಖಂಡರಾದ ಕೆ.ಆರ್.ವೆಂಕಟೇಶ್‌ಗೌಡ ಕಾರ್ಯಕ್ರಮ ಉದ್ಘಾಟಿಸಿದರು. ಮುಖ್ಯ ಅತಿಥಿಗಳಾಗಿ DYFI ರಾಜ್ಯ ಕಾರ್ಯದರ್ಶಿ ಕೆ.ಮಹಾಂತೇಶ್, ಮಾಜಿ ಮುಖಂಡರಾದ ನಾರಾಯಣಸ್ವಾಮಿ, ಎಸ್.ಶಿವರಾಂ, ಮಹಾದೇವ್ ಕುಮಾರ್, ಗೋಪಾಲಕೃಷ್ಣ ಭಾಗವಹಿಸಿದ್ದರು. ಹುತಾತ್ಮ ಭಗತ್‌ಸಿಂಗ್ ರಕ್ತದಾನಿಗಳ ಕ್ಲಬ್, ಉದ್ಘಾಟನೆಯನ್ನು ಸಮಾಜ ಸೇವಕರಾದ ಬಿ.ಜಿ.ರಾಮಕೃಷ್ಣ ನೆರವೇರಿಸಿದರು. ಅದ್ಯಕ್ಷತೆಯನ್ನು ಜಿಲ್ಲಾದ್ಯಕ್ಷ ಎನ್.ಲಕ್ಷ್ಮಣ್‌ಕುಮಾರ್ ವಹಿಸಿದ್ದರು.

ದೊಡ್ಡ ಬಳ್ಳಾಪುರ : ಮಾರ್ಚ್ 27ರಂದು ದೊಡ್ಡ ಬಳ್ಳಾಪುರ ತಾಲೂಕು ಸಮಿತಿ ಮತ್ತು ಬೆಳ್ಳಿಹಬ್ಬ ಆಚರಣಾ ಸಮಿತಿ ನೇತೃತ್ವದಲ್ಲಿ ನಡೆಸಲಾದ ರಕ್ತದಾನ ಶಿಬಿರದಲ್ಲಿ 85 ಯುವಜನರು ರಕ್ತದಾನ ಮಾಡಿದರು ಮತ್ತು ಸುಮಾರು 104 ಜನರು 'ರಕ್ತದಾನಕ್ಲಬ್' ಸದಸ್ಯರಾದರು. ಶಿಬಿರವನ್ನು ಶಾಸಕರಾದ ನರಸಿಂಹಸ್ವಾಮಿಯವರು ಉದ್ಘಾಟಿಸಿದರು ಮುಖ್ಯ ಅತಿಥಿಗಳಾಗಿ DYFI ರಾಜ್ಯ ಕಾರ್ಯದರ್ಶಿ ಕೆ.ಮಹಾಂತೇಶ್ ನೇಕಾರ ಮುಖಂಡರಾದ ಹೇಮಂತರಾಜ್, ಸ್ವಾತಂತ್ರ್ಯ ಹೋರಾಟಗಾರರಾದ ಮುಗುವಾಳಪ್ಪ ಜಿಲ್ಲಾದ್ಯಕ್ಷ ಎಸ್.ಲಕ್ಷ್ಮಣ್‌ಕುಮಾರ್, ಆಗಮಿಸಿ ಮಾತನಾಡಿದರು. ಅಧ್ಯಕ್ಷತೆಯನ್ನು ರಾಜ್ಯಪ್ರಶಸ್ತಿ ವಿಜೇತ ಶಿಕ್ಷಕರು ಹಾಗೂ ಬೆಳ್ಳಿಹಬ್ಬ ಆಚರಣಾ ಸಮಿತಿಯ ಗೌರವಾಧ್ಯಕ್ಷರಾದ ಕೆ.ಮಹಾಲಿಂಗಯ್ಯನವರ ವಹಿಸಿದ್ದರು.

ತುಮಕೂರು : ಮಾರ್ಚ್ 23ರಂದು ತುಮಕೂರಿನಲ್ಲಿ ಜಿಲ್ಲಾ ಸಮಿತಿ ಸಂಘಟಿಸಿದ್ದ ರಕ್ತದಾನಶಿಬಿರದಲ್ಲಿ 10 ಯುವಜನರು ರಕ್ತದಾನ ಮಾಡಿದರು. ಪದವಿಪೂರ್ವ ಶಿಕ್ಷಣ ಇಲಾಖೆಯ ಉಪನಿರ್ದೇಶಕರಾದ ದೊರೆರಾಜು ಶಿಬಿರವನ್ನು ಉದ್ಘಾಟಿಸಿದರು. ಮುಖ್ಯ ಅತಿಥಿಗಳಾಗಿ ಸ್ವತ: 37 ಬಾರಿ ರಕ್ತದಾನ ಮಾಡಿರುವ ಸಿದ್ದಗಂಗ ಪಿ.ಯು.ಕಾಲೇಜಿನ ಪ್ರಾಂಶುಪಲರಾದ ಎನ್.ಪಿ. ರವೀಂದ್ರನಾಥ, DYFI ರಾಜ್ಯ ಅದ್ಯಕ್ಷರಾದ ಕೆ.ಎನ್.ಉಮೇಶ್, ಜಿಲ್ಲಾ ಆಸ್ಪತ್ರೆಯ ಸರ್ಜನ್ ಮೃತ್ಯುಂಜಯ ಪಾಲ್ಗೊಂಡಿದ್ದರು.



ದಾಂಡೇಲಿ : ಉತ್ತರಕನ್ನಡ ಜಿಲ್ಲೆಯ ದಾಂಡೇಲಿ ನಗರ ಸಮಿತಿ ಆಶ್ರಯದಲ್ಲಿ ಮಾರ್ಚ್ 23 ರಂದು ನಡೆಸಲಾದ ರಕ್ತದಾನ ಶಿಬಿರದಲ್ಲಿ ಸುಮಾರು 50 ಯುವಜನರು ರಕ್ತದಾನ ಮಾಡಿದರು ಮತ್ತು ಒಂದು ನೂರಕ್ಕೂ ಅಧಿಕ ಜನರು ರಕ್ತದಾನ ಕ್ಲಬ್ ಸದಸ್ಯರಾದರು. ಶಿಬಿರವನ್ನು ವಲಯ ಅರಣ್ಯ ಅಧಿಕಾರಿ ಡಿ.ಆರ್.ನಾಯಕ್ ಸ್ವತ: ರಕ್ತದಾನ ಮಾಡುವ ಮೂಲಕ ಉದ್ಘಾಟಿಸಿದರು. ಮುಖ್ಯ ಅತಿಥಿಗಳಾಗಿ ನಿವೃತ್ತ ಜಿಲ್ಲಾ ಸರ್ಜನ್ ಪಿ.ಡಿ.ಕರ್ಪೂರ್ ಮಠ, ಹುಬ್ಬಳ್ಳಿ ಕೆ.ಎಂ.ಸಿ ವೈದ್ಯಾಧಿಕಾರಿ ಉಮೇಶ್ ಹಟ್ಟಿಕೇರಿ ರೋಟರಿ ಕ್ಲಬ್ ಅದ್ಯಕ್ಷ, ಎ.ಆರ್.ಬಾಲಾಜಿ, ಡಾ.ಎನ್.ಎ.ಖಾನ್, DYFI ಜಿಲ್ಲಾ ಕಾರ್ಯದರ್ಶಿ ವಿಠ್ಠಲ ಭಂಡಾರಿ ಪಾಲ್ಗೊಂಡರು.

ಬೆಳವಣಿಕೆ : ಗದಗ್ ಜಿಲ್ಲೆಯ ಬೆಳವಣಿಕೆ DYFI ಘಟಕದ ಆಶ್ರಯದಲ್ಲಿ ಮಾರ್ಚ್ 23ರಂದು ಏರ್ಪಡಿಸಲಾದ ರಕ್ತದಾನ ಶಿಬಿರವನ್ನು ರಾಜ್ಯ ಕಾರ್ಯದರ್ಶಿ ಕೆ.ಮಹಾಂತೇಶ್ ಉದ್ಘಾಟಿಸಿದರು.

ಶಿಬಿರದಲ್ಲಿ 51 ಯುವಜನರು ರಕ್ತದಾನ ಮಾಡಿದರು. ಸುಮಾರು-200 ಜನರು ರಕ್ತಗುಂಪು ತಪಾಸಣೆಗೊಳಗಾದರು. ಮುಖ್ಯಅತಿಥಿಗಳಾಗಿ ಹುಬ್ಬಳ್ಳಿ ಕೆ.ಎಂ.ಸಿ ರಕ್ತನಿಧಿಯ ಡಾ.ರಂಗಪ್ಪ, ಸ್ಥಳೀಯ ವೈದ್ಯರಾದ ಡಾ.ಎಸ್.ಎಂ.ಹದ್ಲಿ DYFI ಜಿಲ್ಲಾ ಸಂಚಾಲಕ ಅಬ್ದುಲ್ ರಜಾಕ್ ಮುಲ್ಲಾ ಗ್ರಾಂ.ಪಂ.ಸದಸ್ಯರಾದ ಬಸವರಾಜ್ ಮಂತೂರ್ ಭಾಗವಹಿಸಿದ್ದರು. ಗ್ರಾ.ಘಟಕದ ಕಾರ್ಯದರ್ಶಿ ಮಹೇಶ್ ಹಿರೇಮಠ ರಕ್ತದಾನ ಮಾಡುವ ಮೂಲಕ ರಕ್ತದಾನಕ್ಕೆ ಚಾಲನೆ ನೀಡಿದರು.

ಕುಂದಾಪುರ : ತಾಲೂಕು ಸಮಿತಿ ಆಶ್ರಯದಲ್ಲಿ ನಡೆದ ಶಿಬಿರದಲ್ಲಿ 66 ಯುವಜನರು ರಕ್ತದಾನ ಮಾಡಿದರು. ಶಿಬಿರದ ಉದ್ಘಾಟನೆಯನ್ನು DYFI ಮಾಜಿ ರಾಜ್ಯಾಧ್ಯಕ್ಷ ಮಹಾಬಲ ವಡೇರಾ ಹೋಬಳಿ ಉದ್ಘಾಟಿಸಿದರು. ಮುಖ್ಯ ಅತಿಥಿಗಳಾಗಿ ಬಂದಿದ್ದ ಪ್ರೊಬೆಷನರಿ ಸಹಾಯಕ ಠಾಣಾಧಿಕಾರಿ ಸಂಜೀವರಾಯಪ್ಪ, ಸ್ವತ: ರಕ್ತದಾನದ ಮೂಲಕ ಚಾಲನೆ ನೀಡಿದರು. DYFI ರಾಜ್ಯ ಉಪಾಧ್ಯಕ್ಷ ವಿ.ಚಂದ್ರಶೇಖರ್ ಮುಖ್ಯ ಅತಿಥಿಯಾಗಿದ್ದರು.

ಇದಲ್ಲದೆ ಮಂಗಳೂರು ನಗರ ಸಮಿತಿ ಆಶ್ರಯದಲ್ಲಿ 36 ಯುವಜನರು, ಮಂಗಳೂರು ಪ್ರದೇಶದ ಜೊಕಟ್ಟೆಯಲ್ಲಿ 50, ಕೊಂಚಾಡಿಯಲ್ಲಿ 17 ಜನ ಯುವಜನರು ಹಾಗೂ ಗುಲ್ಬರ್ಗಾದಲ್ಲಿ 9 ಯುವಜನರು ಬೆಳ್ಳಿಹಬ್ಬ ಭಗತಸಿಂಗ್ ದಿನಾಚರಣೆ ಅಂಗವಾಗಿ ಕೋಮುಸೌಹಾರ್ದತೆ ಹಾಗೂ ರಾಷ್ಟ್ರದ ಸಾರ್ವಭೌಮತೆಯ ರಕ್ಷಣೆಯ ಪ್ರತಿಜ್ಞೆಯೊಂದಿಗೆ ರಕ್ತದಾನ ಶಿಬಿರದಲ್ಲಿ ಪಾಲ್ಗೊಂಡಿದ್ದಾರೆ.

ಇಲ್ಲಿ ಜೀವ ಉಳಿಸಲು ರಕ್ತದಾನ.... ಅಲ್ಲಿ ಜೀವ ತೆಗೆಯಲು ಆಹ್ವಾನ...!

ಮಾರ್ಚ್ 23-1931 ಸ್ವಾತಂತ್ರ್ಯ ಹೋರಾಟಗಾರರು ಕ್ರಾಂತಿಕಾರಿ ಮುಖಂಡರು ಶಾಹಿದ್ ಭಗತ್‌ಸಿಂಗ್, ರಾಜ್‌ಗುರು, ಸುಖದೇವ್‌ರವರನ್ನು ಗಲ್ಲಿಗೇರಿಸಿದ ದಿನ 2005-ಮಾರ್ಚ್ 23ಕ್ಕೆ 74 ವರ್ಷವಾಯಿತು. ಹುತಾತ್ಮ ದಿನದ ಪ್ರಯುಕ್ತ ಮತ್ತು ಬೆಳ್ಳಿಹಬ್ಬದ ಅಂಗವಾಗಿ ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಷನ್ (DYFI) ಸಂಘಟನೆಯು ಏಪ್ರಿಲ್-3ರಂದು ಬೆಂಗಳೂರಿನಲ್ಲಿ 'ರಕ್ತದಾನ ಶಿಬಿರ'ವನ್ನು ಹಮ್ಮಿಕೊಂಡಿತ್ತು. ಈ ಕಾರ್ಯಕ್ರಮಕ್ಕೆ ಖ್ಯಾತ ವಕೀಲರು ವೆಂಕಟೇಶ್ ಗೌಡ್ರು, DYFI ಮಾಜಿ ಮುಖಂಡರಾದ ಶಿವರಾಂ, ನಾರಾಯಣಸ್ವಾಮಿ, ಟಿ.ಡಿ.ರಾಮಕೃಷ್ಣ, ಜಥಿಜು ರಾಜ್ಯ ಕಾರ್ಯದರ್ಶಿ, ಕೆ.ಮಹಾಂತೇಶ್, ಮಹದೇವ, ಲಕ್ಷ್ಮಣ್‌ಕುಮಾರ್ ಮತ್ತು DYFI ನ ಜಿಲ್ಲಾ ಮುಖಂಡರು ಮತ್ತು ಕಾರ್ಯಕರ್ತರು, ಮಾಜಿ ಮುಖಂಡರು ಹಾಗೂ ಸಾಮೂಹಿಕ ಸಂಘಟನೆಯ ಮುಖಂಡರು, ಕಾರ್ಯಕರ್ತರು ಮತ್ತು ರಕ್ತದಾನಿಗಳು ಈ ಕಾರ್ಯಕ್ರಮಕ್ಕೆ ಭಾಗವಹಿಸಿದ್ದರು.

ಈ ಕಾರ್ಯಕ್ರಮವು ಒಂದು ಹಬ್ಬದ ರೀತಿಯಲ್ಲಿ ಬನ್ನಪ್ಪ ಪಾರ್ಕ್‌ನಲ್ಲಿ ನಡೆಯಿತು. ಸುಮಾರು ನಾನೂರಕ್ಕೂ ಹೆಚ್ಚಿನ ಜನ ಈ ಕಾರ್ಯಕ್ರಮಕ್ಕೆ ಭಾಗವಹಿಸಿದ್ದರು. ಇದು ಕೇವಲ ಒಂದು ದಿನದ ಕಾರ್ಯಕ್ರಮವಾಗದೆ, "ಹುತಾತ್ಮ ಭಗತ್‌ಸಿಂಗ್ ರಕ್ತದಾನಿಗಳ ಕ್ಲಬ್" ಉದ್ಘಾಟನೆ ಮಾಡಿ ಎಲ್ಲಾ ಸಂದರ್ಭದಲ್ಲೂ ರಕ್ತ ನೀಡುವ ಕಾರ್ಯಕ್ಕೆ ಚಾಲನೆ ನೀಡಿತು.

ಈ ಕಾರ್ಯಕ್ರಮದ ಉದ್ಘಾಟನೆಯ ಸಂದರ್ಭದಲ್ಲಿ ಜನರು ಬಹಳ ಆಸಕ್ತಿಯಿಂದ ಉದ್ಘಾಟನಾ ಭಾಷಣವನ್ನು ಕೇಳಿದ್ದರು. ಮಾಡನಾಡಿದ ಎಲ್ಲರೂ ಸೋಹಾರ್ದತೆ-ಐಕ್ಯ ಸಂದೇಶವನ್ನು ಸಾರಿದರು.

ರಕ್ತದಾನದ ಕಾರ್ಯಕ್ರಮಕ್ಕೆ ಬೇಕಾಗುವ ಎಲ್ಲ ವ್ಯವಸ್ಥೆಯನ್ನು ಮಾಡಿದ್ದರು. ನಿಮ್ಹಾನ್ಸ್ ಆಸ್ಪತ್ರೆಯಿಂದ ವೈದ್ಯರು ಬಂದಿದ್ದರು. ಸುಮಾರು ನೂರಾಹನ್ನೊಂದು ಜನ ರಕ್ತದಾನ ಮಾಡಿದರು. ಇಡೀ ದಿನದ ಕಾರ್ಯಕ್ರಮ ಯುವಜನರಿಗೆ ಸ್ಫೂರ್ತಿಯ ಚಿಲುಮೆಯಾಗಿತ್ತು.

ಕೆಲವು ದಿನಗಳ ನಂತರ ಸಂಪಂಗಿರಾಮ ನಗರದ 'ಚಂದ್ರಶೇಖರ್ ಆಜಾದ್ ಸೇವಾ ಸಂಸ್ಥೆ' ಎಂಬ ಬಜರಂಗದಳದ ಸಂಘಟನೆಯು ರಾಮನವಮೀ ಪ್ರಯುಕ್ತ ಸ್ವಯಂಪ್ರೇರಿತ ರಕ್ತದಾನ ಕಾರ್ಯಕ್ರಮ ಮಾಡಿತ್ತು.

ಕಾರ್ಯಕ್ರಮಕ್ಕೆ ಕೋಮು ದ್ವೇಷದ ಪ್ರಚಾರಕ ಪ್ರಮೋದ್ ಮುತಾಲಿಕ್ ಎಂಬ ವ್ಯಕ್ತಿಯನ್ನು ಕರೆದಿದ್ದರು. ಇದು ಕೇವಲ ಅರ್ಧದಿನದ ಕಾರ್ಯಕ್ರಮ. ಇದು ರಕ್ತದಾನ ಕಾರ್ಯಕ್ರಮವಾಗಿರಲಿಲ್ಲ. ಜನತೆಯ ರಕ್ತ ಹರಿಸುವ ಕೋಮು ಬೀಜ ಬಿತ್ತುವ ಕಾರ್ಯಕ್ರಮವಾಗಿತ್ತು.

ಈ ಕಾರ್ಯಕ್ರಮದಲ್ಲಿ ರಕ್ತದಾನ ಮಾಡುವ ಯಾವುದೇ ವ್ಯವಸ್ಥೆಯನ್ನೇ ಮಾಡಿರಲಿಲ್ಲ. ಕಾರ್ಯಕ್ರಮಕ್ಕೆ ಸುಮಾರು 50 ಜನರಿದ್ದರೆ ಹೆಚ್ಚು ಎನ್ನಬಹುದು.

ಮುತಾಲಿಕ್‌ನ ಭಾಷಣ ಹೇಗೆಂದರೆ ಪಾಕಿಸ್ಥಾನದ ಕಟ್ಟಾ ವಿರೋಧಿಯ ಹಾಗೆ, ಹಿಂದೂ ದೇವರ ಸುಧಾರಕನಾಗಿ, ಕ್ರೀಡೆಯನ್ನೇ ವಿರೋಧಿಸುವುದು, ರಾಮನಿಗೆ ಪೂಜೆ ಸಲ್ಲಬೇಕಾದರೆ, ಮೊದಲು ಅಯೋಧ್ಯೆಯಲ್ಲಿ ರಾಮಮಂದಿರ ಕಟ್ಟಲೇಬೇಕೆಂದು ಬೊಬ್ಬೆ ಹೊಡೆಯುವ ಹಾಗೇ ಮಾತನಾಡುತ್ತಿದ್ದ ಮುತಾಲಿಕ್ ಬಡಜನತೆಯ ಬಗ್ಗೆ, ಕೋಮು ಐಕ್ಯತೆಯ ಬಗ್ಗೆ, ರೈತ ಕಾರ್ಮಿಕ, ಕೂಲಿಕಾರ-ವಿದ್ಯಾರ್ಥಿ, ಯುವಜನ, ಮಹಿಳೆ, ಕ್ರೀಡಾ-ಸಾಂಸ್ಕೃತಿಯ ಬಗ್ಗೆ ಏನೇನೂ ಮಾತಾಡಲಿಲ್ಲ. ಅಂದರೆ, ಅದು ರಕ್ತದಾನ ಕಾರ್ಯಕ್ರಮವಲ್ಲ ಬದಲಾಗಿ ರಕ್ತ ಹರಿಸುವ ಕಾರ್ಯಕ್ರಮವಾಗಿತ್ತು. ಈ ಕಾರ್ಯಕ್ರಮದಲ್ಲಿ ರಕ್ತದಾನದ ಬಗ್ಗೆ, ಅದರ ಮಹತ್ವದ ಬಗ್ಗೆ, ಯಾರು ಮಾತನಾಡಲೇ ಇಲ್ಲ. ಯಾರು ಸಹಾ ರಕ್ತದಾನ ಮಾಡಲೇ ಇಲ್ಲ. ರಕ್ತದಾನದ ವ್ಯವಸ್ಥೆಯೇ ಇಲ್ಲದಿದ್ದರೆ ಇನ್ನೆಲ್ಲಿ ರಕ್ತದಾನ? ಮತ್ತೊಂದೆಡೆ DYFI ನಂತಹ ಸಂಘಟನೆ ಕೋಮುಸೌಹಾರ್ದತೆ, ಸಹಬಾಳ್ವೆ ಹಾಗೂ ರಾಷ್ಟ್ರದ ಐಕ್ಯತೆಗಾಗಿ ಯುವಜನರು ಇಂದು ದೇಶದಲ್ಲಿ ಒಂದು ಕಡೆ ರಕ್ತದಾನ ಕಾರ್ಯಕ್ರಮಗಳನ್ನು ನಡೆಸಿದರೆ ಮತ್ತೊಂದು ಕಡೆ ಯುವಜನರನ್ನು ಕೋಮುಗಲಭೆಯ ಮುಖಾಂತರ ರಕ್ತ ಹರಿಸುವ ಕಾರ್ಯಕ್ರಮಗಳನ್ನು ಸಂಘಪರಿವಾರದ ಶಕ್ತಿಗಳು 'ಸೇವಾಸಂಸ್ಥೆ'ಗಳ ಹೆಸರಿನಲ್ಲಿ ನಡೆಸುತ್ತವೆ. ಈ ಬಗ್ಗೆ ಎಚ್ಚರಿಕೆ ಅಗತ್ಯ.

ಒಟ್ಟಿನಲ್ಲಿ DYFI ಕಾರ್ಯಕ್ರಮ ರಕ್ತದಾನದ ಮೂಲಕ ಜೀವ ಉಳಿಸುವಂತದ್ದಾಗಿದ್ದರೆ 'ಅಜಾದ್' ಎಂಬ ಸಂಸ್ಥೆ ನಡೆಸಿದ ಕಾರ್ಯಕ್ರಮ ರಕ್ತಕಾರುವ ಕಾರ್ಯಕ್ರಮವಾಗಿತ್ತು.

- ವಿನೋದ, ಶ್ರೀರಾಮಪುರ

ಕಾನೂನು ತರಬೇತಿ ಶಿಬಿರ

ಕಾರ್ಮಿಕ ಮುಖಂಡರಿಗೆ ಕಾರ್ಮಿಕ ಕಾನೂನುಗಳ ಬಗ್ಗೆ ತರಬೇತಿಯನ್ನು ಮಾರ್ಚ್ 6 ರಂದು ಬೆಂಗಳೂರು ಉದಯ ನಗರದ ಸಿಪಿಎಸಿ ಹಾಲ್‌ನಲ್ಲಿ ಆಯೋಜಿಸಲಾಗಿತ್ತು. ವಕೀಲರಾದ ನರಹರಿಯವರು ಉಪನ್ಯಾಸ ನೀಡಿದರು. ತರಬೇತಿಯನ್ನು ವರ್ತೂರು ಸಿಐಟಿಯು ಪ್ರದೇಶ ಸಮಿತಿ ಸಂಘಟಿಸಿತ್ತು. ಈ ತರಬೇತಿ ಶಿಬಿರದ ಅಧ್ಯಕ್ಷತೆಯನ್ನು ಹೆಚ್.ಎನ್.ಗೋಪಾಲಗೌಡರು ವಹಿಸಿದರು. ಸಿಐಟಿಯು ವರ್ತೂರು ಪ್ರದೇಶ ಸಮಿತಿ ಅಧ್ಯಕ್ಷರಾದ ಪಿ.ಜಯರಾಂ, ಪ್ರಧಾನ ಕಾರ್ಯದರ್ಶಿ ಸಿ.ರಾಮಚಂದ್ರ ಮತ್ತು ಸಿಐಟಿಯು ಜಿಲ್ಲಾ ಸಮಿತಿ ಸದಸ್ಯರಾದ ಪಿ.ಮುನಿರಾಜ್ ಉಪಸ್ಥಿತರಿದ್ದರು. ಈ ಕಾರ್ಯಾಗಾರದಲ್ಲಿ ವಿವಿಧ ಕಾರ್ಖಾನೆಗಳ ಕಾರ್ಮಿಕ ಮುಖಂಡರುಗಳು ಭಾಗವಹಿಸಿದ್ದರು.

ಯುಪಿಎ ಸರಕಾರ ಅಧಿಕಾರದಲ್ಲಿ ಒಂದು ವರ್ಷ ಪೂರೈಸುತ್ತಿರುವಂತೆ ಬಂಡವಾಳಶಾಹಿ ಮಾಧ್ಯಮಗಳು ಅದರ ಮೌಲ್ಯಮಾಪನ ಮಾಡಿ 'ಅಂಕಪಟ್ಟಿ' ತಯಾರಿಸುವ ಸಿದ್ಧತೆಯಲ್ಲಿವೆ. ಕೆಲವು 10 ಅಂಕಗಳ ಪಟ್ಟಿ ತಯಾರಿಸಿ ಅಂಕಗಳನ್ನು ಕೊಡುವಲ್ಲಿ ಮಗ್ನರಾಗಿದ್ದಾರೆ. ಇನ್ನು ಕೆಲವಷ್ಟು ಇನ್ನಷ್ಟು ಮನೋಕಲ್ಪಿತ A, A +, A - ಇತ್ಯಾದಿ ಗ್ರೇಡ್‌ಗಳನ್ನು ಬಳಸುತ್ತಿವೆ. ಮೇ 22ರಂದು ಈ ಸರಕಾರ ಒಂದು ವರ್ಷವನ್ನು ಪೂರೈಸುತ್ತಿದೆ.

ಆದರೆ ಈ ಒಂದು ವರ್ಷವನ್ನು ಪರಿಶೀಲಿಸಿದರೆ ನಿಜವಾಗಿ ಕಾಣುವುದು ಸಂಸದೀಯ ಪ್ರಜಾಪ್ರಭುತ್ವದ ಮೇಲೆಯೇ ಬಿಜೆಪಿ ನೇತೃತ್ವದ ಎನ್‌ಡಿಎ ಅವಿರತವಾಗಿ ಮಾಡುತ್ತಿರುವ ಪ್ರಹಾರಗಳು, ಈ ಬಗ್ಗೆ ಆತಂಕ ವ್ಯಕ್ತಪಡಿಸಬೇಕಾದ ಪರಿಸ್ಥಿತಿಯಿದೆ. ದೇಶ ಸ್ವತಂತ್ರ ಭಾರತದಲ್ಲಿ ಹಲವು ಸರಕಾರಗಳನ್ನು ಕಂಡಿದೆ. ಹೆಚ್ಚಿನ ಸರಕಾರಗಳು ಒಂದು ವರ್ಷ ಪೂರೈಸಿದ್ದವು. ಅವುಗಳ ಮೌಲ್ಯಮಾಪನವಾಗಿದೆ. ಅದೇ ರೀತಿ ಈ ಸರಕಾರದ ಮೌಲ್ಯಮಾಪನದಲ್ಲಿ ಆಗಬೇಕಾದ್ದು ಸಹಜವೇ.


ಆದರೆ, ಹಿಂದೆಂದೂ ಸ್ವತಂತ್ರ ಭಾರತದಲ್ಲಿ ಈ ರೀತಿ ಇಡೀ ವರ್ಷ ಸಂಸತ್ತಿನ ಕಲಾಪಗಳನ್ನು ಅಸ್ತವ್ಯಸ್ತಗೊಳಿಸಿದ್ದನ್ನು ನಾವು ಕಂಡಿಲ್ಲ. ರಾಷ್ಟ್ರಪತಿಗಳ ಭಾಷಣಕ್ಕೆ ವಂದನಾ ನಿರ್ಣಯವನ್ನು ವಿರೋಧ ಪಕ್ಷಗಳ ಬಹಿಷ್ಕಾರದ ನಡುವೆ ಅಂಗೀಕರಿಸಬೇಕಾಯಿತು. ಅದೇ ರೀತಿ ಕಳೆದ ವರ್ಷದ ಹಣಕಾಸು ಮಸೂದೆ ಕೂಡಾ. ಹಾಗೆ ನೋಡಿದರೆ ಯಾವುದಾದರೂ ಒಂದು ಸದನದಲ್ಲಿ ಬಹಿಷ್ಕಾರ ಅಥವಾ ದೊಡ್ಡ ಭಂಗವೆಂಬುದಿಲ್ಲದ ಒಂದಾದರೂ ಅಧಿವೇಶನ ಈ ಒಂದು ವರ್ಷದಲ್ಲಿ ಕಾಣಸಿಗದು.

ಸ್ವತಃ ಅಟಲ್ ಬಿಹಾರಿ ವಾಜಪೇಯಿಯವರ ಅಧ್ಯಕ್ಷತೆಯಲ್ಲಿರುವ ಎನ್‌ಡಿಎ ಸಂಸದೀಯ ಗುಂಪೇ ಸಂಸದೀಯ ಪ್ರಜಾಪ್ರಭುತ್ವವನ್ನು ಹಳಿತಪ್ಪಿಸುವ ಇಂತಹ ನಿರ್ಣಯವನ್ನು ಕೈಗೊಳ್ಳುತ್ತಿರುವುದು. ಕೆಲವೇ ತಿಂಗಳ ಹಿಂದಿನವರೆಗೆ ಪ್ರಧಾನ ಮಂತ್ರಿಯಾಗಿ ಇವರು ವಿರೋಧ ಪಕ್ಷಗಳು ಜವಾಬ್ದಾರಿಯುತವಾಗಿ ಹೀಗೆ ವರ್ತಿಸಬೇಕು ಎಂದು ಪ್ರಚಾರಕನ ದನಿಯಲ್ಲಿ ಆವೇಶಭರಿತವಾಗಿ ಉಪದೇಶಗಳನ್ನು ಇವರೇ ತಾನೇ ಝಾಡಿಸುತ್ತಿದ್ದವರು. ನಿಜವಾಗಿಯೂ 'ಒಂದು ಭಿನ್ನ ಮಾದರಿಯ ಪಕ್ಷ'ದ ಯಾವುದೇ ನೀತಿ, ಮೌಲ್ಯಗಳಿಲ್ಲದ ಪಕ್ಷದ ಮುಖ್ಯಸ್ಥರು ಅವರು.

ಅದೇನೇ ಇರಲಿ, ಸಂಸತ್ತನ್ನು ಅಸ್ತವ್ಯಸ್ತಗೊಳಿಸುವ ಅವರ ತರ್ಕದ ಸತ್ವವಾದರೂ ಏನು? ಒಂದು ಅತ್ಯಂತ ಚತುರ ಕಾರಣವೆಂದರೆ ಅವರ ಮುಖಂಡರ 'ಮಾತುಗಳನ್ನು ಕಿವಿಗೆ ಹಾಕಿಕೊಳ್ಳುತ್ತಿಲ್ಲ ಎಂಬುದು. ಈಗ ಅವರು ಬಯಸುವ ಯಾವ ವಿಷಯವನ್ನಾದರೂ ಎತ್ತಬಹುದು ಎಂದು ಸ್ವತಃ ಪ್ರಧಾನಮಂತ್ರಿಗಳೇ ಭರವಸೆ ನೀಡಿದ್ದಾರೆ. ಲೋಕಸಭಾ ಅಧ್ಯಕ್ಷರು ಸಧನದಲ್ಲಿ ಅವರಿಗೆ ನ್ಯಾಯ ಒದಗಿಸಲಾಗುವುದು ಎಂದು ಲಿಖಿತವಾಗಿ ಹೇಳಿದ್ದಾರೆ. ಹಾಗಿದ್ದರೂ ಬಹಿಷ್ಕಾರ ಏಕೆ ಮುಂದುವರೆಯುತ್ತದೆ?

ಕೋಮುವಾದಿ ಬಿಜೆಪಿಯ ನೇತೃತ್ವದ ಸರ್ಕಾರವನ್ನು ಜನತೆ ಸೋಲಿಸಿ ಒಂದು ವರುಷವಾಗುತ್ತಿದೆ. ಆದರೆ ವಿರೋಧ ಪಕ್ಷವಾಗಿರುವ ಬಿಜೆಪಿಯು ಜನತೆಯ ತೀರ್ಪಿಗೆ ಮನ್ನಣೆ ನೀಡದೆ ನಿರಂತರವಾಗಿ ಸಂಸದೀಯ ಪ್ರಜಾಪ್ರಭುತ್ವದ ಮೇಲೆ ದಾಳಿ ನಡೆಸುತ್ತಲೇ ಬಂದಿದೆ. ಕಲಾಪಗಳ ಬಹಿಷ್ಕಾರದ ನಿರ್ಧಾರ ಅಂತಹದ್ದರಲ್ಲಿ ಒಂದು.

ಸಂಸದೀಯ ಪ್ರಜಾಪ್ರಭುತ್ವದ ಮೇಲೆ ಪ್ರಹಾರಗಳ ಒಂದು ವರ್ಷ




ಅದಕ್ಕೆ ನಿಜವಾದ ಕಾರಣ ಬೇರೆಲ್ಲೋ ಇದೆ. ಕಳಂಕಿತ ಯುಪಿಎ ಮಂತ್ರಿಗಳು ರಾಜೀನಾಮೆ ನೀಡಬೇಕೆಂಬುದು ಎನ್‌ಡಿಎ ಆಗ್ರಹ ಅದರ ತಕ್ಷಣದ ಗುರಿ ರೈಲುಮಂತ್ರಿಗಳು. ರಾಜಕೀಯ ನೈತಿಕತೆಯನ್ನು ಕುರಿತಂತೆ ಎಡಪಕ್ಷಗಳು ರೂಢಿಸಿಕೊಂಡಿರುವ ಮಟ್ಟ ಏನು ಎಂಬುದು ದೇಶದಲ್ಲಿ ಪ್ರತಿಯೊಬ್ಬರಿಗೂ ತಿಳಿದಿದೆ. ಅದರ ಪುನರಾವರ್ತನೆ ಇಲ್ಲಿ ಅನಗತ್ಯ.



ಅಧಿಕಾರದಿಂದ ಸದಾ ಹೊರಗೆ ಇರಬೇಕಾದ ಕಳಂಕಿತ ನಾಯಕರು

ಆದರೆ ಚಾರ್ಜ್‌ಶೀಟಾದ ಮಂತ್ರಿಗಳನ್ನು ಹೊಂದುವ ಕ್ರಮವನ್ನು ಕಾನೂನು ಬದ್ಧಗೊಳಿಸಿದವರು ಸ್ವತಃ ವಾಜಪೇಯಿಯವರೇ! ಬಾಬ್ರಿಮಸೀದಿಯನ್ನು ಧ್ವಂಸಮಾಡುವ ಕ್ರಿಮಿನಲ್ ಪಿತೂರಿ ನಡೆಸಿದ್ದಕ್ಕೆ ಚಾರ್ಜ್‌ಶೀಟ್‌ಗೊಳಗಾದ ಅಡ್ವಾಣಿ, ಜೋಷಿ, ಉಮಾಭಾರತಿಯವರು ಮಹತ್ವದ ಖಾತೆಗಳನ್ನು ಪಡೆದು ಅದರಡಿ ಕೆಲಸ ಮಾಡಿದ್ದಾರೆ. ತೆಹಲ್ಕಾ ಕೆಲವು ಸಂಗತಿಗಳನ್ನು ಬಯಲಿಗೆಳೆದಾಗ ರಾಜೀನಾಮೆ ನೀಡಬೇಕಾಗಿ ಬಂದ ಜಾರ್ಜ್ ಫರ್ನಾಂಡೀಸರನ್ನು ತನಿಖೆ ಮುಗಿಯದೇ, ಇನ್ನೂ ನಡೆಯುತ್ತಿದ್ದಾಗಲೇ ಮತ್ತೆ ಮಂತ್ರಿಮಂಡಳದಲ್ಲಿ ಸೇರಿಸಲಾಯಿತು. ಅದೇ ಬಿಜೆಪಿ ಈಗ ಯಾವುದೇ ನಾಚಿಕೆಯಿಲ್ಲದೆ ಸಂಸದೀಯ ಪ್ರಜಾಪ್ರಭುತ್ವವನ್ನು ಚಿಂದಿ ಮಾಡುತ್ತಿದೆ.

ನಿಜವಾಗಿ, ಇದರಿಂದ ಯಾರಿಗೂ ಆಶ್ಚರ್ಯವೆನಿಸಬೇಕಿಲ್ಲ. ಬಿಜೆಪಿ ಎಂಬುದು ಆರ್‌ಎಸ್‌ಎಸ್‌ನ ರಾಜಕೀಯ ಕೈಯಾಗಿರುವಾಗ ಅಂದು ಜಾತ್ಯಾತೀತ ಪ್ರಜಾಪ್ರಭುತ್ವದ ಬಗ್ಗೆ ಆರ್‌ಎಸ್‌ಎಸ್‌ನ ಹಗೆತನವನ್ನು ಪ್ರತಿಧ್ವನಿಸದಿರಲು ಸಾಧ್ಯವೇ? ಜಾತ್ಯಾತೀತ ಪ್ರಜಾಪ್ರಭುತ್ವ ಗಣತಂತ್ರವನ್ನು ಒಂದು ಫ್ಯಾಸಿಸ್ಟ್ ಮಾದರಿಯ ಹಿಂದೂರಾಷ್ಟ್ರವಾಗಿ ಪರಿವರ್ತಿಸುವ ಅಜೆಂಡಾವನ್ನು ಅನುಸರಿಸಲು



BALANCE SHEET UPA Inc 2004-'05

REPORT CARD

SUBJECT GRADE

ತೀರ್ಪು ನೀಡಬೇಕಾದವರು ಯಾರು?

ಆರ್‌ಎಸ್‌ಎಸ್/ಬಿಜೆಪಿ ದೇಶದಲ್ಲಿನ ಪ್ರತಿಯೊಂದು ಸಂವಿಧಾನಿಕ ಸಂಸ್ಥೆಯೊಂದಿಗೂ ತಿಕ್ಕಾಟಕ್ಕೆ ಇಳಿದಿದೆ- ಅದು ಚುನಾವಣಾ ಆಯೋಗವಾಗಬಹುದು, ರಾಷ್ಟ್ರೀಯ ಮಾನವ ಹಕ್ಕು ಆಯೋಗವಾಗಬಹುದು. ಮಹಾಲೆಕ್ಕ ಪರಿಶೋಧಕರಾಗಿರಬಹುದು ಅಥವಾ ನ್ಯಾಯಾಂಗ ವ್ಯವಸ್ಥೆಯೇ ಆಗಿರಬಹುದು. ಈಗ ಸಂಸತ್ತಿನೊಡನೇ ಸಂಘರ್ಷಕ್ಕೆ ಇಳಿದಿದೆ. 2004ರ ಸಾರ್ವತ್ರಿಕ ಚುನಾವಣೆಗಳಲ್ಲಿ ಭಾರತೀಯ ಜನತೆ ಕೈಗೊಂಡ ಸ್ಮರಣೀಯ ನಿರ್ಧಾರದ ಮಹತ್ವವನ್ನು ಈಗ ಇನ್ನೂ ಚೆನ್ನಾಗಿ ಅರ್ಥಮಾಡಿಕೊಳ್ಳಬಹುದು. ಆಧುನಿಕ ಭಾರತೀಯ ಗಣತಂತ್ರವನ್ನು ಗಟ್ಟಿಗೊಳಿಸಲು ಅವರನ್ನು ಪ್ರಭುತ್ವ ಅಧಿಕಾರದಿಂದ ಎಷ್ಟು ಸಾಧ್ಯವೋ ಅಷ್ಟು ದೂರ ಇಡುವುದು ಅಗತ್ಯ.

ಮುಕಾನ್ ಆಯೋಗ ಮತ್ತು ಎನ್‌ಡಿಎ ಭ್ರಷ್ಟತನ


ಪ್ರಮುಖ ವಿರೋಧ ಪಕ್ಷವಾದ ಬಿಜೆಪಿ ನೇತೃತ್ವದ ಎನ್.ಡಿ.ಎ., ಭ್ರಷ್ಟ ರಾಜಕಾರಣಿಗಳನ್ನು ಸಂಪುಟದಿಂದ ಕೈಬಿಡಬೇಕೆಂದು ಸಂಪಸತ್ತನ್ನೇ ಬಹಿಷ್ಕಾರ ಮಾಡುತ್ತಿದೆ. ಇದು ಗಾಜಿನಮನೆಯಲ್ಲಿ ಕೂತು ಬೇರೆಯವರಿಗೆ ಕಲ್ಲು ಹೊಡೆದಂತಾಗಿದೆ.

ತೆಹಲ್ಕಾ ಟೇಪು ಹಗರಣದಲ್ಲಿ ರಕ್ಷಣಾ ಇಲಾಖೆಯಲ್ಲಿ ನಡೆಯುತ್ತಿರುವ ಅವ್ಯವಹಾರಗಳು ಬೆಳಕಿಗೆ ಬಂದಿರುವುದು ಜಗತ್ತಿಗೆ ಜನಜನಿತವಾಗಿದೆ. ಇದರಲ್ಲಿ ಪ್ರಮುಖವಾಗಿ ಹೆಸರಿಸಲಾದವರು ಅಂದಿನ ರಕ್ಷಣಾ ಸಚಿವ ಮತ್ತು ಎನ್.ಡಿ.ಎ.ಸಂಚಾಲಕ ಜಾರ್ಜ್ ಫೆರ್ನಾಂಡೀಸ್.

ಈ ಹಗರಣಗಳ ಕುರಿತು ಸಂಸತ್ತಿನಲ್ಲಿ ಮತ್ತು ಹೊರಗಡೆ ಪ್ರತಿಭಟನೆಗಳು ತೀವ್ರವಾದಾಗ ಅಂದಿನ ಎನ್.ಡಿ.ಎ ಸರ್ಕಾರ ಜಸ್ಟೀಸ್ ಮುಕಾನ್ ಆಯೋಗವನ್ನು ರಚಿಸಿತ್ತು. ಆದರೆ ಜಸ್ಟೀಸ್ ಮುಕಾನ್ ಆಯೋಗದ ವರದಿಗಳು ರಕ್ಷಣಾ ಸಚಿವರ ಪರವಾಗಿ ನೀಡಲು ಸಾಕಷ್ಟು ವಶೀಲಿ ಹಚ್ಚಲಾಗಿತ್ತು ಎಂಬುದು ಈಗ ಬೆಳಕಿಗೆ ಬಂದಿದೆ.

ಮೋಜಿಗಾಗಿ ರಕ್ಷಣಾ ಇಲಾಖೆಯ ವಿಮಾನ :

ರಕ್ಷಣಾ ಇಲಾಖೆಯ ಶಸ್ತ್ರಾಸ್ತ್ರಗಳ ಸಂಗ್ರಹಣೆ ಕುರಿತು ತನಿಖೆಗಾಗಿ ಪುಣೆ, ಅಹ್ಮದ್‌ನಗರ ಮತ್ತು ಮುಂಬೈ ನಗರಗಳಿಗೆ ಜಸ್ಟೀಸ್ ಫುಕಾನ್‌ರವರು ಭೇಟಿ ನೀಡಿದುದು ಮಾತ್ರವಲ್ಲದೆ, ಶಿರಡಿ, ಅಜಂತಾ, ಎಲ್ಲೋರಾಗಳಿಗೂ ಭೇಟಿ ನೀಡಿದುದು ಬೆಳಕಿಗೆ ಬಂದಿದೆ. ಕೊನೆಯ ಮೂರು ಪ್ರದೇಶಗಳಿಗೆ ನೀಡಿದ ಭೇಟಿ ಯಾವುದೇ ಖಾಸಗಿ ಖರ್ಚಿನಲ್ಲಿ ನಡೆದುದಲ್ಲ. ಇದಕ್ಕಾಗಿ ರಕ್ಷಣಾ ಇಲಾಖೆಯ ವಿಶೇಷ ವಿಮಾನವನ್ನು ಬಳಸಲಾಯ್ತು. ನಿಯಮದ ಪ್ರಕಾರ ಈ ವಿಮಾನವನ್ನು ರಾಷ್ಟ್ರಪತಿ, ಉಪರಾಷ್ಟ್ರಪತಿ, ಪ್ರಧಾನಮಂತ್ರಿಗಳಂತಹ ಪ್ರಮುಖರು ಮಾತ್ರ ಬಳಸಬಹುದಾಗಿದೆ.



ಹಲವು ಹಗರಣಗಳ ವೀರ

ಈ ವಿಮಾನದ ಬಳಕೆಗೆ ಒಪ್ಪಿಗೆಯನ್ನು ಸ್ವತಃ ಆರೋಪಕ್ಕೆ ಒಳಗಾಗಿದ್ದ ಅಂದಿನ ರಕ್ಷಣಾ ಸಚಿವ, ಜಾರ್ಜ್ ಫರ್ನಾಂಡೀಸ್‌ರವರೇ ನೀಡಿದ್ದಾರೆ ಎಂಬ ವರದಿಯೂ ಇದೆ.

ತನಿಖೆಗೆಂದು ಹೊರಟ ಜಸ್ಟೀಸ್ ಫುಕಾನ್ ತನ್ನ ಜತೆಯಲ್ಲಿ ಪತ್ನಿಯನ್ನು ಕೂಡಾ ಕರೆದೊಯ್ದಿದ್ದರು. ಅಂದರೆ ಈ ಆಯೋಗದ ತಂಡವು ಎನ್‌ಡಿಎ ಸರ್ಕಾರದ ಪ್ರಭಾವಕ್ಕೆ ಒಳಗಾಗಿದ್ದು, ತನಿಖೆಯನ್ನು ಗಂಭೀರವಾಗಿ ಪರಿಗಣಿಸಲೇ ಇಲ್ಲ. ಇಂತಹ ಹಿನ್ನೆಲೆಯಲ್ಲಿ ಜಸ್ಟೀಸ್ ಫುಕಾನ್ ಆಯೋಗದಿಂದ ನ್ಯಾಯವನ್ನು ನಿರೀಕ್ಷಿಸುವುದಾದರೂ ಹೇಗೆ?

ಆದ್ದರಿಂದ ತೆಹಲ್ಕಾ ಪ್ರಕರಣವು ಬಯಲಿಗೆಳೆದಂತೆ, **ರಕ್ಷಣಾ ಇಲಾಖೆಯ ಅವ್ಯವಹಾರಗಳನ್ನು ತನಿಖೆ ನಡೆಸಲು ಸಿಬಿಐನ್ನು ನೇಮಕ ಮಾಡಿದ ಯುಪಿಎ ಸರ್ಕಾರದ ಕ್ರಮ ಸರಿಯಾಗಿಯೇ ಇದೆ ಎಂದು ಸಿಪಿಐ(ಎಂ) ಪಾಲಿಟ್ ಬ್ಯೂರೋ ತಿಳಿಸಿದೆ.**


ಕಾರ್ಮಿಕವರ್ಗದ ಅಂತರರಾಷ್ಟ್ರೀಯತೆಯನ್ನು ಎತ್ತಿಹಿಡಿಯುವ ಮೇ ದಿನಾಚರಣೆಯನ್ನು ಜಗತ್ತಿನಾದ್ಯಂತ ಆಚರಿಸಿದ ವರದಿಗಳು ಬರುತ್ತಿದ್ದಂತೆಯೇ ಕರ್ನಾಟಕ ರಾಜ್ಯದ ಮೂಲೆ ಮೂಲೆಗಳಲ್ಲಿ, ಮೇ ದಿನಾಚರಣೆ ಆಚರಿಸಿದ ವರದಿಗಳು ಬಂದಿವೆ. ಹಾನಗಲ್ ತಾಲೂಕಿನ ಕಾಡಶೆಟ್ಟಿಹಳ್ಳಿಯ ಕೃಷಿ ಕೂಲಿಕಾರರು, ಬ್ರಹ್ಮಾವರದ ಬೀಡಿಕಾರ್ಮಿಕರು, ಬೆಂಗಳೂರಿನ ಸಾರ್ವಜನಿಕ ಉದ್ದಿಮೆ, ಬ್ಯಾಂಕ್, ವಿಮಾನೌಕರರು ನಾವೆಲ್ಲ ಶೋಷಿತ ವರ್ಗವಾಗಿರುವ ಕಾರ್ಮಿಕ ವರ್ಗದ ಭಾಗ ಎಂಬುದನ್ನು ಇನ್ನೊಮ್ಮೆ ಸಾರಿ ಹೇಳಿದರು. ಕಾರ್ಮಿಕ ವರ್ಗದ ಐಕ್ಯತೆಯನ್ನು ಎತ್ತಿಹಿಡಿಯುತ್ತಾ, ಐಕ್ಯತೆಯನ್ನು ಮುರಿಯಲೆತ್ನಿಸುವ ಕೋಮುವಾದಿಗಳನ್ನು ಮೂಲೆಗೆ ತಳ್ಳುವುದಾಗಿ ಪ್ರತಿಜ್ಞೈದರು

ರಾಜ್ಯದೆಲ್ಲೆಡೆ ಸಂಭ್ರಮದ ಮೇ ದಿನಾಚರಣೆ

ಬೆಂಗಳೂರು ವರದಿ: ಕರ್ನಾಟಕ ರಾಜ್ಯದ ಕಾರ್ಮಿಕ ವರ್ಗದ ಪ್ರಮುಖ ಕೇಂದ್ರ ಬೆಂಗಳೂರು, ಹತ್ತಾರು ಕೈಗಾರಿಕಾ ಕೇಂದ್ರಗಳಲ್ಲಿ, ಬೀದಿಬದಿಯ ಓಣಿಗಳಲ್ಲಿ, ಸಾವಿರಾರು ಕಛೇರಿಗಳಲ್ಲಿ ಕಾರ್ಮಿಕರು ನೌಕರರು ಪಸರಿಸಿದ್ದು, ಮೇ ದಿನವನ್ನು ಉತ್ಸಾಹಭರಿತವಾಗಿ ಆಚರಿಸಿದರು. ಕೆಲವೊಂದು ಕಾರ್ಖಾನೆಗಳ ಮುಂದೆ ಕೆಂಬಾವುಟವನ್ನು ಹಾರಿಸಿ, ಮೇ ದಿನವನ್ನು ಆಚರಿಸಿದ ಕಾರ್ಮಿಕರು ಸಂಜೆ ಹೊತ್ತಿನಲ್ಲಿ ನಾಲ್ಕು ಕಡೆಗಳಿಂದ ಮೆರವಣಿಗೆಯಲ್ಲಿ ಬಂದು ಬನ್ನಪ್ಪ ಪಾರ್ಕಿನಲ್ಲಿ ಸಭೆ ಸೇರಿದರು. ನಗರದ ಮಿನರ್ವ ಸರ್ಕಲ್, ಮೈಸೂರು ರಸ್ತೆ, ಚಿಕ್ಕಲಾಲ್‌ಬಾಗ್ ಮತ್ತು ಮೆಯೊ ಹಾಲ್ ಪ್ರದೇಶಗಳಿಂದ ಸಿಐಟಿಯು ನೇತೃತ್ವದಲ್ಲಿ ಬಂದ ಕಾರ್ಮಿಕರು ಘೋಷಣೆ ಕೂಗುತ್ತಾ ಬನ್ನಪ್ಪ ಪಾರ್ಕನ್ನು ಸೇರಿದಾಗ, ಇಡೀ ಪ್ರದೇಶವೇ ಕೆಂಪಿನಿಂದ ಕಂಗೊಳಿಸುತ್ತಿತ್ತು. ಈ ಸಭೆಗೆ ಬ್ಯಾಂಕ್, ವಿಮಾ ನೌಕರರು, ಸಾರ್ವಜನಿಕ ಉದ್ದಿಮೆಗಳ ನೌಕರರೂ ಸೇರಿಕೊಂಡರು.

ನಂತರ ನಡೆದ ಬಹಿರಂಗ ಸಭೆಯಲ್ಲಿ ಸಿಐಟಿಯು ಪ್ರಧಾನ ಕಾರ್ಯದರ್ಶಿ ಹಾಗೂ ಅಖಿಲಭಾರತ ಉಪಾಧ್ಯಕ್ಷರಾದ ವಿ.ಜೆ.ಕೆ.ನಾಯರ್‌ರವರು ಮಾತನಾಡಿ ಎಡಪಕ್ಷಗಳು ತೀವ್ರವಾಗಿ ವಿರೋಧಿಸುತ್ತಿದ್ದರೂ, ಕೇಂದ್ರಸರ್ಕಾರವು ಜಾಗತೀಕರಣ, ಖಾಸಗೀಕರಣ ನೀತಿಯನ್ನು ಕೈಬಿಡುತ್ತಿಲ್ಲ. ಈ ಹಿನ್ನೆಲೆಯಲ್ಲಿ ಕಾರ್ಮಿಕವರ್ಗವು ಐಕ್ಯತೆಯಿಂದ ಹೋರಾಟವನ್ನು ಮುಂದುವರಿಸಬೇಕಾಗಿದೆ ಎಂದು ಹೇಳಿದರು. ಕರ್ನಾಟಕ ರಾಜ್ಯದಲ್ಲಿಯೂ ಕಾರ್ಮಿಕರ ವಿವಾದಗಳಲ್ಲಿ ಪೋಲೀಸರ ಮಧ್ಯಪ್ರವೇಶ ಹೆಚ್ಚುತ್ತಿದ್ದು ಬಹುತೇಕ ಎಲ್ಲಾ ಸಂದರ್ಭಗಳಲ್ಲಿ ಮಾಲಿಕರ ಪರ ವರ್ತಿಸುತ್ತಿದ್ದಾರೆ. ಈ ನೀತಿಗೆ ತಡೆಹಾಕದಿದ್ದಲ್ಲಿ ಮುಂದಿನ ದಿನಗಳಲ್ಲಿ ಉಗ್ರ ಹೋರಾಟ ಹಮ್ಮಿಕೊಳ್ಳಬೇಕಾಗುತ್ತದೆ ಎಂದು ಎಚ್ಚರಿಸಿದರು.

ಸಿಐಟಿಯು ಬೆಂಗಳೂರು ಜಿಲ್ಲಾ ಅಧ್ಯಕ್ಷರಾದ ಇ.ಕೆ.ಎನ್.ರಾಜನ್ ಅಧ್ಯಕ್ಷತೆ ವಹಿಸಿದ್ದ ಸಭೆಯಲ್ಲಿ ಹೆಚ್.ಎನ್.ಗೋಪಾಲಗೌಡ, ಮೀನಾಕ್ಷಿ ಸುಂದರಂ, ಕೆ.ಎಸ್.ಸುಬ್ರಹ್ಮಣ್ಯ ಮೊದಲಾದವರು ಮಾತನಾಡಿದರು. ವಿಮಾನೌಕರ ಸಂಘದ ಮುಖಂಡರಾದ ವಿಜಯಕುಮಾರ್ ಅವರು ವಂದಿಸಿದರು.



ಬಿಜಾಪುರ : ನಗರದ ಸಿದ್ದೇಶ್ವರ ದೇವಸ್ಥಾನದ ಬಳಿ ಕಾರ್ಮಿಕ ಸಂಘಟನೆಗಳ ಜಂಟಿ ಸಮಿತಿಯ ಸಂಚಾಲಕರಾದ ವಿ.ಎಂ.ಕಾಳೆಯವರ ನೇತೃತ್ವದಲ್ಲಿ ಮೇ ದಿನವನ್ನು ಆಚರಿಸಲಾಯಿತು. ಸಭೆಯಲ್ಲಿ ಎಐಟಿಯುಸಿ ಮುಖಂಡ ಉತ್ತಮ ಕಾಂಬಳೆ, ಸಿಐಟಿಯು ನಾಯಕ, ವಿ.ಎಂ.ಸೊನ್ನದ, ರಾಜ್ಯ ಸರಕಾರಿ ನೌಕರರ ಒಕ್ಕೂಟದ ಜಿ.ಬಿ.ಸುರೇಶ್, ಬಿ.ಎಲ್.ಡಿ.ಯ ಅನಿಲ ಸುತರಾಯ, ಲಾರಿ ಹಮಾಲರ ಸಂಘದ ಮಸಳಿ, ಗ್ರಾಮೀಣ ಬ್ಯಾಂಕಿನ ಜಿ.ಟಿ.ಗಾಂಧಿ ಮೊದಲಾದವರು ಭಾಗವಹಿಸಿದ್ದರು.

ಕೋಲಾರ : ಕೋಲಾರ ಜಿಲ್ಲೆಯ ಕೆ.ಜಿ.ಎಫ್, ಚಿಕ್ಕಬಳ್ಳಾಪುರ ಮತ್ತು ಕೋಲಾರದಲ್ಲಿ ಮೇ ದಿನ ಆಚರಿಸಿದ ವರದಿಗಳು ಬಂದಿವೆ. ಕೋಲಾರದ ಕೈಗಾರಿಕಾ ಪ್ರದೇಶದಲ್ಲಿ ಮತ್ತು ಕೆ.ಎಂ.ಎಫ್‌ನಲ್ಲಿ ನಡೆದ ಪ್ರತ್ಯೇಕ ಸಮಾರಂಭಗಳಲ್ಲಿ ಸಿಐಟಿಯು ಕೋಲಾರ ಜಿಲ್ಲಾ ಅಧ್ಯಕ್ಷರಾದ ಗಾಂಧಿನಗರ ನಾರಾಯಣಸ್ವಾಮಿ ಮತ್ತಿತರ ಮುಖಂಡರು ಭಾಗವಹಿಸಿದ್ದರು.

ಚಿಕ್ಕಬಳ್ಳಾಪುರದಲ್ಲಿ ನಡೆದ ಮೇ ದಿನಾಚರಣೆಯು ಹಿರಿಯ ರೈತಮುಖಂಡರಾದ ಕಾ.ಲಕ್ಷಯ್ಯನವರ ನೇತೃತ್ವದಲ್ಲಿ ನಡೆಯಿತು.

ಕೆ.ಜಿ.ಎಫ್‌ನಲ್ಲಿ ಕಾರ್ಮಿಕರ ಹಬ್ಬ : ಕೋಲಾರ ಚಿನ್ನದ ಗಣಿ ಪ್ರದೇಶ (ಕೆ.ಜಿ.ಎಫ್) ಕರ್ನಾಟಕದಲ್ಲಿ ಮೊತ್ತ ಮೊದಲ ಕಾರ್ಮಿಕ ಸಂಘಟನೆನ್ನು ಕಟ್ಟಿರುವ ಕೀರ್ತಿಯನ್ನು ಹೊಂದಿ'ದೆ. ಇಲ್ಲಿ ಮೇ ದಿನಾಚರಣೆಯನ್ನು ಕ್ರಾಂತಿಕಾರಿ ಕಣ್ಣೋಟಕ್ಕೆ ತಕ್ಕಂತೆ ಆಚರಿಸಲಾಯಿತು. ಮೇ 1ನೇ ತಾರೀಖಿನ ಬೆಳಗ್ಗಿಯಿಂದಲೇ ತಮ್ಮ ಮನೆಗಳಲ್ಲಿ, ಪ್ರದೇಶಗಳಲ್ಲಿ ಕೆಂಬಾವುಟವನ್ನು ಹಾರಿಸಿ, ಆಟೋರಿಕ್ಷಾ, ದ್ವಿಚಕ್ರವಾಹನ, ಸೈಕಲ್ಲು, ಕಾಲ್ನಡಿಗೆಗಳಲ್ಲಿ ಮೆರವಣಿಗೆಗೆ ಸಜ್ಜಾದರು. ಉರಿಗಂನಿಂದ ಮೆರವಣಿಗೆ ಹೊರಟ ಕಾರ್ಮಿಕರು ರಾಬರ್ಟ್‌ಸನ್ ಪೇಟೆಯ ಪ್ರಮುಖ ಬೀದಿಗಳಲ್ಲಿ ಸಂಚರಿಸಿ ಮದ್ಯಾಹ್ನ 12.00 ಗಂಟೆಯ ಹೊತ್ತಿಗೆ ಸಭೆ ನಡೆಸಿದರು.

ಮಾಜಿಶಾಸಕ ಟಿ.ಎಸ್.ಮಣಿ ಮೇ ದಿನದ ಬಾವುಟವನ್ನು ಏರಿಸಿದ್ದು, ಹಿರಿಯ ಮುಖಂಡರಾದ ಸವರಿದಾಸ್, ಬಿಜಿಎಂಎಲ್‌ನ ಮುಖಂಡರಲ್ಲೊಬ್ಬರಾದ ಅರ್ಜುನನ್ ಮೊದಲಾದವರು ಮಾತನಾಡಿದರು.

ಸಂಜೆ ಆಂಡರ್ಸ್‌ನ್ ಪೇಟೆಯಲ್ಲಿ ನಡೆದ ಬೃಹತ್ ಬಹಿರಂಗ ಸಭೆಯಲ್ಲಿ ತಮಿಳುನಾಡಿನ 'ತೀಕದಿರ್' ಪತ್ರಿಕೆಯ ಸಂಪಾದಕ ಅಗಸ್ತ್ಯಲಿಂಗಂ ಮೇ ದಿನದ ಮಹತ್ವದ ಕುರಿತು ವಿವರಿಸಿ, ಇಂದಿನ ಸರಕಾರಗಳ ನೀತಿಗಳ ವಿರುದ್ಧ ಕಾರ್ಮಿಕರು ಇತರ ಜನವಿಭಾಗಳೊಂದಿಗೆ ಸೇರಿ ಐಕ್ಯತೆಯಿಂದ ಹೋರಾಡಬೇಕಾದ ಮಹತ್ವವನ್ನು ವಿವರಿಸಿದರು.

ಕೆ.ಜಿ.ಎಫ್. ನ ಪ್ರಮುಖ ಬೀದಿ, ವೃತ್ತಗಳಲ್ಲಿ ಕೆಂಪು ಪತಾಕೆಗಳಿಂದ ಸಿಂಗರಿಸಲಾಗಿತ್ತು. ಅದೇ ದಿನ ಇನ್ನೊಂದು ಮೇ ದಿನಾಚರಣೆಯ ಸಭೆ ಬಂಗಾರಪೇಟೆ ಬಸ್‌ಸ್ಟಾಂಡ್ ಬಳಿ ನಡೆಯಿತು.

ಸಾಧಾರಣಾ 300 ಕ್ಕೂ ಹೆಚ್ಚು ದಿನಗೂಲಿ ನೌಕರರು, ರೈಲ್ವೆ ಕ್ಯಾಂಟೀನ್ ಕಾರ್ಮಿಕರು ಮೊದಲಾದವರು ಸೇರಿದ್ದು ಬೆಂಗಳೂರಿನ ಸಿಐಟಿಯು ಮುಖಂಡ ವೀರಾಸ್ವಾಮಿಯವರು ಮಾತನಾಡಿದರು.

ಉಡುಪಿ ಜಿಲ್ಲೆ: ಉಡುಪಿ ಜಿಲ್ಲೆಯಲ್ಲಿ ಉಡುಪಿ, ಬ್ರಹ್ಮಾವರ, ಕುಂದಾಪುರಗಳಲ್ಲಿ ಮೇ ದಿನ ಆಚರಿಸಿದ ವರದಿಗಳು ಬಂದಿವೆ.

ಕುಂದಾಪುರದಲ್ಲಿ ಒಂದು ಸಾವಿರಕ್ಕೂ ಹೆಚ್ಚು ಕಾರ್ಮಿಕರು ಮೆರವಣಿಗೆ ನಡೆಸಿದ್ದು, ನಂತರ ನಡೆದ ಬಹಿರಂಗ ಸಭೆಯನ್ನು ಉದ್ದೇಶಿಸಿ ಶಾಸಕ ಜಿ.ವಿ.ಶ್ರೀರಾಮರೆಡ್ಡಿಯವರು ಮಾತನಾಡುತ್ತಾ ಕೋಮುವಾದಿಗಳ ಅಟ್ಟಹಾಸ ಹೆಚ್ಚುತ್ತಿರುವ ಕರಾವಳಿ ಪ್ರದೇಶಗಳಲ್ಲಿ ಕಾರ್ಮಿಕ ವರ್ಗ ಅಲ್ಪಸಂಖ್ಯಾತರ ರಕ್ಷಣೆಗೆ ನಿಲ್ಲಬೇಕಾದ ಅಗತ್ಯವನ್ನು ಒತ್ತಿಹೇಳಿದರು. ಉಡುಪಿಯಲ್ಲಿ ಅಲ್ಪಸಂಖ್ಯಾತರಿಗೆ ಸೇರಿದ ಇಬ್ಬರನ್ನು ಬೆತ್ತಲೆ ಮಾಡಿದ ಕೃತ್ಯವನ್ನು ಹೀನಾಯ ಎಂದು ಬಣ್ಣಿಸಿದ ಅವರು ಇದನ್ನು ಸಮರ್ಥಿಸುವ ಸಂಘ ಪರಿವಾರವನ್ನು ಮಟ್ಟಹಾಕಬೇಕೆಂದು ಕರೆ ನೀಡಿದರು.

ಸಿಐಟಿಯು ನ ರಾಜ್ಯ ಉಪಾಧ್ಯಕ್ಷ ಹಾಗೂ ಸಿಪಿಐ(ಎಂ)ನ ಕಾರ್ಯದರ್ಶಿ ಮಂಡಳಿ ಸದಸ್ಯ ಕೆ.ಶಂಕರ್‌ರವರು ಅಧ್ಯಕ್ಷತೆ ವಹಿಸಿದ್ದು ಮಹಾಬಲ ವಡೇರಹೋಬಳಿ ಸ್ವಾಗತಿಸಿದರು ಹಾಗೂ ಮುತ್ತಯ್ಯ ಸಾಲ್ಯಾನ ವಂದಿಸಿದರು.

ಬ್ರಹ್ಮಾವರದಲ್ಲಿ ನಡೆದ ಬಹಿರಂಗ ಸಭೆಯಲ್ಲಿ ಕಟ್ಟಡ ಕಾರ್ಮಿಕರ ಸಂಘದ ಅಧ್ಯಕ್ಷರಾದ ಗಣಪತಿ ನಾಯಕ ಅಧ್ಯಕ್ಷತೆ ವಹಿಸಿದ್ದು ಸಿಐಟಿಯು ಮುಖಂಡ ವಿಠಲ ಪೂಜಾರಿ ಸಿಐಟಿಯು ನೇತೃತ್ವದಲ್ಲಿ ನಡೆಯುತ್ತಿರುವ ಹೋರಾಟದ ಬಗ್ಗೆ ವಿವರಿಸಿ, ಮುಂಬರುವ ಹೋರಾಟಗಳಲ್ಲಿ ಸಮರಶೀಲರಾಗಿ ಭಾಗವಹಿಸಬೇಕೆಂದು ಕರೆ ನೀಡಿದರು. ಸಿಪಿಐ(ಎಂ)ನ ರಾಜ್ಯ ಸಮಿತಿ ಸದಸ್ಯ ಬಾಲಕೃಷ್ಣ ಶೆಟ್ಟಿಯವರು ಮೇ ದಿನದ ಮಹತ್ವವನ್ನು ವಿವರಿಸಿ, ಕೇಂದ್ರ ಮತ್ತು ರಾಜ್ಯಸರ್ಕಾರಗಳ ಜನವಿರೋಧಿ ನೀತಿಯ ವಿರುದ್ಧ ಹಾಗೂ ಕೋಮುವಾದಿಗಳ ವಿರುದ್ಧ ಐಕ್ಯ ಹೋರಾಟವನ್ನು ಮುಂದುವರಿಸಬೇಕಾದ ಅಗತ್ಯವನ್ನು ತಿಳಿಸಿದರು.

ಬೆಳಗಾಂ ಜಿಲ್ಲೆಯಲ್ಲಿ ಬೆಳಗಾಂ, ಅಥಣಿ, ಚಿಕ್ಕೋಡಿ, ರಾಮದುರ್ಗ, ಸವದತ್ತಿ ಪ್ರದೇಶಗಳಲ್ಲಿ ಮೇ ದಿನ ಆಚರಿಸಲಾಗಿದೆ. ರಾಮದುರ್ಗದಲ್ಲಿ ವಿ.ಪಿ.ಕುಲಕರ್ಣಿ, ಸವದತ್ತಿಯಲ್ಲಿ ಎಸ್.ಎಸ್.ನಾಯಕ್, ಕಪ್ಪಣ್ಣನವರ್, ಅಥಣಿಯಲ್ಲಿ ಎಸ್.ವಿ.ಹಳ್ಳಿ, ಬೈಲಹೊಂಗಲದಲ್ಲಿ ಬಿ.ಎಸ್. ಸೊಪ್ಪಿನ್, ಬೆಳಗಾಂನಲ್ಲಿ ಇಂಡಾಲ್ ನೌಕರರ ಸಂಘದ ಮುಖಂಡ ಹಾಗೂ ಸಿಐಟಿಯು ಜಿಲ್ಲಾ ಅಧ್ಯಕ್ಷರಾದ ಕರಾಡೆಯವರು ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು.

ಉತ್ತರ ಕನ್ನಡದಲ್ಲಿ ದಾಂಡೇಲಿ, ಹೊನ್ನಾವರ, ಭಟ್ಕಳದಲ್ಲಿ ಕಾರ್ಮಿಕರು ಮೇ ದಿನ ಆಚರಿಸಿದ್ದು, ಭಟ್ಕಳದಲ್ಲಿ ಸಿಐಟಿಯು ರಾಜ್ಯ ಉಪಾಧ್ಯಕ್ಷರಾದ ಕೆ.ಶಂಕರ್ ಮುಖ್ಯ ಅತಿಥಿಯಾಗಿದ್ದರು. ತಿಲಕ ಜಟ್ಟಿಗೌಡ ಅಧ್ಯಕ್ಷತೆ ವಹಿಸಿದ್ದರು. ದಾಂಡೇಲಿಯಲ್ಲಿ ಸಿಐಟಿಯು ಮುಖಂಡರಾದ ಎಸ್.ವಿ.ಸಾವಂತ್, ಹೆಚ್.ಬಿ.ನಾಯಕ್, ಎಂ.ಬಿ.ನಾಯಕ್ ಮೊದಲಾದವರು ಭಾಗವಹಿಸಿದ್ದರು.

ವಿವಿಧ ಕಾರ್ಮಿಕ ಸಂಘಟನೆಗಳು ಸೇರಿ ಗುಲ್ಬರ್ಗಾದಲ್ಲಿ ಮೇ ದಿನವನ್ನು ಆಚರಿಸಿದ್ದು ಕ.ಪ್ರಾಂತ ರೈತ ಸಂಘದ ರಾಜ್ಯಾಧ್ಯಕ್ಷ ಹಾಗೂ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಮಾರುತಿ ಮಾನ್ಪಡೆ ಮುಖ್ಯ ಅತಿಥಿಗಳಾಗಿದ್ದರು. ಶಾಪುರದಲ್ಲಿ ನಡೆದ ಸಭೆಯಲ್ಲಿ ಕರ್ನಾಟಕ ರಾಜ್ಯ ಗ್ರಾಮ ಪಂಚಾಯತ್ ನೌಕರರ ಸಂಘದ ಪ್ರಧಾನ ಕಾರ್ಯದರ್ಶಿ ಮಂಟನಗೌಡ

ಪುಟ 8 ಕ್ಕೆ

ಜಗದಗಲ ಪ್ರತಿಭಟನೆ


ಜಪಾನಿನಿಂದ ಅಮೇರಿಕದವರೆಗೆ ಎಲ್ಲಾ ಪ್ರ ಪ್ರತಿಭಟನಾ ರ್‍ಯಾಲಿಗಳಲ್ಲಿ ಲಕ್ಷಾಂತರ ಜನ ವಿರೋಧಿಸಿ ನೇಪಾಳದಲ್ಲಿ ತುರ್ತು ಪರಿಸ್ಥಿ ಹಕ್ಕುಗಳಿಗೆ ಒತ್ತಾಯಿಸಿತು. ಫಿಲಿಫೈನ್ಸ್‌ನಲ್ಲಿ ಎಂಬಷ್ಟು ತೀವ್ರವಾಗಿತ್ತು. ಫ್ರಾನ್ಸ್, ಜರ್ಮ ಪ್ರತಿಭಟನಾ ರ್‍ಯಾಲಿಗಳು ತಮ್ಮದೇ ವಿಶಿಷ್ಟ ಪ್ರತಿಭಟನೆಯ ಒಂದು ಚಿತ್ರ.

ಪಾಕಿಸ್ತಾನದಲ್ಲಿ ಹಲವಾರು ನಗರಗಳಲ್ಲಿ ಸಾವಿರಾರು ಕಾರ್ಮಿಕರು ಕಾಂಟ್ರಾಕ್ಟ್ ಪದ್ಧತಿ (ಉದ್ಯೋಗದಲ್ಲಿ ಅಭದ್ರತೆ ತರುವ) ಮತ್ತು ಕಡಿಮೆ ವೇತನದ ಬಗ್ಗೆ ಮುಖ್ಯವಾಗಿ ಪ್ರತಿಭಟಿಸಿದರು. ಅತ್ಯಂತ ದೊಡ್ಡ ರ್‍ಯಾಲಿ ಲಾಹೋರ್‌ನಲ್ಲಿ ನಡೆದರೆ, ಕರಾಚಿ, ಮುಲ್ತಾನ್ ಮತ್ತು ಫೈಸಲಾಬಾದ್‌ಗಳಲ್ಲೂ ದೊಡ್ಡ ರ್‍ಯಾಲಿಗಳು ನಡೆದವು. ಮಾಸಿಕ ಕನಿಷ್ಟ ಕೂಲಿಯನ್ನು ರೂ.3000ಕ್ಕೆ ಏರಿಸಬೇಕೆಂದು ಎಲ್ಲಾ ರ್‍ಯಾಲಿಗಳಲ್ಲಿ ಒತ್ತಾಯಿಸಲಾಯಿತು.

ಬಾಂಗ್ಲಾ ದೇಶದಲ್ಲೂ ಕನಿಷ್ಟ ಕೂಲಿ ನಿಗದಿ ಮಾಡಲು ಒತ್ತಾಯ ಮೇ ದಿನದ ರ್‍ಯಾಲಿಯಲ್ಲಿ ಪ್ರಮುಖವಾಗಿತ್ತು. ಡಾಕ್ಕಾದಲ್ಲಿ ಸುಮಾರು 5 ಸಾವಿರ ಕಾರ್ಮಿಕರು ರ್‍ಯಾಲಿಯಲ್ಲಿ ಭಾಗವಹಿಸಿದ್ದರು. ನೇಪಾಳದಲ್ಲಿ ಸ್ವಾಭಾವಿಕವಾಗಿಯೇ ಮೇದಿನದ ರ್‍ಯಾಲಿ ರಾಜ ಹೊರಿಸಿದ ತುರ್ತು ಪರಿಸ್ಥಿತಿ ವಿರುದ್ಧ, ಪ್ರಜಾಪ್ರಭುತ್ವ ವ್ಯವಸ್ಥೆ ಮತ್ತೆ ಸ್ಥಾಪಿಸುವಂತೆ ಒತ್ತಾಯಿಸಿ ಸಾವಿರಾರು ಜನ ಕಾಠ್ಮಂಡು ಬೀದಿಗಳಲ್ಲಿ ಪ್ರದರ್ಶನ ನಡೆಸಿದರು. ಇತ್ತೀಚೆಗೆ ತುರ್ತುಪರಿಸ್ಥಿತಿ ಜಾರಿ ಹಿಂತೆಗೆದುಕೊಂಡ ನೇಪಾಳಿ ರಾಜನ ನಾಟಕದ ನಂತರ ಮೊದಲ ದೊಡ್ಡ ರ್‍ಯಾಲಿಯಾಗಿತ್ತು. 'ಸರ್ವಾಧಿಕಾರ ನಾಶವಾಗಲಿ' 'ಪ್ರಜಾಪ್ರಭುತ್ವ ಚಿರಾಯುವಾಗಲಿ' ಎಂಬ ಬ್ಯಾನರ್‌ಗಳು ರ್‍ಯಾಲಿಯಲ್ಲಿ ಕಂಡುಬಂದವು.

ಫಿಲಿಪೈನ್ಸ್‌ನಲ್ಲಿ ರಾಜಧಾನಿ ಮೆನಿಲಾದಲ್ಲಿ 15 ಸಾವಿರಕ್ಕೂ ಹೆಚ್ಚು ಕಾರ್ಮಿಕರು ಪ್ರತಿಭಟನಾ ಪ್ರದರ್ಶನ ನಡೆಸಿದರು. ಹೆಚ್ಚಾಗಿ ಶಾಂತಿಯುತವಾಗಿದ್ದ ಪ್ರತಿಭಟನಾ ಪ್ರದರ್ಶನದಲ್ಲಿದ್ದ ಕೆಲವರು ಅಧ್ಯಕ್ಷೀಯ ಅರಮನೆಯತ್ತ ಹೋಗಲು ಪ್ರಯತ್ನಿಸಿದ ನೆಪದ ಮೇಲೆ ಆ ದಾರಿಯಲ್ಲಿ ಟ್ರಕ್‌ಗಳನ್ನು ಬೇಲಿಯನ್ನು ಹಾಕಲಾಯಿತು. ಹಿಂದಿನ ದಿನ ಮಾಜಿ ಮಿಲಿಟರಿ ಅಧಿಕಾರಿಯೊಬ್ಬ ಬಡತನ ಮತ್ತು ಅನ್ಯಾಯದ ವಿರುದ್ಧ ಹೋರಾಟದಲ್ಲಿ ಅಧ್ಯಕ್ಷ ಅಲೋಯ್ಗೆ ಒಂದು ಅಡ್ಡಿ, ಅದನ್ನು ಕಿತ್ತು ಹಾಕಲು ಮಿಲಿಟರಿ ಮತ್ತು ಪೋಲೀಸು ಭಾಗವಹಿಸುವ 'ಕ್ರಾಂತಿಕಾರಿ ಮಧ್ಯಂತರ ಸರ್ಕಾರ' ರಚನೆಯಾಗಬೇಕು ಎಂದು ಹೇಳಿಕೆ ನೀಡಿದ್ದರೂ, ಸರ್ಕಾರಕ್ಕೆ ಉತ್ತಮ ನೆಪವಾಯಿತು.


ಮಲೇಷ್ಯಾದಲ್ಲಿ ವಲಸೆಗಾರ ಕಾರ್ಮಿಕರ ವಿರುದ್ಧ ಸರ್ಕಾರ ನಡೆಸಿರುವ ಕಾರ್ಯಾಚರಣೆ ವಿರೋಧಿಸಿ ರ್‍ಯಾಲಿಗಳು ನಡೆದವು. ವಲಸೆಗಾರರಿಗೆ



ಷ ಮೇ ದಿನಾಚರಣೆ

ರಗಳಲ್ಲಿ ಮೇ ದಿನಾಚರಣೆಯ ದ್ದರು. ಪಾಕಿಸ್ತಾನದಲ್ಲಿ ಕಾಂಟ್ರಾಕ್ಟ್ ಪದ್ಧತಿ ಮೊದಲ ಪ್ರತಿಭಟನೆ ಪ್ರಜಾಪ್ರಭುತ್ವ ರ ಪ್ರದರ್ಶನ ಸರ್ಕಾರ ಉರುಳಿಸುತ್ತದೋ ವೆಲಾ, ಕ್ಯೂಬಾದ ಮೇ ದಿನದ ತ್ತು. ಜಗದಗಲ ಮೇ ದಿನದ

ಕಾರ್ಮಿಕರಾಗಿ ಕನಿಷ್ಠ ಹಕ್ಕುಗಳನ್ನು ವಂಚಿಸುತ್ತಿರುವ ಸರ್ಕಾರದ ನೀತಿಗಳನ್ನು ಖಂಡಿಸಲಾಯಿತು. ಹಾಂಗ್‌ಕಾಂಗ್‌ನಲ್ಲಿ ಇತರ ಏಶ್ಯನ್ ದೇಶಗಳಿಂದ ಬಂದ ಸಾವಿರಾರು ಮಹಿಳಾ ಮನೆಗೆಲಸದ



ವೆನುಜುವೆಲಾದಲ್ಲಿ ಮೇ ದಿನ

ಕಾರ್ಮಿಕರು ಪ್ರತಿಭಟನಾ ರ್‍ಯಾಲಿಯ ದೊಡ್ಡ ಭಾಗವಾಗಿದ್ದರು. ನಾಗರಿಕ ಕೆಲಸದ ಅವಧಿ ಮತ್ತು ಕನಿಷ್ಠ ಕೂಲಿಗೆ ಅವರ ಒತ್ತಾಯವಾಗಿತ್ತು.

ಜಪಾನಿನಲ್ಲಿ ಈ ಬಾರಿಯ ಮೇ ದಿನದ ಪ್ರತಿಭಟನೆ ಅಣ್ವಸ್ತ್ರಗಳ ವಿರುದ್ಧವಾಗಿತ್ತು. ಜಗತ್ತಿನಾದ್ಯಂತ ಅಣ್ವಸ್ತ್ರಗಳನ್ನು ನಿಷೇಧಿಸಬೇಕೆಂದು ಒತ್ತಾಯಿಸಿ ಲಕ್ಷಾಂತರ ಜನ ಪ್ರದರ್ಶನ ನಡೆಸಿದರು. ಎರಡನೇ ಮಹಾಯುದ್ಧದಲ್ಲಿ ಜಪಾನಿನ ಮೇಲೆ ಅಣ್ವಸ್ತ್ರ ದಾಳಿ ಮತ್ತು ಶರಣಾಗತಿಯ 60ನೇ ವಾರ್ಷಿಕ ಹತ್ತಿರ ಬರುತ್ತಿದ್ದು, ಅದು ಪ್ರತಿಭಟನಾ ಪ್ರದರ್ಶನಗಳ ಮುಖ್ಯ ವಿಷಯವಾಗಿತ್ತು.

ರಶ್ಯಾದಲ್ಲಿ ಸಾವಿರಾರು ಕಾರ್ಮಿಕರು ದೊಡ್ಡ ಪ್ರತಿಭಟನಾ ರ್‍ಯಾಲಿ ನಡೆಸಿದರು. ಕಮ್ಯುನಿಸ್ಟ್ ಪಕ್ಷ ಮತ್ತು ಅದರ ಟ್ರೇಡ್ ಯೂನಿಯನ್‌ಗಳು ರ್‍ಯಾಲಿಯಲ್ಲಿ ಪ್ರಮುಖ ಪಾತ್ರ ವಹಿಸಿದ್ದವು. ಲೆನಿನ್, ಸ್ಟಾಲಿನ್‌ರ ಭಾವಚಿತ್ರ ಹಿಡಿದು ಪ್ರತಿಭಟನಾಕಾರರು 'ಏಳಿ! ಎದ್ದೇಳಿ! ರಶ್ಯಾ ಉಳಿಸಿ' ಮುಂತಾದ ಘೋಷಣೆಗಳನ್ನು ಕೂಗುತ್ತಿದ್ದರು. ಸಣ್ಣಪುಟ್ಟ ಉಗ್ರಗಾಮಿ ಗುಂಪುಗಳಿಂದ ಹಿಂಸಾಚಾರವೂ ನಡೆಯಿತು. ಕೆಲವು ಪ್ರತಿಭಟನಾಕಾರರು ಅಧ್ಯಕ್ಷ ಪುಟಿನ್‌ರ ಚಿತ್ರಗಳನ್ನು ಸುಟ್ಟರು. ಔಷಧಿ, ನೀರು, ವಿದ್ಯುತ್ ಸೌಕರ್ಯಗಳ ಮತ್ತು ಸಾಗಾಣಿಕೆ ಮೇಲಿನ ಸಬ್ಸಿಡಿ ಕಡಿತ ಮಾಡಿರುವ ನೀತಿಗಳನ್ನು ವಿರೋಧಿಸಿದರು.



ಉಕ್ರೇನಿನ ರಾಜಧಾನಿಯಲ್ಲಿ ಎರಡು ಸಾವಿರಕ್ಕೂ ಹೆಚ್ಚು ಕಾರ್ಮಿಕರು ಪ್ರತಿಭಟನೆ ನಡೆಸಿ 'ಅಧ್ಯಕ್ಷರೇ ಉಕ್ರೇನ್ ಅಮೆರಿಕದ ಒಂದು ಪ್ರಾಂತ್ಯವಲ್ಲ' ಅಮೆರಿಕ ಮತ್ತು ಯುರೋಪಿಯನ್ ದೇಶಗಳ ಕೈಗೊಂಬೆ ಅಧ್ಯಕ್ಷ - ಎಂದೆಲ್ಲಾ ಮೊದಲಿಸಿದರು.

ಜರ್ಮನಿಯಲ್ಲಿ ಹಲವು ಪ್ರಮುಖ ನಗರಗಳಲ್ಲಿ ಸೇರಿದಂತೆ ಐದು ಲಕ್ಷಕ್ಕೂ ಹೆಚ್ಚು ಕಾರ್ಮಿಕರು ಮೇ ದಿನದ ರ್‍ಯಾಲಿಗಳಲ್ಲಿ ಭಾಗವಹಿಸಿದರು ಎಂದು ವರದಿಯಾಗಿದೆ. ಕಂಪನಿ ಮ್ಯಾನೇಜ್‌ಮೆಂಟ್ ವೇತನ ಏರಿಸುವ, ಕಾರ್ಮಿಕರ ಉದ್ಯೋಗ, ವೇತನ, ಸವಲತ್ತು ಕಡಿತ ಮಾಡುವ ನೀತಿಗಳನ್ನು ತೀವ್ರವಾಗಿ ಖಂಡಿಸಲಾಯಿತು.

ಫ್ರಾನ್ಸ್‌ನಲ್ಲಿ ಲಕ್ಷಾಂತರ ಕಾರ್ಮಿಕರು ಭಾಗವಹಿಸಿದ ನಾಲ್ಕು ಪ್ರಮುಖ ರ್‍ಯಾಲಿಗಳು ನಡೆದವು. ಕಾರ್ಮಿಕರ ಹಕ್ಕುಗಳ ಮೇಲೆ ಸರ್ಕಾರದ ದಾಳಿ ಜತೆಗೆ, ಮೇ 29 ರಂದು ಯುರೋಪಿಯನ್ ಸಂವಿಧಾನದ ಬಗ್ಗೆ ನಡೆಯಲಿರುವ ಜನಮತ ಸಂಗ್ರಹ, ಸಹ ಸೇರಿಕೊಂಡಿತ್ತು. ಸರ್ಕಾರ ಮೇ 16 ರಂದು ಬರುವ ರಜಾದಿನ ರದ್ದು ಮಾಡಿದ್ದರ ಬಗ್ಗೆ ಪ್ರತಿಭಟನೆ ಸಹ ಇದರಲ್ಲಿ ಸೇರಿಕೊಂಡಿತು.

ಬ್ರಿಟನ್‌ನಲ್ಲಿ 40 ಸಾವಿರಕ್ಕೂ ಹೆಚ್ಚು ಕಾರ್ಮಿಕರು ಲಂಡನ್‌ನ ಮೇ ದಿನದ ರ್‍ಯಾಲಿಯಲ್ಲಿ ಭಾಗವಹಿಸಿದರು. ಬ್ರಿಟನ್‌ನ ಅತಿದೊಡ್ಡ ಯೂನಿಯನ್ - ಟ್ರೇಡ್ ಯೂನಿನ್ ಕಾಂಗ್ರೆಸ್ ಏರ್ಪಡಿಸಿತ್ತು. 'ಫ್ಯಾಸಿಸ್ಟ್ ವಿರುದ್ಧ ಐಕ್ಯತೆ' ಎಂದು ಬ್ಯಾನರ್ ಅಡಿಯಲ್ಲಿ ಇಡೀ ದಿನದ ಕಾರ್ಯಕ್ರಮ ನಡೆಯಿತು. ಹಾಡು, ಸಂಗೀತ, ಬ್ಯಾಂಡ್‌ಗಳು ಭಾಷಣಗಳ ನಡುವೆ ಇದ್ದವು.

ವೆನೆಜುವೆಲಾದಲ್ಲಿ 'ಎರಡು' ರ್‍ಯಾಲಿಗಳು

ವೆನೆಜುವೆಲಾದಲ್ಲಿ ಮೇ ದಿನದ ರ್‍ಯಾಲಿ ಈ ಬಾರಿ ಇಡೀ ಜಗತ್ತಿನ ಗಮನ ಸಳೆಯಿತು. ವೆನೆಜುವೆಲಾದ ವಿಚಿತ್ರವೆಂದರೆ ಅಲ್ಲಿನ 'ಅತಿದೊಡ್ಡ ಅಧಿಕೃತ ಯೂನಿಯನ್' ಚವೇಝ್ ಸರ್ಕಾರದ ಬದ್ಧ ವೈರಿ! ಕಂಪನಿ ಮ್ಯಾನೇಜ್‌ಮೆಂಟ್‌ನ ಜತೆ ಶಾಮೀಲಾಗಿರುವ ಕೆಲವು ಭ್ರಷ್ಟ ನಾಯಕರು ಎಂದರೆ ಹೆಚ್ಚು ಸರಿಯಾದೀತು. ಚವೇಝ್‌ರ ವಿರುದ್ಧ ತೈಲ ದಿಗ್ಬಂಧನಕ್ಕೆ ಕರೆಕೊಟ್ಟು ಸರ್ಕಾರ ಉರುಳಿಸಲು ಯತ್ನಿಸಿದ, ದುಷ್ಟರು ಇವರು.



ರಶಿಯಾದಲ್ಲಿ ಮೇ ದಿನ

ಮ್ಯಾನೇಜ್‌ಮೆಂಟ್ ಜತೆ ಸೇರಿ 'ಲಾಕೌಟ್' ನ್ನು 'ಮುಷ್ಕರ' ಎಂದು ಬಿಂಬಿಸಲು ಪ್ರಯತ್ನಸಿದ್ದರು. ಈ ಅಧಿಕೃತ ಯೂನಿಯನ್ ಸಿಟಿವಿ. ಈ ಯೂನಿಯನ್‌ನ 'ಭ್ರಷ್ಟ' ನಾಯಕರನ್ನು ವಿರೋಧಿಸಿ ಈಗ ಕಾಮಿಕರು ಯುಎನ್‌ಟಿ ಎಂಬ ಹೊಸ ಕೇಂದ್ರೀಯ ಯೂನಿಯನ್ ರಚಿಸಿಕೊಂಡಿದ್ದರು. ಈ ಮೇ ದಿನ ಎರಡು ಯೂನಿಯನ್‌ಗಳ ನಡುವೆ ಹಣಾಹಣಿಯ ದಿನವಾಗಿತ್ತು. ಬಲಪ್ರದರ್ಶನದ ದಿನವಾಗಿತ್ತು.

ಬಲ ಪ್ರದರ್ಶನದಲ್ಲಿ ಗೆದ್ದವರು ಯಾರು ಎಂದು ಯಾರಾದರೂ ಊಹಿಸಬಹುದು. ಸಿಟಿವಿ ಕೆಲವು ನೂರು ಕಾರ್ಮಿಕರನ್ನು ತರಲು ವಿಫಲವಾದರೆ, ಯುಎನ್‌ಟಿ ರ್‍ಯಾಲಿಗೆ ಲಕ್ಷಾಂತರ ಕಾರ್ಮಿಕರು, ನಾಗರಿಕರು ಹರಿದು ಬಂದರು. ಸಿಟಿವಿಯ ರ್‍ಯಾಲಿ ಒಂದು ಗಂಟೆಯಲ್ಲಿ ಮುಗಿದು ಹೋದರೆ, ಯುಎನ್‌ಟಿ ರ್‍ಯಾಲಿ ಇಡೀ ದಿನ ನಡೆಯುತ್ತಲೇ ಇತ್ತು. ಈಗಷ್ಟೇ ಒಪ್ಪಂದವಾಗಿ ಸರ್ಕಾರ ಘೋಷಿಸಿದ ಶೇಕಡಾ 26 ವೇತನ ಏರಿಕೆ ಸಾಲದು, ಎಂದು ಸಿಟಿವಿ ಗದ್ದಲ ಮಾಡಿತು ಅಷ್ಟೇ. ಆದರೆ ಯುಎನ್‌ಟಿ ರ್‍ಯಾಲಿಗೆ ಅಧ್ಯಕ್ಷ ಚವೇಝ್ ಸ್ವತಃ ಬಂದುದ್ದಲ್ಲದೆ, ಕೆಂಪು ಶರ್ಟು, ಧ್ವಜ, ಟೋಪಿಗಳ ಸಾಗರವಾಗಿತ್ತು. ಎಲ್ಲಾ ಖಾಸಗಿ ಮತ್ತು ಸಾರ್ವಜನಿಕ ಕ್ಷೇತ್ರದ ಕಾರ್ಖಾನೆಗಳಲ್ಲಿ ಕಾರ್ಮಿಕರು, ಮ್ಯಾನೇಜ್‌ಮೆಂಟ್‌ನಲ್ಲಿ ಪಾಲ್ಗೊಳ್ಳುವ ಚಳುವಳಿ ಆರಂಭವಾಗಿದೆ. ಯುಎನ್‌ಟಿ ರ್‍ಯಾಲಿಯಲ್ಲಿ ಅದೇ ಮಂತ್ರವಾಗಿತ್ತು. 'ಜಂಟಿ ಮ್ಯಾನೇಜ್‌ಮೆಂಟ್ ಕ್ರಾಂತಿ' ಘೋಷಣೆಯಾಗಿತ್ತು. ಇದಕ್ಕೆ ಚವೇಝ್ ಸರ್ಕಾರದ ಬೆಂಬಲ ಇದೆ. ಯುಎನ್‌ವಿ ರ್‍ಯಾಲಿ ಪೂರ್ಣವಾಗಿ ಗೆದ್ದಿತು. ಮಿಲಿಟರಿ ಕ್ಷಿಪ್ರಕ್ರಾಂತಿಗೆ ಬೆಂಬಲಿಸಿ ಅದರಲ್ಲಿ ಭಾಗವಹಿಸಿ ಬಂಧಿತರಾಗಿರುವ ಸಿಎನ್‌ವಿ



ಮಾಜಿ ಅಧ್ಯಕ್ಷರನ್ನು 'ರಾಜಕೀಯ ಕೈದಿ' ಎಂದು ಬಿಂಬಿಸಲು ಹಾಸ್ಯಾಸ್ಪದ ಪ್ರಯತ್ನ ನಡೆಯಲಿಲ್ಲ.

ವೆನಿಜುವೆಲಾದಲ್ಲಿ ನಡೆಯುತ್ತಿರುವ 'ಬೊಲಿವಾರಿಯ ಕ್ರಾಂತಿ' ಯುಎನ್‌ಟಿ ಯೂನಿಯನ್ ಸ್ಥಾಪನೆ, 'ಜಂಟಿ ಮ್ಯಾನೇಜ್‌ಮೆಂಟ್' ನ ಚಳುವಳಿಯೂ ಇನ್ನಷ್ಟು ಸಂಘಟನಾ ಹರವು, ಗಟ್ಟಿತನ ಪಡೆದುಕೊಂಡಿದೆ.

ಭಯೋತ್ಪಾದಕ ವ್ಯೋಸಾರಾನನ್ನು ವಾಪಸು ಕಳಿಸಿ : ಕ್ಯಾಸ್ಟ್ರೋ

ಕಳೆದ ಕೆಲವು ವರ್ಷಗಳಂತೆ ಈ ವರ್ಷವೂ ಜಗತ್ತಿನ ಅತ್ಯಂತ ದೊಡ್ಡ ಮೇ ದಿನದ ರ್‍ಯಾಲಿ ಕ್ಯೂಬಾದ ರಾಜಧಾನಿ ಹವಾನದಲ್ಲಿ ನಡೆಯಿತು. ಎಂದಿನಂತೆ ಲಕ್ಷಾಂತರ ಜನ ಹವಾನಾದ ಕ್ರಾಂತಿ ಚೌಕದಲ್ಲಿ ಸೇರಿದ್ದರು. ಕ್ಯಾಸ್ಟ್ರೋನ ದೀರ್ಘ ಭಾಷಣವನ್ನು ಆಲಿಸಿದರು. ಇಡೀದೇಶ ಇಂತಹ ಸಂದರ್ಭಗಳಲ್ಲಿ ಸಂವಾದದಲ್ಲಿ ತೊಡಗಿರುತ್ತದೆ.

ಕ್ಯಾಸ್ಟ್ರೋ ತಮ್ಮ ದೀರ್ಘ ಭಾಷಣದಲ್ಲಿ ಕ್ಯೂಬಾದ ಹತ್ತಿರ ಜೈವಿಕ ಅಸ್ತ್ರಗಳಿವೆ ಎಂಬ ಅಮೆರಿಕದ 'ಹಾಸ್ಯಾಸ್ಪದ' ಆಪಾದನೆ, ಕ್ಯೂಬಾದ ವಿರುದ್ಧ ಹಲವು ಭಯೋತ್ಪಾದಕ ಕೃತ್ಯಗಳನ್ನು ಎಸಗಿದ ಕುಖ್ಯಾತ ಭಯೋತ್ಪಾದಕ ವ್ಯೂಸಾರನಿಗೆ ಅಮೆರಿಕ ರಾಜಕೀಯ ಆಶ್ರಯದ ಬಗ್ಗೆ ಟೀಕೆ ಮತ್ತು ಕ್ಯೂಬಾ - ವೆನೆಜುವೆಲಾ ನಡುವೆ ಸಹಕಾರದ ಬಗ್ಗೆ ಮುಖ್ಯವಾಗಿ ಪ್ರಸ್ತಾಪಿಸಿದರು.

ಅಮೆರಿಕದ 'ಭಯೋತ್ಪಾದನೆ ವಿರುದ್ಧ ಯುದ್ಧ' ಮತ್ತು ಬೆಳೆಯುತ್ತಿರುವ 'ಭಯೋತ್ಪಾದಕ ದೇಶ'ಗಳ ಪಟ್ಟಿಯನ್ನು ತೀಕ್ಷ್ಣ ಶಬ್ದಗಳಲ್ಲಿ ಕ್ಯಾಸ್ಟ್ರೋ ಮೂದಲಿಸಿದರು. ಅಮೆರಿಕದ ಪ್ರತಿ-ಭಯೋತ್ಪಾದಕ ಕೇಂದ್ರದ ಅಂಕಿಸಂಖ್ಯೆಗಳ ಪ್ರಕಾರವೇ ಅಮೆರಿಕದ ಕ್ರಮಗಳ ಪರಿಣಾಮವಾಗಿ ಭಯೋತ್ಪಾದಕತೆ ಹೆಚ್ಚಿದೆ. 2003 ರಲ್ಲಿ 175 ಭಯೋತ್ಪಾದಕ ಕೃತ್ಯಗಳಿಂದ 2004 ರಲ್ಲಿ 651 ಕ್ಕೆ ಏರಿದೆ. ಹೆಚ್ಚು ಕಡಿಮೆ ನಾಲ್ಕು ಪಟ್ಟಾಗಿದೆ. ಕ್ಯೂಬಾದ ಬಳಿ ಜೈವಿಕ ಶಸ್ತ್ರಗಳಿವೆ. ಇಲ್ಲ ಜೈವಿಕ ಶಸ್ತ್ರಗಳ್ನು ತಯಾರಿಸುವ ನೈಪುಣ್ಯ ಇದೆ ಎಂಬ ಹಾಸ್ಯಾಸ್ಪದ ಹೇಳಿಕೆಗಳನ್ನು ನೀಡುತ್ತಿರುವುದನ್ನು ಮೂದಲಿಸಿದರು. ಕ್ಯೂಬಾದ ವಿರುದ್ಧ ಹುನ್ನಾರಗಳಲ್ಲಿ ವಿಶ್ವಸಂಸ್ಥೆಯಲ್ಲಿ, ಅಂತರಾಷ್ಟ್ರೀಯವಾಗಿ ಅಮೆರಿಕಕ್ಕೆ ಮುಖಭಂಗವಾಗುತ್ತಿರುವುದನ್ನು ಪ್ರಸ್ತಾಪಿಸಿದರು.

ಪ್ಯೂಸಾರಾ ಎಂಬ ಕ್ಯೂಬನ್ ಹುಟ್ಟಿನ 'ಪಶ್ಚಿಮ ಗೋಳಾರ್ಧದ ಕುಖ್ಯಾತ ಮತ್ತು ಅತ್ಯಂತ ಕ್ರೂರ ಭಯೋತ್ಪಾದಕನಿಗೆ ರಾಜಕೀಯ ಆಶ್ರಯ ನೀಡಿರುವ ಅಮೆರಿಕದ ಪ್ರಯತ್ನ ಗಳನ್ನು 'ಗೋಸುಂಬೆತನ', ಬುರುಡೆಗಳು, ಅನೈತಿಕತೆ ಮತ್ತು ಸಿನಿಕತನದ ಪರಮಾಧಿ' ಎಂದು ಕ್ಯಾಸ್ಟ್ರೋ ಕಟುವಾಗಿ ಟೀಕಿಸಿದರು. ವ್ಯೋಸಾರ 1976 ರಲ್ಲಿ ಕ್ಯೂಬನ್ ಜೆಟ್ ವಿಮಾನದ ಮೇಲೆ ಬಾಂಬ್ ದಾಳಿ ನಡೆಸಿ 73 ಜನರನ್ನು ಕೊಂದಿದ್ದಾನೆ. 2000 ರಲ್ಲಿ ಪನಾಮದಲ್ಲಿ ಕ್ಯಾಸ್ಟ್ರೋ ಹತ್ಯೆ ಪ್ರಯತ್ನ ನಡೆಸಿ ಬಂಧಿತನಾಗಿದ್ದ. ಕಳೆದ ವರ್ಷ ಪನಾಮ ಅಧ್ಯಕ್ಷ ಆತನಿಗೆ ಕ್ಷಮಾದಾನ ಕೊಟ್ಟು, ಆಮೇಲೆ ಆತ ಕಾಣೆಯಾಗಿದ್ದ. ಕ್ಯೂಬಾದ ಒಳಗೆ ಹಲವು ಬುಡಮೇಲು ಕೃತ್ಯಗಳನ್ನು ಯೋಜಿಸುವುದರಲ್ಲಿ ವ್ಯೋಸಾದಾ ಕೈ ಇತ್ತು. ಇಂತಹ ಒಂದು ದಾಳಿಯಲ್ಲಿ ಒಬ್ಬ ಇಟಾಲಿಯನ್ ಪ್ರವಾಸಿ ಸತ್ತಿದ್ದ. ಅಮೆರಿಕದಲ್ಲಿ ರಾಜಕೀಯ ಆಶ್ರಯ ಕೊಡಬೇಕು ಎಂಬ ಆತನ ಅರ್ಜಿಯಲ್ಲಿ ಆತನ ವಕೀಲನೇ ವ್ಯೋಸಾರ ಸಿಐಎ ಏಜೆಂಟಾಗಿ ಕ್ಯೂಬಾ ವಿರುದ್ಧ ಕಾರ್ಯಾಚರಣೆ ನಡೆಸಿದ್ದಾನೆ. ಕ್ಯೂಬಾಕ್ಕೆ ಹಿಂದಿರುಗಿದರೆ ಆತನಿಗೆ ಮರಣದಂಡನೆ ಆಗುತ್ತದೆ. ಆದ್ದರಿಂದ ರಾಜಕೀಯ ಆಶ್ರಯ ಕೊಡಬೇಕು ಎಂದು ಕೇಳಿದ್ದಾನೆ! ವ್ಯೋಸಾರ ಈಗಾಗಲೇ ಫ್ಲೋರಿಡಾದಲ್ಲಿದ್ದಾನೆ. ಆತ ಎಲ್ಲಿದ್ದಾನೆ ಎಂಬುದು ಅಮೆರಿಕ ಸರ್ಕಾರಕ್ಕೆ ಗೊತ್ತು. ವ್ಯೋಸಾರನನ್ನು ಕ್ಯೂಬಾಕ್ಕೆ ವಾಪಸು ಕೊಡಿ. ಆತ ಹಲವು ಭಯೋತ್ಪಾದಕ ಕೃತ್ಯಗಳಲ್ಲಿ ಬೇಕಾಗಿದ್ದಾನೆ ಎಂದು ಘೋಷಿಸಿದ ಕ್ಯಾಸ್ಟ್ರೋ. ಈ ವಿಷಯ ಬುಶ್ ಆಡಳಿತಕ್ಕೆ ನುಂಗಲಾರದ ಬಿಸಿ ತುಪ್ಪವಾಗಿದೆ ಎಂದರು.

ಈ ವರ್ಷದ ಮೇ ದಿನದ ವಿಷಯ ಮನುಕುಲ ನ್ಯಾಯಕೇಳುತ್ತಿದೆ' ಆವೇಶಭರಿತ, ಸ್ಫೂರ್ತಿದಾಯಕ ಜನತೆ ನ್ಯಾಯಕ್ಕೆ ಕೂಗು ಹಾಕಿದಾಗ, ಅನ್ಯಾಯ ಸಹ ನಡುಗುತ್ತದೆ ಎಂದು ಕ್ಯಾಸ್ಟ್ರೋ, ದೀರ್ಘ ಕರತಾಡನಗಳ ನಡುವೆಹೇಳಿದರು. ವಿಯೆಟ್ನಾಂ ಕ್ರಾಂತಿಯ ವಿಜಯದ 30ನೇ ವಾರ್ಷಿಕೋತ್ಸವಕ್ಕೆ ಕ್ಯಾಸ್ಟ್ರೋ ಶುಭಾಶಯ ಹೇಳಿದರು.



ಡಿವೈಎಫ್ಐ ರಾಜ್ಯಮಟ್ಟದ ಅಧ್ಯಯನ ಶಿಬಿರ

ಜಾತಿ-ಅಸ್ಪೃಶ್ಯತೆ ವಿರುದ್ಧದ ಹೋರಾಟವು ಕೋಮುವಾದದ ವಿರುದ್ಧದ ಹೋರಾಟದಷ್ಟೆ ಪ್ರಾಧಾನ್ಯತೆ ಪಡೆಯಬೇಕು

ಕೋಮುವಾದದ ವಿರುದ್ಧದ ಹೋರಾಟದಷ್ಟೆ ಪ್ರಾಮುಖ್ಯತೆಯನ್ನು ಜಾತಿ-ಅಸ್ಪೃಶ್ಯತೆ ವಿರುದ್ಧದ ಹೋರಾಟವು ಸಹ ಪಡೆಯಬೇಕಿದೆ. ಎಡಶಕ್ತಿಗಳು ಕೋಮುವಾದದ ವಿರುದ್ಧ ನಡೆಸುತ್ತಿರುವ ಹೋರಾಟ ಪ್ರಶ್ನಾತೀತ, ಕೋಮುವಾದವನ್ನು ಹಿಮ್ಮೆಟ್ಟಿಸಲು ಎಡಶಕ್ತಿಗಳ ಕೊಡುಗೆ ಅದರಲ್ಲೂ ಸಿಪಿಐ(ಎಂ)ನ ಪಾತ್ರ, ಡಿವೈಎಫ್ಐ ನಂತಹ ಸಂಘಟನೆಗಳ ಪಾತ್ರ ಪ್ರಮುಖವಾಗಿದೆ. ಕೋಮುವಾದದ ವಿರುದ್ಧವಿರುವ ಕೆಲವು ರಾಜಕೀಯ ಶಕ್ತಿಗಳು ನಡೆಸುವ ಜಾತಿವಾದವು ಅಪಾಯವುಂಟು ಮಾಡಲಿದೆ. ಆದರೆ ಎಡಶಕ್ತಿಗಳು ಅವುಗಳಿಂದ ಭಿನ್ನವಾದವು. ಎಡಶಕ್ತಿಗಳು ಜಾತಿ-ಅಸ್ಪ?ರ್ಶಯತೆಯ ವಿರುದ್ಧದ ಹೋರಾಟವನ್ನು ಸಹಾ ಕೋಮುವಾದದ ವಿರುದ್ಧದ ಹೋರಾಟದಷ್ಟೆ ಆಧ್ಯತೆಯಾಗಿ ಪರಿಗಣಿಸಿ ಮುಂದಾಗಬೇಕೆಂಬ ಆಶಯವನ್ನು ಶಿಬಿರವನ್ನು ಉದ್ಘಾಟಿಸಿದ ಹಂಪಿ ಕನ್ನಡ ವಿ.ವಿ.ಯ ವಿಜಯ ತಂಬಂಡ ಪೂಣಚ್ಚ ವ್ಯಕ್ತಪಡಿಸಿದರು.

ಸ್ವಾಗತಸಮಿತಿ ಗೌರವ ಅಧ್ಯಕ್ಷರಾದ ದಂಬೆಕೋಡಿ.ಎಸ್.ಹರೀಶ್ ಮತ್ತು ಬಿ.ಟಿ.ಪ್ರದೀಪ್ ಶುಭಕೋರಿ ಮಾತನಾಡಿದರು.

ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರು - ಶಾಸಕರಾದ ಕಾಂ.ಜಿ.ವಿ. ಶ್ರೀರಾಮರೆಡ್ಡಿ ಮಾತನಾಡುತ್ತಾ ಕೋಮುವಾದದ ಹಾಗೂ ಜಾತಿವಾದದ ಅಪಾಯ ಅವುಗಳ ನಿವಾರಣೆಯಲ್ಲಿನ ಯುವಜನ ಚಳುವಳಿಯ ಪಾತ್ರವನ್ನು ವಿವರಿಸಿದರು. ಡಿವೈಎಫ್ಐ ರಾಜ್ಯ ಕಾರ್ಯದರ್ಶಿ ಕೆ.ಮಹಾಂತೇಶ್ ಪ್ರಾಸ್ತಾವಿಕ ಮಾತುಗಳನ್ನಾಡಿದರು. ರಾಜ್ಯ ಅಧ್ಯಕ್ಷರಾದ ಕೆ.ಎನ್.ಉಮೇಶ್ ಅಧ್ಯಕ್ಷತೆ ವಹಿಸಿದ್ದರು. ಜಿಲ್ಲಾ ಕಾರ್ಯದರ್ಶಿ ಭರತ್ ಸ್ವಾಗತಿಸಿದರು. ರಾಮನಾಥ್ ವಂದಿಸಿದರು. ಜಿಲ್ಲಾ ಅಧ್ಯಕ್ಷ ವಸಂತ್‌ಕುಮಾರ್ ಸಿಪಿಐ(ಎಂ) ಜಿಲ್ಲಾ ಕಾರ್ಯದರ್ಶಿ ಕಾಂ.ಪೀಟರ್ ಲೋಬೋ ಗ್ರಾ.ಪಂ. ಸದಸ್ಯರಾದ ಗಣೇಶ್,ಧರ್ಮೇಶ್ ಮುಂತಾದವರು ಉಪಸ್ಥಿತರಿದ್ದರು.

ಡಿವೈಎಫ್ಐ ರಾಜ್ಯಮಟ್ಟದ ಅಧ್ಯಯನ ಶಿಬಿರವು 2005ರ ಮೇ 3ರಿಂದ 7ರವರೆಗೆ 5 ದಿನಗಳ ಕಾಲ ಮಡಕೇರಿಯ ಬಳಿಯಿರುವ ಚೆಟ್ಟಳ್ಳಿಯಲ್ಲಿ ನಡೆಯಿತು. ರಾಜ್ಯದ 15 ಜಿಲ್ಲೆಗಳಿಂದ 18 ಯುವತಿಯರನ್ನು ಒಳಗೊಂಡಂತೆ 119 ಸಂಗಾತಿಗಳು ಶಿಬಿರದಲ್ಲಿ ಭಾಗವಹಿಸಿದ್ದರು.

ಜಾಗತೀಕರಣ ಮತ್ತು ಪರಿಣಾಮಗಳ ಕುರಿತು ಕಾಂ.ಜಿ.ವಿ.ಶ್ರೀರಾಮರೆಡ್ಡಿ, ಜಾಗತೀಕರಣ ಮತ್ತು ಸಾಂಸ್ಕೃತಿಕ ಮೌಲ್ಯಗಳು ಕುರಿತು ಕಾಂ.ಎಸ್.ವೈ. ಗುರುಶಾಂತ್, ಭಾರತದ ಬದಲಾವಣೆಯ ಹಾದಿ ಕುರಿತು ಕಾಂ.ಪ್ರಸನ್ನಕುಮಾರ್, ಯುವಜನ ಚಳುವಳಿ ಮತ್ತು ಪ್ರಚಲಿತ ಸೈದ್ಧಾಂತಿಕ ಪ್ರವೃತ್ತಿಗಳು ಕುರಿತು ಕಾಂ.ಜಿ.ಸಿ.ಬಯ್ಯಾರೆಡ್ಡಿ, ಕೋಮುವಾದ ಮತ್ತು ಯುವಜನತೆ ಕುರಿತು ಕಾಂ.ವಿ.ಎಸ್. ಆಚಾರ್ಯ ಜಾತಿ-ಅಸ್ಪೃಶ್ಯತೆ ಪ್ರಶ್ನೆ ಕುರಿತು ಕಾಂ. ಜಿ.ಎನ್.ನಾಗರಾಜ್ ತರಗತಿಗಳನ್ನು ನೀಡಿದರು. ಸಂಘಟನೆಯ ಅಂಶಗಳಾದ ಸದಸ್ಯತ್ವ, ಘಟಕ ರಚನೆ-ಸಮಿತಿಗಳ ಕಾರ್ಯನಿರ್ವಹಣೆ, ನಿಧಿಸಂಗ್ರಹ, ವೈವಿಧ್ಯಮಯ ಚಟುವಟಿಕೆಗಳು, ಪ್ರಚಾರ- ಪ್ರಕ್ಷೋಭೆ-ಸಾಹಿತ್ಯ ಮಾರಾಟ, ವಿವಿಧ ವಿಭಾಗಗಳತ್ತ ಸಂಘಟನೆ ಕುರಿತು ಪ್ರಾಯೋಗಿಕ ಪಾಠಗಳನ್ನು ಆಯೋಗವಾರು ಚರ್ಚೆ ನಡೆಸಲಾಯಿತು. ಡಿವೈಎಫ್ಐನ ಅಖಿಲ ಭಾರತ ಅಧ್ಯಕ್ಷರಾದ ಕಾಂ.ಕೆ.ಎನ್.ಬಾಲಗೋಪಾಲ ಕೊನೆಯ ಎರಡು ದಿನಗಳ ಶಿಬಿರದಲ್ಲಿ ಭಾಗವಹಿಸಿ ಮಾರ್ಗದರ್ಶನ ನೀಡಿದರು.


ಶಿಬಿರದಲ್ಲಿ ಮಾತನಾಡುತ್ತಿರುವ ವಿಜಯ್ ತಂಬಂಡ ಪೂಣಚ್ಚ

ಬೀಡಿಕಾರ್ಮಿಕರ ಮಹಾಸಭೆ

ಐಸಾಕ್ ಕಮಿಟಿ ಬಹಿರಂಗಕ್ಕೆ ಒತ್ತಾಯ

ಕೇಂದ್ರ ಮತ್ತು ರಾಜ್ಯ ಸರಕಾರದ ಧೋರಣೆಯಿಂದಾಗಿ ಬೀಡಿ ಕಾರ್ಮಿಕರು ವಿನಾಶದ ಅಂಚಿನಲ್ಲಿದ್ದಾರೆ. ಧೂಮಪಾನ ನಿಷೇದ ಮಸೂದೆಯಂತೆ ಶೈಕ್ಷಣಿಕ ಕೇಂದ್ರ, ಧಾರ್ಮಿಕ ಕೇಂದ್ರದ ಸುತ್ತಮುತ್ತ ನೂರು ಮೀಟರ್ ವ್ಯಾಪ್ತಿಯಲ್ಲಿ ಬೀಡಿ ಮಾರಾಟ ಮಾಡಬಾರದು. ಬೀಡಿ ಲೇಬಲ್ ಮೇಲೆ ಅಪಾಯದ ಸಂಕೇತ ಮತ್ತು ನಿಕೋಟಿನ್ ಅಂಶ ಮುದ್ರಿಸಬೇಕು ಇತ್ಯಾದಿ ಅಂಶಗಳು ಬೀಡಿ ತಯಾರಿಕೆಯನ್ನು ಕುಂಠಿತಗೊಳಿಸಿವೆ. ಇನ್ನೊಂದೆಡೆ ವಾರ್ಷಿಕ 20 ಲಕ್ಷ ಬೀಡಿ ತಯಾರಿಸುವ ಸಣ್ಣ ಕಂಪನಿಗಳಿಗೆ ಅಬಕಾರಿ ಸುಂಕದಿಂದ ವಿನಾಯಿತಿಯಿಂದಾಗಿ ಕಂಪನಿ ಬೀಡಿಗಳ ಉತ್ಪಾದನೆ ಕಡಿಮೆಯಾಗುತ್ತಿದ್ದು, ಬೀಡಿ ಕಾರ್ಮಿಕರಿಗೆ ಒಂದೆರಡು ದಿನ ಮಾತ್ರ ಕೆಲಸ ಸಿಗುತ್ತಿದೆ. ಮಾಲಕರು ಇದನ್ನೇ ನೆಪವಾಗಿಟ್ಟು 3 ವರ್ಷಗಳ ತುಟ್ಟಿಭತ್ತೆಯನ್ನು ಪಾವತಿ ಮಾಡಿರುವುದಿಲ್ಲ. ಈ ಅವಕಾಶವನ್ನು ಉಪಯೋಗಿಸಿ ಕೆಲವು ಬೇನಾಮಿ ಬೀಡಿ ಕಂಪನಿಗಳು ಕಾನೂನುಬದ್ಧ ಸವಲತ್ತು ಕೊಡದೆ ನಿಗದಿತ ಮೊತ್ತಕ್ಕೆ ಬೀಡಿ ತಯಾರಿಸುವ ಹೊಸ ಶೋಷಣೆಯನ್ನು ಅನುಸರಿಸುತ್ತಿದ್ದಾರೆ. ಇದರಿಂದಾಗಿ ಬೀಡಿ ಕಾರ್ಮಿಕರು ಎಲ್ಲಾ ಕಾನೂನು ಸವಲತ್ತುಗಳಿಂದ ವಂಚಿತರಾಗುತ್ತಿದ್ದಾರೆ.

ನಮ್ಮ ರಾಜ್ಯದಲ್ಲಿ ಬೀಡಿ ಉದ್ಯಮದ ಹಾಗೆ ಬೀಡಿ ಕಾರ್ಮಿಕ ಸಮಸ್ಯೆಗಳ ಅದ್ಯಯನ ನಡೆಸಿ ಸರ್ಕಾರಕ್ಕೆ ವರದಿ ಸಲ್ಲಿಸಲು 2003ರಲ್ಲಿ ಕರ್ನಾಟಕ ಸರ್ಕಾರ ಐಸಾಕ್ ಸಮಿತಿಯನ್ನು ನೇಮಿಸಿತ್ತು. ಈ ಸಮಿತಿ ಸರ್ಕಾರಕ್ಕೆ ಈಗಾಗಲೇ ವರದಿ ನೀಡಿದೆ ಎಂದು ಮಾಹಿತಿ ಇದೆ. ಈ ವರದಿಯನ್ನು ಸರ್ಕಾರ ಕೂಡಲೇ ಬಹಿರಂಗಪಡಿಸಬೇಕು ಮತ್ತು ಬೀಡಿ ಕಾರ್ಮಿಕರ ಸಮಸ್ಯೆಗಳಾದ 6 ದಿನದ ಕೆಲಸ 3 ವರ್ಷದ ಬಾಕಿ ತುಟ್ಟಿಭತ್ತೆ ಎಲ್ಲಾ ಕಂಪನಿಗಳನ್ನು ಕಾನೂನಿಗೆ ಒಳಪಡಿಸುವಲ್ಲಿ ಲಾಗ್ ಪುಸ್ತಕ, ಪ್ರಾವಿಡೆಂಟ್ ಫಂಡ್ ಇವೆಲ್ಲವನ್ನು ಜಾರಿಪಡಿಸುವಂತೆ ಸರ್ಕಾರ ಮುಂದಾಗಬೇಕೆಂದು ಸಿ.ಐ.ಟಿ.ಯು ದ.ಕ ಜಿಲ್ಲಾ ಅಧ್ಯಕ್ಷರಾದ ಕೆ.ಆರ್.ಶ್ರೀಯಾನ್ ಸರ್ಕಾರವನ್ನು ಒತ್ತಾಯಿಸಿದ್ದಾರೆ. ಅವರು ಬಂಟ್ವಾಳ ತಾಲೂಕು ಬೀಡಿ ಕೆಲಸಗಾರರ 24ನೇ ವಾರ್ಷಿಕ ಮಹಾಸಭೆಯನ್ನು ಉದ್ದೇಶಿಸಿ ಮಾತನಾಡುತ್ತಿದ್ದರು. ಮಹಾಸಭೆಯ ಮುಖ್ಯ ಅತಿಥಿಗಳಾಗಿ ಸೌತ್ ಕೆನರಾ ಬೀಡಿ ವರ್ಕ್ಸ್ ಫೆಡರೇಶನ್‌ನ ಅಧ್ಯಕ್ಷರಾದ ಜೆ.ಬಾಲಕೃಷ್ಣ ಶೆಟ್ಟಿ, ಕಾರ್ಯದರ್ಶಿ ಸುಕುಮಾರ್, ಸಿ.ಐ.ಟಿ.ಯು ದ.ಕ ಜಿಲ್ಲಾ ಕಾರ್ಯದರ್ಶಿ ವಸಂತ ಆಚಾರಿ, ರಮಣಿ ಮೂಡಬಿದ್ರೆ, ಅಬ್ರಹಾಂ ಕರ್ಕಡ, ಸುಕನ್ಯ ಬೆಳ್ತಂಗಡಿ, ಯಶೋಧ ಬೆಳ್ತಂಗಡಿ, ಬಿ.ವಾಸುಗಟ್ಟಿ, ಎ.ರಾಮಣ್ಣವಿಟ್ಲ ಮಹಾಸಭೆಯನ್ನು ಉದ್ದೇಶಿಸಿ ಮಾಡನಾಡಿದರು.

ನೂತನಸಮಿತಿ ಅಧ್ಯಕ್ಷರಾಗಿ ವಿಮಲ ಹೊಸ್ಮಾರು, ಉಪಾಧ್ಯಕ್ಷರಾಗಿ ಭಾಸ್ಕರ ಪೂಜಾರಿ ರಾಯಿ, ದೇಜಮ್ಮ ಮೂರ್ಜೆ, ಇಂದಿರಾ ನಾವೂರ, ಪ್ರಧಾನ ಕಾರ್ಯದರ್ಶಿಯಾಗಿ ಬಿ.ಸಂಜೀವ ಬಂಗೇರ, ಜೊತೆ ಕಾರ್ಯದರ್ಶಿಗಳಾಗಿ ಸುಂದರ ಪೂಜಾರಿ ಕಾವಳಕಡಟ್ಟೆ, ಅಪ್ಪಿ ಮುಗ್ದಾಲ್ ಗುಡ್ಡೆ, ಲಲಿತ ಬಸಬೈಲು, ಕೋಶಾಧಿಕಾರಿಯಾಗಿ ಬಿ.ಉದಯಕುಮಾರ್ ಆಯ್ಕೆಯಾದರು. 22 ಜನರ ಕಾರ್ಯಕಾರಿ ಸಮಿತಿ ಆಯ್ಕೆಯಾಯಿತು. ಮಹಾಸಭೆಯ ಅಧ್ಯಕ್ಷ ಸ್ಥಾನವನ್ನು ಬಿ.ಉದಯಕುಮಾರ ವಹಿಸಿದರು. ಬಿ.ಸಂಜೀವ ಬಂಗೇರ ಧನ್ಯವಾದವಿತ್ತರು.

ಮೇ 9, ಫ್ಯಾಸಿಸಂ ಮೇಲಿನ ವಿಜಯದ ಆಚರಣೆಗೆ ಕರೆ

ಸೋವಿಯತ್ ರಶಿಯಾದ ಕ್ರಾಂತಿಕಾರಿ ಕೆಂಪು ಸೈನ್ಯ ಜರ್ಮನಿಯ ಹಿಟ್ಲರ್‌ನ ನಾಜಿ ಪಡೆಗಳನ್ನು ಪುಡಿಗುಟ್ಟಿ ಮಹಾನ್ ವಿಜಯದ ಐತಿಹಾಸಿಕ ಘಟನೆಗೆ 60 ವರುಷಗಳು ತುಂಬುತ್ತಿರುವ ಮೇ 9 ರ ಸಂದರ್ಭದಲ್ಲಿ ಇಡೀ ದೇಶಾದ್ಯಂತ ವಿಚಾರಸಂಕಿರಣ, ಸಭೆಗಳು, ಚಿತ್ರಪ್ರದರ್ಶನ ಇತ್ಯಾದಿಗಳ ಮೂಲಕ ಅರ್ಥಪೂರ್ಣವಾಗಿ ಆಚರಿಸಲು ಸಿಪಿಐ(ಎಂ) ಪೊಲಿಟ್‌ಬ್ಯೂರೋ ಕರೆ ನೀಡಿದೆ. ಅದನ್ನು ಎಲ್ಲಾ ಘಟಕಗಳು ಯಶಸ್ವಿಗೊಳಿಸಬೇಕೆಂದು ರಾಜ್ಯ ಸೆಕ್ರೆಟಾರಿಯೇಟ್ ಮನವಿ ಮಾಡಿದೆ.

ರಾಜ್ಯದೆಲ್ಲೆಡೆ ಮೇ ದಿನಾಚರಣೆ

ಪುಟ 6 ರಿಂದ

ಮಾತನಾಡಿದರು.

ಹಾನಗಲ್ ತಾಲ್ಲೂಕಿನ ಕಾಡಶೆಟ್ಟಿಹಳ್ಳಿಯಲ್ಲಿ ಕೃಷಿಕೂಲಿಕಾರರು ಮೇ ದಿನಾಚರಣೆಯನ್ನು ಆಚರಿಸಿದ್ದು ರಾಜ್ಯ ಅಧ್ಯಕ್ಷರಾದ ನಿತ್ಯಾನಂದ ಸ್ವಾಮಿಯವರು ಭಾಗವಹಿಸಿದ್ದರು. ರಾಣೆಬೆನ್ನೂರಿನಲ್ಲಿ ನೌಕರರ ಸಂಘದ ಆಶ್ರಯದಲ್ಲಿ ಮೇ ದಿನಾಚರಣೆ ನಡೆದಿದ್ದು, ಈ ಸಂದರ್ಭದಲ್ಲಿ ಫಕೀರಪ್ಪ ವಿಭೂತಿ, ಪರಶುರಾಮ್ ಬಗಾದಿ ಮಾತನಾಡಿದರು.

ತುಮಕೂರಿನಲ್ಲಿ ಎಐಟಿಯುಸಿ, ಸಿಐಟಿಯು, ವಿಮಾ ಮತ್ತು ಅಂಚೆ ನೌಕರರ ಸಂಘಟನೆಗಳು ಜಂಟಿಯಾಗಿ ಮೇ ದಿನ ಆಚರಿಸಿದ್ದು ಟೌನ್‌ಹಾಲ್ ವೃತ್ತದಲ್ಲಿ ಸಾರ್ವಜನಿಕ ಸೆ ನಡೆಸಲಾಯಿತು.

ದ.ಕ. : ದ.ಕ ಜಿಲ್ಲೆಯ ಮಂಗಳೂರು, ಬೆಳ್ತಂಗಡಿ, ಬಂಟ್ವಾಳ, ಮೂಡಬಿದ್ರೆಗಳಲ್ಲಿ ಸಭೆ-ಮೆರವಣಿಗೆ ನಡೆದಿವೆ. ಮಂಗಳೂರಿನಲ್ಲಿ ನಡೆದ ಬಹಿರಂಗ ಸಭೆಯಲ್ಲಿ ಸಿಐಟಿಯು ರಾಜ್ಯಾಧ್ಯಕ್ಷರಾದ ಬಿ.ಮಾಧವರವರು ಮಾತನಾಡಿ ಕಾರ್ಮಿಕ ವರ್ಗದ ಐಕ್ಯತೆಯನ್ನು ಮುರಿಯುವ ಸಂಘ ಪರಿವಾರದ ಅಪಾಯದ ವಿರುದ್ಧ ಜನರನ್ನು ಜಾಗೃತಿಗೊಳಿಸಬೇಕಾದ ಅಗತ್ಯವನ್ನು ಒತ್ತಿಹೇಳಿದರು. ಸಿಪಿಐ(ಎಂ) ನ ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಕೆ.ಆರ್.ಶ್ರೀಯಾನ್, ಸಿಐಟಿಯು ಜಿಲ್ಲಾ ಕಾರ್ಯದರ್ಶಿ ವಸಂತ ಆಚಾರಿ ಮೊದಲಾದವರು ಮಾತನಾಡಿದರು.

ಹಾಸನ : ಸಿಪಿಐ(ಎಂ) ನ ರಾಜ್ಯ ಕಾರ್ಯದರ್ಶಿ ಹಾಗೂ ಕೇಂದ್ರ ಸಮಿತಿ ಸದಸ್ಯ ನಾಗರಾಜರವರು ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದ ಹಾಸನದಲ್ಲಿ ನಡೆದ ಮೇ ದಿನಾಚರಣೆಯಲ್ಲಿ 500 ಕ್ಕೂ ಹೆಚ್ಚು ಗ್ರಾಮ ಪಂಚಾಯತಿ, ಅಂಗನವಾಡಿ, ಬಿಸಿಯೂಟ, ತೋಟಕಾರ್ಮಿಕರು ಭಾಗವಹಿಸಿದ್ದರು. ಕಾಂ. ಜಿ.ಎನ್.ನಾಗರಾಜ್‌ರವರು ಮಾತನಾಡುತ್ತಾ ಸರ್ಕಾರಗಳು ಅನುಸರಿಸುತ್ತಿರುವ ಜಾಗತೀಕರಣ, ಖಾಸಗೀಕರಣ ನೀತಿಗಳಿಂದಾಗಿ ಅಸಂಘಟಿತ ಕಾರ್ಮಿಕರ ಪರಿಸ್ಥಿತಿ ಇನ್ನಷ್ಟು ಹದಗೆಟ್ಟಿದೆ. ಮಂದಿರ-ಮಸೀದಿಗಳ ಮೂಲಕ ಕೋಮು ರಾಜಕೀಯ ನಡೆಸುತ್ತಿರುವ ಬಿಜೆಪಿ ಅಸಂಘಟಿತರ ಬಗ್ಗೆ ಮಾತನಾಡುತ್ತಿಲ್ಲ. ಇಂತಹ ಸನ್ನಿವೇಶದಲ್ಲಿ ಮುಂಬರುವ ದಿನಗಳಲ್ಲಿ ರಾಜ್ಯಾದ್ಯಂತ ಐಕ್ಯ ಹೋರಾಟ ನಡೆಸಬೇಕಾಗಿದೆ ಎಂದರು. ಸಭೆಯಲ್ಲಿ ಸಿಐಟಿಯು ಮುಖಂಡರಾದ ಸುಕುಮಾರ್, ಧರ್ಮೇಶ್, ವಿಮಾ ನೌಕರರ ಸಂಘಟನೆಯ ಮುಖಂಡರಾದ ಮಂಜುನಾಥ್, ಎಸ್‌ಎಫ್ಐ ರಾಜ್ಯ ಕಾರ್ಯದರ್ಶಿ ನವೀನ್ ಕುಮಾರ್ ಮೊದಲಾದವರು ಭಾಗವಹಿಸಿದ್ದರು.

ಮಂಡ್ಯ, ಭದ್ರಾವತಿ, ದಾವಣಗೆರೆ, ಹರಿಹರ, ಬಳ್ಳಾರಿ ಮೊದಲಾದ ಕಡೆಗಳಲ್ಲೂ ಮೇ ದಿನಾಚರಣೆ ನಡೆದಿವೆ.



ವಿಜಾಪುರದಲ್ಲಿ ಮೇ ದಿನಾಚರ...



ಜಾಗತೀಕರಣ-ಕೋಮುವಾದದ ವಿರುದ್ಧ, ದುಡಿವ ಜನತೆಯ ಪ್ರಬಲ ಹೋರಾಟಗಳನ್ನು ಕಟ್ಟಿ ಬೆಳೆಸುತ್ತಾ, ವಿಶಾಲವಾದ ಪ್ರತಿರೋಧ ಒಡ್ಡುತ್ತಿರುವ ಸಿಪಿಐ(ಎಂ)ನ ಮೇಲೆ ಪೀಪಲ್ಸ್ ವಾರ್ ಗುಂಪಿನ ನಕ್ಸಲೀಯರು ಅಪಪ್ರಚಾರದ ಧಾಳಿ ಆರಂಭಿಸಿದ್ದಾರೆ. ಹಾದಿ ತಪ್ಪಿರುವ ಈ 'ಓರಾಟಗಾರರು' ವಾಸ್ತವಗಳನ್ನು ತಿರುಚಿ, ವಿಕೃತಗೊಳಿಸುವುದರ ಉದ್ದೇಶವೇನಿರಬಹುದು? ತಾವು ಪ್ರಶ್ನಾತೀತರು, ಯಾರೂ ತಮ್ಮನ್ನು ವಿಮರ್ಶಿಸಬಾರದೆಂದು ಫರ್ಮಾನು ಹೊರಡಿಸುತ್ತಿರುವ ಈ ಪ್ರಜಾತಂತ್ರವಾದಿಗಳು ತಮ್ಮ ಮುಖವಾಡ ಉಳಿಸಿಕೊಳ್ಳಲು ಆಶ್ರಯಿಸಿರುವುದು ಕೋಮುವಾದದ ಪೆಡಂಭೂತವನ್ನು. ಇವರನ್ನು ವಿಮರ್ಶಿಸಿದರೆ ಅದು ಕೋಮುವಾದಿಗಳೊಂದಿಗೆ ಮೈತ್ರಿಯಂತೆ! ಇಂತಹ ವಿಚಿತ್ರ ಸೂತ್ರದ ಶೋಧನೆಯ ಲೇಖನ ಪ್ರಕಟವಾಗಿರುವುದು 'ರಂಜನೆ, ಬೋಧನೆ, ಪ್ರಚೋದನೆಯ ಲಂಕೇಶ'ನಲ್ಲಿ. ಅದಕ್ಕೆ ನೀಡಿದ ಪ್ರತಿಕ್ರಿಯೆ ಇಲ್ಲಿ.

ವಿಧಿದ್ರಕಾರಿ ಚಳುವಳಿ ರಕ್ಷಣೆಗೆ ಕೋಮುವಾದದ ಗುರಾಣಿ!?

ತಮ್ಮ ಪತ್ರಿಕೆಯ ಏಪ್ರಿಲ್ 27 ರ ಸಂಚಿಕೆಯಲ್ಲಿನ ಪುಟ 8 ರಲ್ಲಿ ಪ್ರಕಟಿತವಾದ ಬಿಳಿದಾಳೆ ಈಶರೆಂಬುವವರ 'ಪ್ರಗತಿಪರರು - ಕೋಮುವಾದಿಗಳು - ಅಪವಿತ್ರ ಮೈತ್ರಿ' ಎಂಬ ಲೇಖನ ಅಸಂಬದ್ಧತೆಗಳ ಕಂತೆ ಪುರಾಣ. ಪೂರ್ವಾಗ್ರಹಪೀಡಿತ ನರಳಿಕೆ. ವಸ್ತು ನಿಷ್ಠತೆ ಕಳೆದುಕೊಂಡ ವ್ಯಕ್ತಿನಿಂದನೆಯ ದುರ್ಭಾವ. ಕೋಮುವಾದ, ಜಾಗತೀಕರಣದ ವಿರುದ್ಧ ದೃಢ ಹೋರಾಟ ನಡೆಸುತ್ತಿರುವ ಸಿಪಿಐ(ಎಂ) ಪಕ್ಷವು ಪೀಪಲ್ಸ್ ವಾರ್ ಗುಂಪಿನ ನಕ್ಸಲೀಯರ ಸೈದ್ಧಾಂತಿಕ-ರಾಜಕೀಯ ನಿಲುವುಗಳನ್ನು, ಕ್ರಮಗಳನ್ನು ಪ್ರಶ್ನಿಸಿರುವುದು ಇವರಿಗೆ ಯಾಕೆ ಇಷ್ಟು ಹತಾಶೆ, ಆಕ್ರೋಶ ಹುಟ್ಟಿಸಿದೆಯೋ ಕಾಣೆ. ಈ ಈಶನೆಂಬುವರು ನಿಮ್ಮ ಪತ್ರಿಕೆಯ ವೇತನ ಪಡೆವ ವರದಿಗಾರರೋ, ಗೌರವಕ್ಕಾಗಿ ಬರೆವವರೋ ಅಥವಾ ಪೀಪಲ್ಸ್ ವಾರ್ ಗುಂಪು ಮಾಧ್ಯಮಗಳ ನಡುವೆ ಬಿತ್ತಿದ ಬೀಜವೋ ಎಂಬುದು ಸ್ಪಷ್ಟವಾಗುವುದು ಒಳಿತು. ಯಾಕೆಂದರೆ ನಕ್ಸಲೀಯರ ಬಗೆಗೆ ಸಿಪಿಐ(ಎಂ) ಎತ್ತಿದ ಪ್ರಶ್ನೆಗಳನ್ನು ಈ ಧ್ಯೇಯನಿಷ್ಠರು ತಮ್ಮ ಮೈಮೇಲೇಕೆ ಎಳೆದುಕೊಂಡಿದ್ದಾರೆ ಎಂಬುದು. ಸಿಪಿಐ(ಎಂ) ಎತ್ತಿದ ಮೂಲ ಪ್ರಶ್ನೆಗಳ ಬಗ್ಗೆ ನಿಖರ ಉತ್ತರ ಹೇಳದೆ ಕೋಮುವಾದಿಗಳ ಭೂತ ತೋರಿಸಿ ಅದನ್ನು ಗುರಾಣಿಯಂತೆ ರಕ್ಷಣೆಗೆ ಬಳಸಿ ಅಡ್ಡಹಾದಿ ಹಿಡಿದಿರುವುದು, ಹಾಗೆ ಅಡ್ಡಹಾದಿ ಹಿಡಿಸಿರುವ ಯುವಕ-ಯುವತಿಯರ ರಕ್ಷಣೆಗೆ ಹಾಸ್ಯಾಸ್ಪದ ವಾದಗಳ ಸಮೀಕರಣ ಹೊಸೆದಿರುವುದು. ಇದು ವಾರದ ಜೋಕ್ ಎನ್ನಬಹುದು!

ಹೋರಾಟಗಳ ಗುತ್ತಿಗೆದಾರರೇ?

ದೇಶಾದ್ಯಂತ ಸಿಪಿಐ(ಎಂ) ಪಕ್ಷವು ಕೋಮುವಾದ, ಉದಾರೀಕರಣದ ವಿರುದ್ಧ ನಡೆಸುತ್ತಿರುವ ಹೋರಾಟ ಜನಜನಿತ. ಕೋಮುವಾದದ ವಿರುದ್ಧ ನಿಖರ ನಿಲುವಿನಿಂದ ಹೋರಾಟ ನಡೆಸುತ್ತಿರುವುದರಿಂದಾಗಿ ಕೇರಳ, ಬಂಗಾಲ, ಆಂಧ್ರ, ತಮಿಳುನಾಡು ಮುಂತಾದೆಡೆ ನೂರಾರು ಕಾರ್ಯಕರ್ತರ ಹತ್ಯೆಯಾಗಿದೆ. ಆ ರಾಜ್ಯಗಳಲ್ಲಿ ಬಿಜೆಪಿ ತಲೆಯೆತ್ತಲು ಸಾಧ್ಯವಾಗಿಲ್ಲ. ಕರ್ನಾಟಕದಲ್ಲಿ ಇಂತಹ ಹೋರಾಟ ರಾಜಿ ಇಲ್ಲದೇ ನಡೆದಿರುವುದರಿಂದ ದಕ್ಷಿಣ ಕನ್ನಡದಲ್ಲಿ ಯುವ ನಾಯಕರಾಗಿದ್ದ ಭಾಸ್ಕರ್ ಕುಂಬ್ಳೆ, ಶ್ರೀನಿವಾಸಬಜಾಲ್ ರವರನ್ನು ಸಂಘ ಪರಿವಾರದ ಗೂಂಡಾಗಳು ಕೊಂದಿದ್ದಾರೆ. ಇದು 'ಎಲ್ಲಾ ಬಲ್ಲ' ಈಶರವರಿಗೆ ತಿಳಿಯದ ವಿಚಾರವೇನಲ್ಲ. ಇದನ್ನು ಮರೆಮಾಚಲು ಅವರೇಕೆ ಇಷ್ಟು ಹತಾಶವಾಗಿ ಯತ್ನಿಸುತ್ತಿದ್ದಾರೆ ಎಂಬುದು ಗುಟ್ಟಿನ ವಿಷಯವೂ ಅಲ್ಲ. ಕೋಮುವಾದ-ಜಾಗತೀಕರಣದ ವಿರುದ್ಧ ಹೋರಾಟಗಳ ಗುತ್ತಿಗೆದಾರರು ಇವರೇ? ಆದ್ದರಿಂದಲೇ ಉಳಿದವರು ಖಳನಾಯಕರು. ಧಿಮಾಕಿಗೂ ಒಂದಿಷ್ಟು ಬ್ರೇಕ್ ಇರಬೇಕೆಂಬುದು ಹೊಳೆಯದೇ ಹೋಗಿರುವುದು ಶೋಚನೀಯ.

ಎಲ್ಲಿ ಬಾಧ್ಯತೆ ? ಎಂತಹ ನೈತಿಕತೆ?

ಗುಟ್ಟುಗುಟ್ಟಾಗಿ, ಬಹುತೇಕ ಭೂಗತರಾಗಿಯೇ ಕಾರ್ಯಾಚರಣೆ ಮಾಡುವ ಪೀಪಲ್ಸ್ ವಾರ್ ಗುಂಪು ಸಾರ್ವಜನಿಕ ಬಾದ್ಯತೆಯಿಂದ ಮುಕ್ತವೇ? ಪದಪುಂಜಗಳ ವಿಜೃಂಭಣೆಯಲ್ಲಿ, ಆಗೀಗ ಕಣ್ಣು ಕೋರೈಸುವ ಪಟಾಕಿಗಳಂತಿರುವ ಇವರು ಪ್ರಶ್ನಾತೀತರೆ? ಇಂತಹ 'ಕ್ರಾಂತಿ'ಗಾಗಿ ಓರಾಡುವ ಇವರನ್ನು ಪ್ರಶ್ನಿಸಬಾರದೆಂದರೆ ಸದಾ ಪ್ರಜಾಪ್ರಭುತ್ವದ ಬಗ್ಗೆ ಬೊಗಳೆ ಹೊಡೆವ ಇವರಿಗೆ ಎಂತಹ ನೈತಿಕತೆ ಇದೆ? ಎಲ್ಲಾ ಹಕ್ಕು-ಅವಕಾಶಗಳು ತನಗಿರಬೇಕು, ಇತರರಿಗೆ ಬೇಡ ಎಂಬುದು ಫ್ಯಾಸಿಸ್ಟರ ವಾದ ವೈಖರಿ ಅಲ್ಲವೇ?

ಲೇಖನದುದ್ದಕ್ಕೂ ನಕ್ಸಲೀಯರನ್ನು ಯಾರೂ ಪ್ರಶ್ನಿಸಬಾರದು, ಅವರ ನಿಲುವು ವಿಮರ್ಶಿಸಬಾರದೆಂದು ಈಶರವರು ವಾದಿಸುತ್ತಾರೆ. ಪೀಪಲ್ಸ್ ವಾರ್ ಗುಂಪಿನ ನಿಲುವು, ಕಾರ್ಯಾಚರಣೆಗಳ ಬಗ್ಗೆ ಭ್ರಮೆ ಇಟ್ಟುಕೊಳ್ಳಲು ಅವರು ಸರ್ವಸ್ವತಂತ್ರರು! ಇತರರೂ ಅವರನ್ನೇ ಅನುಸರಿಸಬೇಕೆಂದು ದಬಾಯಿಸಿ ಫತ್ವಾ ಹೊರಡಿಸುವುದಕ್ಕೆ ಖಂಡಿತ ಆಕ್ಷೇಪಣೆ ಇದೆ.

ಜಾಗತೀಕರಣ ಮತ್ತು ಕೋಮುವಾದವನ್ನು ಎದುರಿಸಲು ಪೀಪಲ್ಸ್ ವಾರ್ ಗುಂಪು ಅನುಸರಿಸುತ್ತಿರುವ ಅತ್ಯಂತ ಸಂಕುಚಿತವಾದಿ, ದುಸ್ಸಾಹಸದ ಕಾರ್ಯಾಚರಣೆ, ವಿಧಾನಗಳು ಆ ಪೆಂಡಭೂತಗಳ ಧಾಳಿಯನ್ನು ಹಿಮ್ಮೆಟ್ಟಿಸಲು ಅಡ್ಡಿಯಾಗುತ್ತವೆ ಹಾಗೂ ಜನತೆಯ ಪ್ರಜಾಸತ್ತಾತ್ಮಕ ಹೋರಾಟಗಳನ್ನು ದುರ್ಬಲಗೊಳಿಸುತ್ತವೆ ಎಂಬುದು ಐತಿಹಾಸಿಕ ಅನುಭವ. ಜಾಗತೀಕರಣ ಮತ್ತು ಕೋಮುವಾದದ ವಿರುದ್ಧ ಅತ್ಯಂತ ವಿಶಾಲವಾದ, ಪ್ರಬಲ ಪ್ರತಿರೋಧದ ಅಗತ್ಯವಿದೆ. ಇಂತಹ ಹೋರಾಟದಲ್ಲಿ ತನ್ನನ್ನು ತೊಡಗಿಸಿಕೊಂಡಿರುವ ಸಿಪಿಐ(ಎಂ) ಪಕ್ಷವು ಆ ದಿಕ್ಕಿನಲ್ಲಿ ಚಿಂತಿಸುವ, ಕ್ರಿಯಾಶೀಲತೆಯಿಂದ ತೊಡಗಿರುವ ಎಲ್ಲಾ ವ್ಯಕ್ತಿ ಮತ್ತು ಶಕ್ತಿಗಳನ್ನು ಅಣಿನೆರೆಸಿ ಪ್ರತಿರೋಧ ಒಡ್ಡುತ್ತಾ ಬರುತ್ತಿದೆ, ಇನ್ನೂ ಅದು ಹೆಚ್ಚಾಗಬೇಕಿದೆ. ಇಂತಹ ಹೋರಾಟಗಳು ಕಾಡು-ಗೂಡುಗಳಲ್ಲಿ ಮಾತ್ರ ನಡೆಯದೇ 'ಅವಳಿಜವಳಿ'ಗಳ ಧಾಳಿಯನ್ನು ಹಿಮ್ಮೆಟ್ಟಿಸಬಲ್ಲ ಕಾರ್ಮಿಕ, ರೈತ-ಕೂಲಿಕಾರರ ಮೂಲವರ್ಗಗಳ ನಡುವಿನಿಂದ ಮೂಲಭೂತ ಪ್ರಶ್ನೆಗಳಾಧಾರದಲ್ಲಿ ನಡೆಯಬೇಕಿದೆ, ಇತರೆ ಜನ ವಿಭಾಗಗಳೂ ತೊಡಗಬೇಕಿದೆ. ಅಲ್ಲದೇ ಆಳುವವರ್ಗಗಳನ್ನು ರಾಜಕೀಯವಾಗಿ, ಸಾಮಾಜಿಕ, ಸಾಂಸ್ಕೃತಿಕವಾಗಿ ಎಲ್ಲಾ ರಂಗಗಳಲ್ಲಿಯೂ ಎದುರಿಸಬೇಕಿದೆ. ಈ ದಿಕ್ಕಿನಲ್ಲಿ ಎಡ ಮತ್ತು ಪ್ರಜಾಸತ್ತಾತ್ಮಕ ಶಕ್ತಿಗಳು



ನಕ್ಸಲ್ ದಾಳಿಯಲ್ಲಿ ಹತರಾದ ಪೊಲೀಸರು

ಐಕ್ಯ ಪ್ರತಿರೋಧ ಒಡ್ಡುತ್ತಿರುವುದರಿಂದಲೇ ಸಿಪಿಐ(ಎಂ) ಮೇಲೆ ಸಾಮ್ರಾಜ್ಯಶಾಹಿಗಳು - ಈ ದೇಶದ ಆಳುವ ವರ್ಗಗಳಾದ ಭೂಮಾಲೀಕ-ಬಂಡವಾಳಗಾರರೂ ಹಾಗೂ ಕೋಮುವಾದಿಗಳ ಧಾಳಿಗಳಿಗೆ ಗುರಿಯಾಗಿರುವುದು. ಸತತ ಅಪಪ್ರಚಾರದ ಪ್ರವಾಹ ಹರಿದಿರುವುದು, ಸಿಪಿಐ(ಎಂ) ಪಕ್ಷದ ಸಾವಿರಾರು ಕಾರ್ಯಕರ್ತರು ಬಲಿಯಾಗಿರುವುದು. ಇಂತಹ ಗಂಭೀರ ಸನ್ನಿವೇಶದಲ್ಲಿ ಪೀಪಲ್ಸ್ ವಾರ್ ಗುಂಪು ಜನತೆಯ ಈ ವಿಶಾಲ ಹೋರಾಟದಲ್ಲಿ ತನ್ನನ್ನು ತೊಡಗಿಸಿಕೊಳ್ಳದೇ ಸತತವಾಗಿ ಸಿಪಿಐ(ಎಂ) ಮೇಲೆ ವಿಕೃತವಾದ ಧಾಳಿಯನ್ನು ನಡೆಸುತ್ತಲೇ ಬಂದಿದೆ. ದೈಹಿಕವಾಗಿಯು ಕೊಲೆಗಳನ್ನೇ ನಡೆಸಿದೆ. ಹಲವಾರು ನಕ್ಸಲೀಯ ಸಂಘಟನೆಗಳು ಅನುಭವದಿಂದ ಪಾಠ ಕಲಿತು ಹಿಂದಿನ ದುಸ್ಸಾಹಸವಾದಿ ಹಾದಿಯನ್ನು ಕೈಬಿಟ್ಟು ಪ್ರಜಾಸತ್ತಾತ್ಮಕ ಪ್ರಕ್ರಿಯೆಯಲ್ಲಿ, ಈ ಚಳುವಳಿಯಲ್ಲಿ ಭಾಗಿಯಾಗುತ್ತಿವೆ. ಆದರೆ ಪೀಪಲ್ಸ್ ವಾರ್‌ನ ದಾರಿ ಇಂತಹ ಜನತೆಯ ಪ್ರತಿರೋಧವನ್ನು ದುರ್ಬಲಗೊಳಿಸುತ್ತಿದೆ. ತನ್ನ ಮಾರಕಧಾಳಿಯಿಂದ ಅದು ರಕ್ಷಿಸುತ್ತಿರುವುದು ಯಾರನ್ನು? ತಾನು ವಿರೋಧಿಸುತ್ತಿದ್ದೇನೆ ಎಂದು ಹೇಳಿಕೊಳ್ಳುವವರಿಗೆ ಪೀಪಲ್ಸ್ ವಾರ್ ಗುಂಪು ದೊಡ್ಡ ರಕ್ಷಣೆಯಾಗಿದೆ. ಪದಪುಂಜಗಳಲ್ಲಿ ವಿರೋಧವಿದ್ದರೆ ಸಾಕೆ?

ಎಸ್.ವೈ.ಗುರುಶಾಂತ್

ಕಾರ್ಯಾಚರಣೆ ಯಲ್ಲಿ ಏನಾಗಿದೆ ಎಂದು ಅರಿಯದಷ್ಟು ಈಶ ಮುಗ್ಧರೇ?

ನಿರ್ಣಾಯಕ ಸಂದರ್ಭ ಬಂದಾಗ...

ಸಿಪಿಐ(ಎಂ) ನಡೆಸುತ್ತಾ ಬಂದ ಹೋರಾಟಗಳ ಬಗ್ಗೆ ಕಾಣಲು ನಿಚ್ಚಳವಾದ ಕಣ್ಣು ಬೇಕು. ಸೋಂಕು ತಗುಲಿದ ಕಣ್ಣುಗಳಲ್ಲ. ಈಚಿನ ಅವಧಿಯಲ್ಲಿ ಕೇಂದ್ರದಲ್ಲಿ ಅಧಿಕಾರ ಹಿಡಿದಿದ್ದ ಫ್ಯಾಸಿಸ್ಟ್ ಮಾದರಿಯಾದ ಕೋಮುವಾದಿ ಬಿಜೆಪಿಯನ್ನು ಅಧಿಕಾರದಿಂದ ತೊಲಗಿಸುವ ಹೋರಾಟದಲ್ಲಿ ಸಿಪಿಐ(ಎಂ) ವಹಿಸಿದ ಪಾತ್ರವೇ ಈಚಿಗಿನ ಒಂದು ನಿದರ್ಶನ. ಅಂದ ಮಾತ್ರಕ್ಕೆ ಈ ಹೋರಾಟ ಮುಗಿದ ಅಧ್ಯಾಯವೇನಲ್ಲ. ಅದು ಮುಂದುವರೆದಿದೆ. ಸಾಮ್ರಾಜ್ಯಶಾಹಿಗಳ ನೆಚ್ಚಿನ ಬಂಟನಾಗಿ, ಭಾರತದ ಜನತೆಯ ಶತ್ರುವಾಗಿರುವ ಬಲ ತೀವ್ರಪ್ರತಿಗಾಮಿ ಸಂಘ ಪರಿವಾರವನ್ನು ತೊಲಗಿಸುವ ಹೋರಾಟ ಭಾರತದ ಜನತೆಗೆ ಅತ್ಯಂತ ನಿರ್ಣಾಯಕವಾಗಿತ್ತು. ಚುನಾವಣೆಯ ಸಂದರ್ಭವನ್ನು ಜನತೆ ಸೂಕ್ತವಾಗಿ ಬಳಸಿದರು. ದೇಶದ ಎಲ್ಲಾ ಜಾತ್ಯತೀತ, ಪ್ರಜಾಸತ್ತಾತ್ಮಕ ಶಕ್ತಿಗಳೂ ಇದರಲ್ಲಿ ತೊಡಗಿದ್ದವು. ಆದರೆ ಪೀಪಲ್ಸ್ ವಾರ್ ಗುಂಪು ಅದರ ಸಂಘಟನೆಗಳು ಈ ಹೋರಾಟದಲ್ಲಿ ಬೆನ್ನು ತಿರುಗಿಸಿದ್ದು ಯಾಕೆ? ಜಾಗತೀಕರಣ-ಉದಾರೀಕರಣವನ್ನು ಜಪದಂತೆ ಪಠಿಸಿದರೆ ಅಂತಹ ಶಕ್ತಿಗಳು ಹಿಮ್ಮೆಟ್ಟಿಬಿಡುತ್ತವೆಯೇ? ಹಿಮ್ಮೆಟ್ಟಿಸಲು ಬೀದಿಗಿಳಿದು ಹೋರಾಡುವುದು ಎಷ್ಟು ಮುಖ್ಯವೋ ಅಷ್ಟೇ ಮುಖ್ಯ ಆಡಳಿತ-ಸರ್ಕಾರದಂತಹ ಪ್ರಭುತ್ವದ ಇತರೆ ಅಂಗಗಳ ವಿರುದ್ಧ ನಡೆವ ಹೋರಾಟವೂ ಕೂಡಾ. ಶತ್ರುವನ್ನು ಎದುರಿಸುವ ನಿರ್ಣಾಯಕ ಸಂದರ್ಭ ಬಂದಾಗ ನಾಪತ್ತೆಯಾಗುವುದು ಯಾರನ್ನು, ಯಾವುದನ್ನು ರಕ್ಷಿಸಲಿಕ್ಕಾಗಿ? ಇದೇ ಮಾರ್ಕ್ಸ್‌ವಾದ, ಕ್ರಾಂತಿ ಎಂದರೆ ಪೀಪಲ್ಸ್ ವಾರ್ ಗುಂಪು ಅಡಗಿಕೊಂಡಿರುವ ಕಾಡಿನ ಗಿಡಮರಗಳ ಮೇಲಿನ ಹಕ್ಕಿಗಳೂ ತಲೆದೂಗಲಾರವು.

ಸಂಸದೀಯ ವ್ಯವಸ್ಥೆಯ ಇತಿಮಿತಿಗಳ ಅರಿವಿದ್ದು ಅದನ್ನು ಜನತೆಯ ಹಕ್ಕುಗಳ ರಕ್ಷಣೆಗಾಗಿ ಬಳಸಿ, ಪ್ರಜಾಪ್ರಭುತ್ವದ ಪ್ರಕ್ರಿಯೆಯನ್ನು ಬಲಪಡಿಸಿ-ವಿಶಾಲಗೊಳಿಸುತ್ತಾ ಹೋರಾಟ ಮುನ್ನಡೆಸಬೇಕು ಎಂಬುದರ ಬಗ್ಗೆ ತಿರಸ್ಕಾರ ಇದ್ದುದರಿಂದಲೇ ಪೀಪಲ್ ವಾರ್‌ನ ಕವಿರಂ ಮತ್ತು ಅವರ ಕಾರ್ಯಕರ್ತರು ಮೊನ್ನಿನ ಚುನಾವಣೆಗಳಲ್ಲಿ ಈ ಹೋರಾಟದಲ್ಲಿ ಕೋಮು ಸೌಹಾರ್ದ ವೇದಿಕೆಯನ್ನು ತೊಡಗಿಸುವುದರಿಂದ ವಿಮುಖವಾಯಿತು. ಬೇಟೆಗೆಂದು ಕೂಡಿಸಿದ್ದ ನಾಯಿಯು ಮೊಲ ಬಂದಾಗ ಮಲವಿಸರ್ಜನೆ ನೆಪ ಹೇಳಿ ಹೋಯಿತಂತೆ!

ಜನದ್ರೋಹಿಗಳನ್ನು ಎದುರಿಸಿದ್ದು ಸಿಪಿಐ(ಎಂ)

ಇನ್ನು ಕರ್ನಾಟಕದಲ್ಲಿ ಕೋಮುವಾದ, ಜಾಗತೀಕರಣದ ನೀತಿಗಳ ವಿರುದ್ಧ ಮಾವೋವಾದಿಗಳು ಹಾಗೂ ಕವಿರಂನವರಿಗೆ ಪೇಟೆಂಟ್‌ನ ಮಾಲಕತ್ವ ನೀಡಲು ಹೊರಟಿದ್ದಾರೆ ಈಶರವರು. ಪಶ್ಚಿಮ ಘಟ್ಟದ ರಾಷ್ಟ್ರೀಯ ಉದ್ಯಾನವನ, ಕಾರಿಡಾರ್ ರಸ್ತೆಯಂತಹ ಪ್ರಶ್ನೆಗಳಲ್ಲಿ ಜಾಗತೀಕರಣ ನೀತಿಗಳ ಪರಿಣಾಮವಿದೆ. ಆದರೆ ಇದಷ್ಟೇ ಜಾಗತೀಕರಣ ಎಂದು ನಂಬಿಸಲು ಹೊರಟ ಕವಿರಂ - ಈಶರ ಉದ್ದೇಶ ಬೇರೆಯೇ ಇದೆ.

ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಅಪ್ಪಿ ಅನುಸರಿಸುತ್ತಿರುವ ಉದಾರೀಕರಣ-ಜಾಗತೀಕರಣಧ ನೀತಿಗಳ ಜಾರಿಯ ಧಾಳಿಯು ಎಲ್ಲಾ ರಂಗಗಳ ಮೇಲೆ ಅಘಾತಕಾರಿ ಪರಿಣಾಮ ಬೀರುತ್ತಿದೆ. ದೇಶದ ಬೆನ್ನೆಲುಬಾದ ಉತ್ಪಾದನಾ ರಂಗದ ಕೈಗಾರಿಕೆಗಳು ನೆಲ ಕಚ್ಚುತ್ತಿವೆ. ಕೃಷಿ ಬಿಕ್ಕಟ್ಟು ತೀವ್ರಗೊಂಡು ರೈತರು ಆತ್ಮಹತ್ಯೆ ಹಾದಿ ಹಿಡಿದಿದ್ದಾರೆ. ನೀರಾವರಿ, ಬೀಜ, ವಿದ್ಯುತ್, ಸಾಲ-ಬೆಲೆ ಪ್ರಶ್ನೆಗಳು ಉರುಳಾಗಿ ಪರಿಣಮಿಸಿವೆ. ನಿರುದ್ಯೋಗ ತಾರಕಕ್ಕೇರುತ್ತಿದೆ. ಶಿಕ್ಷಣದ ವ್ಯಾಪಾರೀಕರಣ-ಖಾಸಗೀಕರಣ ಇನ್ನೂ ತೀವ್ರಗೊಂಡು ಎಳೆಯ ಜೀವಗಳನ್ನು ಬಲಿ ತೆಗೆದುಕೊಳ್ಳುತ್ತಿದೆ. ಕನಿಷ್ಟ ಗಂಜಿ ದೊರಕಿಸುವ ಆಶೆ ಇರಿಸಿದ್ದ ರೇಷನ್ ಕಾರ್ಡ್ ಪಡಿತರ ವ್ಯವಸ್ಥೆಯನ್ನು ಕಳಚಿ ಹಾಕಲಾಗುತ್ತಿದೆ. ಹಸಿವಿನ ಸಾವುಗಳಿಗೆ ಬಾಗಿಲು ತೆಗೆಯಲಾಗಿದೆ. ನೀರಿನ ಖಾಸಗೀಕರಣದತ್ತ ಹೆಜ್ಜೆ ಇಡುತ್ತಿದ್ದಾರೆ. ದೇಶ ಮತ್ತು ಮುಖ್ಯವಾಗಿ ಕರ್ನಾಟಕ ಎದುರಿಸುತ್ತಿರುವ ಇಂತಹ ಗಂಭೀರ ಸಮಸ್ಯೆಗಳ ವಿರುದ್ಧ ಒಂದು ಕಿರುಬೆರಳನ್ನಾದರೂ ಕವಿರಂ ಅಥವಾ ಪೀಪಲ್ಸ್ ವಾರ್ ಗುಂಪು ಎತ್ತಿದೆಯೇ? ಗುಲ್ಬರ್ಗಾ, ಬೀದರ್, ರಾಯಚೂರು, ಕೊಪ್ಪಳ, ಬಳ್ಳಾರಿ, ವಿಜಾಪುರ, ಕೋಲಾರ, ಬೆಂಗಳೂರು, ಹಾಸನ ಜಿಲ್ಲೆಗಳಲ್ಲಿ ರೈತರು ಆತ್ಮಹತ್ಯೆಗೀಡಾದಾಗ ಆ ಪ್ರಕರಣಗಳನ್ನೆತ್ತಿ ಸಿಪಿಐ(ಎಂ) ಮತ್ತು ರೈತ-ಕೂಲಿಕಾರರ ಸಂಘಟನೆಗಳು ಪ್ರಬಲವಾದ ಹೋರಾಟ ನಡೆಸಿವೆ. ಮೆಣಸಿಕಾಯಿ, ತೊಗರಿ, ಆಲೂಗಡ್ಡೆ, ರೇಷ್ಮೆ - ಹಾಲು ಉತ್ಪಾದನೆಗಳ ಬೆಲೆ ಕುಸಿತ ಕಂಡಾಗ ಹೋರಾಟ ನಡೆಸಿದ್ದು ಸಿಪಿಐ(ಎಂ). ಸಿಇಟಿ ಬಿಕ್ಕಟ್ಟು ಮತ್ತು ಶಿಕ್ಷಣದ ವ್ಯಾಪಾರೀಕರಣದ ವಿರುದ್ಧ ಬೆಂಗಳೂರು,

ಲಂಕೇಶ್ ಪತ್ರಿಕೆಗೆ ಪ್ರತಿಕ್ರಿಯೆ

ಪುಟ 9 ರಿಂದ

ದಾವಣಗೆರೆ, ಗುಲ್ಬರ್ಗಾ, ರಾಯಚೂರು, ದ.ಕನ್ನಡದಲ್ಲಿ ಹೋರಾಟ ನಡೆಸಿದ್ದು ಯಾರು? ಎಸ್‌ಎಫ್‌ಐ ಅಲ್ಲವೇ? ಹೆಜ್ಜೆಹೆಜ್ಜೆಗೂ ಈ ಹೋರಾಟದಲ್ಲಿ ಎಸ್‌ಎಫ್‌ಐ ಎದುರಿಸಿದ್ದು, ಹಿಮ್ಮೆಟ್ಟಿಸಿದ್ದು ಸಂಘ ಪರಿವಾರವಾದ ಎಬಿವಿಪಿಯನ್ನು.

ಈಚಿನ ದಿನಗಳಲ್ಲೇ ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲಿ ಮೂರು ಬಾರಿ, ಕೋಲಾರ ಜಿಲ್ಲೆಯಲ್ಲಿ ಒಂದು ಬಾರಿ ಬಂದ್ ನಡೆಸಿದ್ದಲ್ಲದೇ, ವಿದ್ಯುತ್ ಪ್ರಶ್ನೆ, ಬೆಳೆಗೆ ಬೆಲೆ ನಿಗದಿ, ಮಾರುಕಟ್ಟೆ ಒದಗಿಸುವಿಕೆಗಾಗಿ ನಡೆದ ಚಳುವಳಿಯಲ್ಲಿ ಪೊಲೀಸರ ದಬ್ಬಾಳಿಕೆಗೆ ಈಡಾಗಿ, ಜೈಲುವಾಸ ಅನುಭವಿಸಿದ್ದು ಪ್ರಾಂತ ರೈತ ಸಂಘ ಹಾಗೂ ಸಿಪಿಐ(ಎಂ)ನ ಮುಖಂಡರು.

ಬಹುರಾಷ್ಟ್ರೀಯ ಕಂಪನಿಯಾದ ಕಾರ್ಗಿಲ್ ಕಂಪನಿಯು ಬಳ್ಳಾರಿಯಲ್ಲಿ ಪೂರೈಸಿದ್ದ ಕಳಪೆಬೀಜದ ಮಾರಾಟದ ವಿರುದ್ಧ ದೀರ್ಘಾವಧಿ ಹೋರಾಟ ನಡೆಸಿ, ಅಂತಿಮವಾಗಿ ರೈತರಿಗೆ ಪರಿಹಾರ ನೀಡುವಂತಾದದ್ದು ಸಿಪಿಐ(ಎಂ) ಹೋರಾಟದಿಂದ. ವಿದ್ಯುತ್ ಖಾಸಗೀಕರಣ ವಿರುದ್ಧ ಸಿಪಿಐ(ಎಂ) ಹಾಗೂ ಒಂದು ಹಂತದವರೆಗೆ ರಾಜ್ಯ ರೈತ ಸಂಘದ ಬಣಗಳು ನಡೆಸಿದ ಹೋರಾಟದ ಫಲವಾಗಿ ಅಂದುಕೊಂಡಷ್ಟು ತೀವ್ರವಾಗಿ ಈ ನೀತಿಯನ್ನು ಜಾರಿಗೊಳಿಸಲು ಸರ್ಕಾರಕ್ಕೆ ಸಾಧ್ಯವಾಗಿಲ್ಲ, ತಡೆ ಇದೆ.

ಕೋಮುವಾದದ ವಿರುದ್ಧ ದೃಢ ಹೋರಾಟ

ಬಾಬಾ ಬುಡನ್ ಗಿರಿ ಹೋರಾಟ ಮತ್ತು ಕವಿರಂನ ಪಾತ್ರದ ಬಗ್ಗೆ ಒಂದೆರಡು ಮಾತು ಹೇಳಬೇಕಿದೆ. ಇಲ್ಲಿ ಕೋಮುವಾದದ ಧಾಳಿಗಳನ್ನೆದುರಿಸುವಲ್ಲಿ ಕವಿರಂನ ಪಾತ್ರವನ್ನು ನಾವು ನಿರಾಕರಿಸುತ್ತಿಲ್ಲ. ಆದರೆ ಕವಿರಂ ಇಲ್ಲವಾಗಿದ್ದರೆ ಹೋರಾಟವೇ ನಡೆಯುತ್ತಿರಲಿಲ್ಲ ಎಂಬ ಈಶರವರ ಮಾತು ಅರ್ಥಹೀನ ಬೊಗಳೆ. ಮತ್ತು ಅವರು ನಡೆದುಕೊಂಡ ರೀತಿಯಿಂದಾಗಿ ಕೋಮುವಾದಿಗಳು ಬಲಗೊಳ್ಳಲು ಕಾರಣವಾಗಿದ್ದು ಬೇರೆ ಪ್ರಶ್ನೆ.

ಯಾಕೆಂದರೆ ಹಲವಾರು ದಶಕಗಳಿಂದ ಕರ್ನಾಟಕದಲ್ಲಿ ಕೋಮುವಾದದ ವಿರುದ್ಧ ಎಡಪಕ್ಷಗಳು, ಪ್ರಗತಿಪರ ಸಂಘಟನೆಗಳು ಹಲವಾರು ಬುದ್ಧಿಜೀವಿಗಳೂ ಸತತವಾಗಿ ಹೋರಾಟ ನಡೆಸುತ್ತಾ ಬಂದಿದ್ದಾರೆ. 1980 ರ ದಶಕದ ಆರಂಭದಲ್ಲೇ ತಣ್ಣಗೆ ಹೆಡೆ ಎತ್ತುತ್ತಿದ್ದ ಸಂಘ ಪರಿವಾರದ ಕೃತ್ಯಗಳ ವಿರುದ್ಧ ಸಿಪಿಐ(ಎಂ)ನ ಪ್ರತಿಭಟನೆ - ಸೈದ್ಧಾಂತಿಕ ಎಚ್ಚರವಿದೆ. ವಿಶೇಷವಾಗಿ 1990 ರ ಆರಂಭದಲ್ಲಿ ಬಾಬ್ರಿ ಮಸೀದಿ ವಿವಾದವೆಬ್ಬಿಸಿ ಅದನ್ನು ಧ್ವಂಸಗೊಳಿಸಿದ ಇಡೀ ಪ್ರಕರಣದುದ್ದಕ್ಕೂ ಹಲವಾರು ಸಮಾವೇಶ, ಪ್ರತಿಭಟನಾ ಮೆರವಣಿಗೆ-ಸಾಂಸ್ಕೃತಿಕ ಜಾಥಗಳು ನಡೆದವು. ನಿರ್ದಿಷ್ಟವಾಗಿ ಬಾಬ್ರಿ ಮಸೀದಿ ಧ್ವಂಸಗೊಂಡಾಗ ಅಂದೇ ನಾವು ಆಗಲೇ ರಚಿಸಲಾಗಿದ್ದ ಕೋಮುಸೌಹಾರ್ದತಾ ವೇದಿಕೆ ನೇತೃತ್ವದಲ್ಲಿ (ಡಾ. ವಿಜಯಾ, ಪ್ರೊ. ಜಿ.ಕೆ.ಗೋವಿಂದರಾವ್ ಮುಂತಾದವರು ಸಂಚಾಲಕರಾಗಿದ್ದ ವೇದಿಕೆ ಇದು - ಆಗ ಕವಿರಂ ಎಲ್ಲಿತ್ತು?) ಮಸೀದಿ ಉರುಳಿದ ದಿನ ಡಿಸೆಂಬರ್ 6ರಂದೇ ಅತ್ಯಂತ ತ್ವೇಷದ ವಾತಾವರಣದ ನಡುವೆ ಬೆಂಗಳೂರಿನಂತಹ ನಗರದ ಹಲವಾರು ಕಡೆ ಪ್ರತಿಭಟನಾ ಮೆರವಣಿಗೆ, ಶಾಂತಿ ಪಾದಯಾತ್ರೆ ನಡೆಸಲಾಯಿತು. 'ಏಕತೆಗಾಗಿ ನಾವು - ನೀವು' ಸಂಘಟನೆಯಿಂದ ಇಡೀ ದಿನದ ಸಾಂಸ್ಕೃತಿಕ ಜಾತ್ರೆಯೇ ನಡೆಯಿತು. ಡಿವೈಎಫ್‌ಐ ಸಂಘಟನೆ ಸೌಹಾರ್ದ ಸಮ್ಮಿಲನ ಸಂಘಟಿಸಿತು. ಡಾ.ಗಿರೀಶ್ ಕಾರ್ನಾಡ್, ಕಂಬಾರ, ಹಡಪದ್, ಚಂದ್ರಶೇಖರ್ ಮುಂತಾದ ಅನೇಕ ಪ್ರಮುಖರು ಭಾಗವಹಿಸಿದ್ದರು. ಗುಜರಾತ್ ಹತ್ಯಾಕಾಂಡದ ವಿರುದ್ಧ ಹಿಂದಿನ ಸೌಹಾರ್ದತಾ ವೇದಿಕೆ ಖಂಡನಾ ಸಭೆ ನಡೆಸಿ, ಮಾನವ ಸರಪಳಿ ರಚಿಸಿತು. ಸಂಘ ಪರಿವಾರ ಬಾಬಾ ಬುಡನ್ ಗಿರಿಯನ್ನು ಇನ್ನೊಂದು ಅಯೋಧ್ಯಾವನ್ನಾಗಿಸುವ ಹುನ್ನಾರದ ಭಾಗವಾಗಿ ಚಿಕ್ಕಮಗಳೂರಿನಲ್ಲಿ ಬೆಂಬಲ ನೆಲೆ ಕಂಡುಕೊಳ್ಳಲು ಹನುಮಂತನ ದೇವಸ್ಥಾನದಲ್ಲಿ ವಿಗ್ರಹಕ್ಕೆ ಚಪ್ಪಲಿಹಾರ ಹಾಕಲಾಯಿತೆಂದು ಆರೋಪಿಸಿ ಅಲ್ಪಸಂಖ್ಯಾತರ ಮೇಲೆ ಧಾಳಿ ನಡೆಸಿತು. ಆ ಸಂದರ್ಭದಲ್ಲಿ ಸಿಪಿಐ(ಎಂ) ನ ರಾಜ್ಯ ನಿಯೋಗ ಭೇಟಿ ನೀಡಿತಲ್ಲದೇ, ಬಾಬಾ ಬುಡನ್‌ಗಿರಿಗೂ ತೆರಳಿ ವಿವಾದದ ಕೂಲಂಕುಶ ಅಧ್ಯಯನ ನಡೆಸಿತು. ಅಲ್ಲಿನ ಪ್ರಗತಿಪರ ಸಂಘಟನೆಗಳನ್ನು, ವ್ಯಕ್ತಿಗಳನ್ನು ಒಂದುಗೂಡಿಸಿ ಖಾವಿ ಪಡೆಗಳ ಹುನ್ನಾರಗಳಿಗೆ ಪ್ರತಿರೋಧ ಒಡ್ಡುವ ಪ್ರಯತ್ನವನ್ನು ಆರಂಭಿಸಲಾಯಿತು. ಇದರ ಮುಂದುವರಿದ


ಅಡ್ಡಹಾದಿ

ಭಾಗವಾಗಿ ಸಿಪಿಐ ಹಾಗೂ ಎಐವೈಎಫ್ ನಂತಹ ಸಂಘಟನೆಗಳು ನಂತರ ಡಿವೈಎಫ್‌ಐ-ಎಸ್‌ಎಫ್‌ಐ ಗಳೂ ಜನ ಜಾಗೃತಿಗೊಳಿಸಿ ಸೌಹಾರ್ದ ಪರಂಪರೆ ಕಾಪಾಡಲು ಜಾಥಾದಂತಹ ಹಲವಾರು ಕಾರ್ಯಕ್ರಮ ನಡೆಸಿದವು. ಹೀಗೆ ರಾಜ್ಯದಲ್ಲಿ ಹಾಗೂಚಿಕ್ಕಮಗಳೂರಿನ ಪರಿಸರದಲ್ಲಿ ಸಂಘ ಪರಿವಾರದ ಆಕ್ರಮಣಗಳ ವಿರುದ್ಧ ಮೂಡುತ್ತಿದ್ದ ಎಚ್ಚರ, ಗುಜರಾತ್ ಹತ್ಯಾಕಾಂಡವು ಹೆಚ್ಚಿಸಿದ ಅಪಾಯದ ಅರಿವಿನ ಲಾಭ ಪಡೆದ 'ಕವಿರಂ' ಬಾಬಾಬುಡನ್ ಗಿರಿಯತ್ತ ಹೆಜ್ಜೆ ಹಾಕಿತು ಎಂಬ ವಾಸ್ತವವನ್ನು ಗಮನಿಸಬೇಕು.

ರಾಜ್ಯದಲ್ಲಿನ ಇಂತಹ ಪೂರ್ವಭೂಮಿಕೆ ಮತ್ತು ಕೋಮುವಾದದ ವಿರುದ್ಧದ ಚಟುವಟಿಕೆ, ಹೋರಾಟಗಳಲ್ಲಿ ಸಕ್ರಿಯವಾಗಿ ಭಾಗವಹಿಸಿದವರೆ ಬಾಬಾ ಬುಡನ್‌ಗಿರಿ ಹೋರಾಟದಲ್ಲಿ ಸಹಜವಾಗಿ ತೊಡಗಿದರು. ಇದರಲ್ಲಿ ಸಿಪಿಐ(ಎಂ) ಹಾಗೂ ಸಾಮೂಹಿಕ ಸಂಘಟನೆಗಳು ಸಹ ಸಕ್ರಿಯವಾಗಿ ಪಾತ್ರವಹಿಸಿವೆ.

ವಿಶಾಲ ಪ್ರತಿರೋಧ - ಹಾಳುಗೆಡವಿದ ವಾರ್ ಗುಂಪು

ಕೋಮುವಾದಕ್ಕೆ ಪ್ರತಿರೋಧ ಒಡ್ಡುವುದನ್ನೇ ಮುಖ್ಯ ಗುರಿಯಾಗಿಸಿ, ಅದನ್ನು ಇನ್ನೂ ವಿಸ್ತೃತವಾಗಿ, ವಿಶಾಲವಾಗಿ ಹೆಚ್ಚು ಪ್ರಜಾಸತ್ತಾತ್ಮಕವಾಗಿ ಕೊಂಡೊಯ್ಯುವುದು ಅತ್ಯಗತ್ಯವಾಗಿತ್ತು. ಆದರೆ ಬಾಬಾಬುಡನ್ ಗಿರಿ ಸೌಹಾರ್ದ ವೇದಿಕೆ ಅಥವಾ ನಂತರ ರೂಪಾಂತರವಾದ ಕರ್ನಾಟಕ ಕೋಮು ಸೌಹಾರ್ದ ವೇದಿಕೆಯಲ್ಲಿನ ಪ್ರಧಾನ ಸಂಘಟನಾ ಸ್ಥಾನಗಳಲ್ಲಿದ್ದ ಪೀಪಲ್ಸ್ ವಾರ್ ಗುಂಪು, ಕವಿರಂನ ಕಾರ್ಯಕರ್ತರ ಕಾರ್ಯವೈಖರಿಯು ಎಲ್ಲರನ್ನು ಒಳಗೊಳಿಸಿ ಕೊಂಡೊಯ್ಯ ಬಯಸದೆ ಅವರದೇ ಆದ ಸಂಕುಚಿತ ಅಜೆಂಡಾಗಳಿಗೆ ಅನುಗುಣವಾಗಿ ಕಾರ್ಯ ನಿರ್ವಹಿಸಿತು. ಹೀಗೆ ವಿಶಾಲ ಪ್ರತಿರೋಧ ಒಡ್ಡಬೇಕಿದ್ದ ಸಂದರ್ಭದಲ್ಲಿ ಕವಿರಂ ಮತ್ತು ಪೀಪಲ್ಸ್ ವಾರ್ ಗುಂಪಿನವರ ಬೇರೆ ಉದ್ದೇಶಗಳೇ ಅದರ ಸ್ವರೂಪವನ್ನು ಹಾಳುಗೆಡಹಿ ಅನೇಕ ಸಂಘಟನೆಗಳ, ಬುದ್ಧಿಜೀವಿಗಳು ದೂರವಾಗುವಂತೆ ಮಾಡಿದವು.

ಅಡ್ಡಹಾದಿ : ಅಡಗುದಾಣ!

ಪಶ್ಚಿಮ ಘಟ್ಟದಲ್ಲಿ ಆದಿವಾಸಿಗಳ ಪ್ರಶ್ನೆ ಅಥವಾ ಗಣಿಗಾರಿಕೆ, ಉದ್ಯಾನವನದಂತಹ ಪ್ರಶ್ನೆಗಳನ್ನು ಈ ಗುಂಪು ಎತ್ತಿಕೊಂಡಿದ್ದು ಪರಿಹಾರ ಸಿಗಲಿ ಎಂದಲ್ಲ ಬದಲಾಗಿ ಪಶ್ಚಿಮ ಘಟ್ಟಗಳನ್ನು ತಮ್ಮ ಅಡಗುದಾಣ ಮಾಡಿಕೊಳ್ಳಲೆಂದೇ ಗಮನವನ್ನು ಕೇಂದ್ರೀಕರಿಸಿತ್ತು. ಇವೆಲ್ಲಾ ಆ ಉದ್ದೇಶಕ್ಕೆ ಪೂರಕವಾದ ಚಟುವಟಿಕೆಗಳಷ್ಟೇ?

ಸೈದ್ಧಾಂತಿಕ-ರಾಜಕೀಯ ಭಿನ್ನಾಭಿಪ್ರಾಯಗಳಿದ್ದರೂ ಒಂದು ನಿರ್ದಿಷ್ಟ ಉದ್ದೇಶಕ್ಕಾಗಿ ಎಲ್ಲರನ್ನೂ ಒಂದುಗೂಡಿಸಿ ಕೊಂಡೊಯ್ಯುವ ಅನುಭವ ಸಿಪಿಐ(ಎಂ) ಮತ್ತು ಎಡಪಕ್ಷಗಳಿಗೆ ಹೊಸದೇನಲ್ಲ. 86 ಸಂಘಟನೆಗಳುಳ್ಳ ಸಾಮೂಹಿಕ ಸಂಘಟನೆಗಳ ವೇದಿಕೆಯಂತಹವು ಗಳಾಗಲೀ, ಪ.ಬಂಗಾಳ, ತ್ರಿಪುರಾದಂತಹ ಎಡರಂಗಗಳ ಒಗ್ಗಟ್ಟು - ಕ್ರಿಯಾಶೀಲ ಪಾತ್ರ ಕಾಯ್ದುಕೊಳ್ಳುವಲ್ಲಿ ಇದನ್ನು ಕಾಣಬಹುದು. ಆದರೆ ಇಂತಹ ವೇದಿಕೆ, ಪ್ರಯತ್ನಗಳ ವಿರುದ್ಧವೇ ಪೀಪಲ್ಸ್ ವಾರ್ ಗುಂಪು ಸತತವಾಗಿ ಧಾಳಿ ನಡೆಸುತ್ತಿರುವುದು.

ದುರುದ್ದೇಶದ ದೃಷ್ಟಿ - ಈಶರ ಸೃಷ್ಟಿ!

ಪ್ರೊ. ಶ್ರೀಧರರ ಮೇಲೆ ಹಲ್ಲೆಯಾದಾಗ 'ಜಿ.ಎನ್. ವಾರ್ನಿಂಗ್ ಸ್ಟೇಟ್‌ಮೆಂಟ್ ಕೊಟ್ಟುಬಿಟ್ಟರು' ಎಂಬುದು ಸುಳ್ಳಿನ ಸುರುಳಿ, ಈಶರವರ ಸ್ವಕಲ್ಪಿತ ಆರೋಪ. ಪ್ರೊ. ಶ್ರೀಧರರ ಮೇಲೆ ಎಬಿವಿಪಿ ಕಾರ್ಯಕರ್ತರು ಧಾಳಿ ನಡೆಸಿದ ವಿಷಯ ತಿಳಿಯುತ್ತಿದ್ದಂತೆ ಸಿಪಿಐ(ಎಂ) ರಾಜ್ಯ ಸಮಿತಿಯು ತಕ್ಷಣವೇ ಖಂಡನಾ ಹೇಳಿಕೆ ನೀಡಿತು. ಹಲ್ಲೆಯನ್ನು ಪ್ರತಿಭಟಿಸಲು ಕರೆ ನೀಡಿತು. ಮರುದಿನದ ಪತ್ರಿಕಾಗೋಷ್ಠಿಯಲ್ಲಿ ಧಾಳಿ ನಡೆಸಿದವರ ಮೇಲೆ ಉಗ್ರ ಕ್ರಮ ಜರುಗಿಸ ಬೇಕೆಂದು ಜಿ.ಎನ್. ಮತ್ತು ನಮ್ಮ ಶಾಸಕರು ಆಗ್ರಹಿಸಿದರು. ಕೋರಮಂಗಲದ ಗಲಭೆಗಳಲ್ಲಿ ಬಿಜೆಪಿ - ಎಬಿವಿಪಿಗಳ ಕೈವಾಡವನ್ನು ನಮ್ಮ ಪಕ್ಷ ಬಯಲಿಗಿಟ್ಟಿತು. ಇದೇ ಸಂದರ್ಭದಲ್ಲಿ ರಾಜ್ಯ ಸಮ್ಮೇಳನ ಜರುಗುತ್ತಿದ್ದರೂ ಎಸ್‌ಎಫ್‌ಐ ಸಂಘಟನೆಯು ಕಲಾಪಗಳನ್ನು ಮುಂದೂಡಿ ಅಂದೇ ಮೈಸೂರು ಬ್ಯಾಂಕ್ ಸರ್ಕಲ್‌ನಲ್ಲಿ ಪ್ರತಿಭಟನಾ ಪ್ರದರ್ಶನ ನಡೆಸಿತು. ಹೀಗಿರುವಾಗ ಬಿಳಿದಾಳೆ ಈಶರವರು ಸತ್ಯಕ್ಕೆ ವಿರುದ್ಧವಾಗಿ ಆರೋಪಿಸುವುದರಲ್ಲಿ ಸ್ಪಷ್ಟವಾದ ದುರುದ್ದೇಶ ಕಣ್ಣಿಗೆ ರಾಚುವಂತಿದೆ. ಶಾಂತಿಗಾಗಿ ನಾಗರೀಕರ ವೇದಿಕೆಯಲ್ಲಿ ಏನಾದರೂ ತಕರಾರುಗಳು ಎದ್ದಿದ್ದರೆ ಸಿಪಿಐ(ಎಂ) ನ್ನೇಕೆ ಅವರು ದೂರಬೇಕು.

ಮಾವೋಯಿಸ್ಟರೆಂದು ಕರೆದುಕೊಳ್ಳುವ 'ಲಿನ್ ಪಿಯಾವೋ' ವಾದಿಗಳು ಹಾಗೂ ಕೋಮುವಾದಿಗಳು ಒಂದೇ ಎಂಬ ಅಭಿಪ್ರಾಯ ಸಿಪಿಐ(ಎಂ)ನದಲ್ಲ. ಅಂತಹ ಸಮೀಕರಣದ ಅಭಿಪ್ರಾಯಗಳು ಬಂದಾಗ ನಮ್ಮ ಭಿನ್ನ ನಿಲುವನ್ನು ವ್ಯಕ್ತಪಡಿಸಿದ್ದೇವೆ. ಮಾರ್ಚ್ 27 ರ ಸಭೆಯಲ್ಲಿಯೂ ಇಂತಹ ಅಭಿಪ್ರಾಯವನ್ನು ಕೆಲವು ಗೆಳೆಯರು ತಳೆದಾಗ ನಮ್ಮ ಪಕ್ಷದ ಸಂಗಾತಿ ಬಯ್ಯಾರೆಡ್ಡಿಯವರು ಆಕ್ಷೇಪಿಸಿ ಸ್ಪಷ್ಟನೆ ನೀಡಿ, ಭಿನ್ನ ನಿಲುವು ಪ್ರತಿಪಾದಿಸಿದರು. ವೆಣಸಿನ ಹಾಡ್ಯ-ಪಾವಗಡ ಘಟನೆಗಳ ಬಳಿಕ 'ನಕ್ಸಲೀಯ ಚಳುವಳಿ ಬಗ್ಗೆ ಕೆಲವು ಚರ್ಚೆ ವ್ಯವಸ್ಥೆಗೊಳಿಸಿದ್ದರು. ಆದರೆ ಸಂಘಟಕರು ಬಜರಂಗದಳದ ಸಿ.ಟಿ.ರವಿ ಮುಂತಾದವರನ್ನು ಆಹ್ವಾನಿಸಿರುವುದು ತಿಳಿದಾಗ ಅಂತಹ ಶಕ್ತಿಗಳೊಂದಿಗೆ ವೇದಿಕೆ ಹಂಚಿಕೊಳ್ಳಲು ಸಾಧ್ಯವೇ ಇಲ್ಲ ಎಂದು ಕಾರ್ಯಕ್ರಮದಲ್ಲಿ ಭಾಗವಹಿಸುವುದನ್ನು ನಿರಾಕರಿಸಲಾಯಿತು. ಇದ್ದದ್ದು-ಇಲ್ಲದ್ದು ಎಲ್ಲವನ್ನೂ ಕಾಣುವ ಈಶರವರಿಗೆ ಇದು ಯಾಕೆ ಕಾಣಲಿಲ್ಲ? ಸಿಪಿಐ(ಎಂ) ವಸ್ತುನಿಷ್ಠ ನಿಲುವು ತಳೆಯುತ್ತದೆಂಬ ಆತಂಕವೇ?

ಕವಿರಂ ಛಿದ್ರಕಾರಿ ಸ್ವಯಂ ಘೋಷಣೆ

ಇನ್ನು 'ಕರ್ನಾಟಕ ವಿಮೋಚನಾ ರಂಗ' ಹಾಗೂ ಮಾವೋಯಿಸ್ಟರ ನಡುವಿನ ಸಂಬಂಧದ ಪ್ರಶ್ನೆ. ಕವಿರಂನ್ನು ಸಮರ್ಥಿಸಿಕೊಳ್ಳಲು ಹೆಣಗಿರುವ ಈಶ ರಾದಿಯಾಗಿ ಈ ಬಳಗವು ಹೆಜ್ಜೆ ಹೆಜ್ಜೆಗಳಲ್ಲಿಯೂ ಪೀಪಲ್ಸ್ ವಾರ್ ಗುಂಪಿನ ನಕ್ಸಲೀಯರನ್ನು ಇಂಚಿಂಚೂ ಸಮರ್ಥಿಸಿಕೊಳ್ಳುತ್ತಿರುವುದೇಕೆ? ತಮ್ಮದು ಪ್ರಜಾಪ್ರಭುತ್ವದ ಚೌಕಟ್ಟಿನೊಳಗೇ ನಡೆಸುವ ಹೋರಾಟವೆಂದು ಕವಿರಂ ಹೇಳಿಕೊಂಡರೂ ಇಂದಿನ ಪ್ರಜಾಪ್ರಭುತ್ವದ ಬಗ್ಗೆ ಅದರ ನಿಲುವೇನು? ರಾಷ್ಟ್ರ-ರಾಜ್ಯಗಳ ಬಗೆಗಿನ, ಹೋರಾಟದ ಸ್ವರೂಪದ ಬಗ್ಗೆ ಅಭಿಪ್ರಾಯವೇನು? ಇದೇ ಕವಿರಂ ಪ್ರಕಟಿಸುವ ಸಾಹಿತ್ಯ ಪುಸ್ತಕಗಳಲ್ಲಿಯೇ ಕರ್ನಾಟಕವನ್ನು ಭಾರತದಿಂದ ಪ್ರತ್ಯೇಕಿಸುವ ಸ್ಪಷ್ಟವಾದ ನಿರ್ಧಾರಗಳಿವೆ. ಭಾರತವೊಂದು ರಾಷ್ಟ್ರೀಯತೆಗಳ ಬಂಧಿಖಾನೆ ಎನ್ನುವ ಕವಿರಂ "ಕನ್ನಡವು ಶತ ಶತಮಾನಗಳಿಂದಲೂ ಸ್ವತಂತ್ರವಾಗಿ ಬಾಳಿ ಬೆಳೆದು ಬಂದ ಒಂದು ಅನನ್ಯ ರಾಷ್ಟ್ರೀಯತೆ. ಇದು ಭಾರತವೆಂಬ ಕೃತಕ ರಾಷ್ಟ್ರದ ಅವಿಭಾಜ್ಯ ಅಂಗವಲ್ಲ; ಹಾಗೆ ತನ್ನೆಲ್ಲಾ ಗುರುತುಗಳನ್ನು ಬಿಟ್ಟುಕೊಟ್ಟು ರಾಷ್ಟ್ರೀಯತೆಗಳ ಈ ಭಾರತವೆಂಬ ಬಂಧಿಖಾನೆಯೊಳಗೆ ಸವೆಯಬೇಕಾಗಿಲ್ಲ." (ಕವಿರಂ ಮುಖಪತ್ರಿಕೆ 'ಸ್ವತಂತ್ರ ಕರ್ನಾಟಕ'ದ ಜನವರಿ - ಫೆಬ್ರವರಿ, 2001 ರ ಸಂಚಿಕೆಯ ಸಂಪಾದಕೀಯದಿಂದ) ಈ ಹೇಳಿಕೆಯ ನಿಜವಾದ ತುಡಿತವೇನು? ಅರ್ಥವೇನು? ಕರ್ನಾಟಕವನ್ನು ಭಾರತದಿಂದ ಪ್ರತ್ಯೇಕಿಸುವ ಛಿದ್ರಕಾರಿ ಗುರಿಯ ಬೀಜವಲ್ಲವೆ ಇದು?

ಕರ್ನಾಟಕ ಸೇರಿದಂತೆ ಭಾರತದ ವಿವಿಧ ರಾಜ್ಯಗಳಿಗೆ ವಿವಿಧ ರಾಷ್ಟ್ರೀಯತೆಗಳಿಗೆ ತಮ್ಮ ಭಾಷೆ, ಸಂಸ್ಕೃತಿ, ಅನನ್ಯತೆಗಳನ್ನು ರಕ್ಷಿಸಿಕೊಂಡು ಬೆಳವಣಿಗೆ ಹೊಂದಲು ಅನಿವಾರ್ಯವಾದ ಮತ್ತು ಅಗತ್ಯವಾದ ಗರಿಷ್ಠ ಸ್ವಾಯತ್ತತೆ ಹಾಗೂ ಹೆಚ್ಚೆಚ್ಚು ಅಧಿಕಾರ ದೊರೆಯಬೇಕೆಂಬುದೇ ಸಿಪಿಐ(ಎಂ)ನ ಒತ್ತಾಯವಾಗಿದೆ. ಆದರೆ ತದ್ವಿರುದ್ಧವಾಗಿ ಕವಿರಂ, ಮಾರ್ಕ್ಸ್‌ವಾದಿ ತಿಳುವಳಿಕೆಯನ್ನು ವಿಕೃತಗೊಳಿಸಿ ಕರ್ನಾಟಕದ ರಾಷ್ಟ್ರೀಯತೆಯನ್ನು 'ಭಾರತದ ಬಂಧಿಖಾನೆ'ಯಿಂದ ವಿಮೋಚನೆಗೊಳಿಸುವ ಗುರಿ ಹೊಂದಿದೆ. ಯಾವ ಪದಗಳ ಗಾರುಡಿಯಿಂದಲೂ ಈ ಸತ್ಯವನ್ನು ಮರೆ ಮಾಡಲು ಸಾಧ್ಯವಿಲ್ಲ.

ಕವಿರಂ, ಪಿ.ಡಬ್ಲ್ಯ್.ಜಿ ಮುಂತಾದ ಸಂಘಟನೆಗಳು ಪಂಜಾಬ್, ಕಾಶ್ಮೀರ, ತ್ರಿಪುರ, ಮಣಿಪುರ, ಆಸ್ಸಾಂ, ಮುಂತಾದ ಭಯೋತ್ಪಾದಕ, ವಿಭಜನಕಾರಿ ಚಳುವಳಿಗಳಿಗೆ ಬೆಂಬಲ ನೀಡುತ್ತಿವೆ. ಇದನ್ನು ರಾಷ್ಟ್ರೀಯ ವಿಮೋಚನಾ ಹೋರಾಟಗಳೆಂದು ಕರೆದಿವೆ.

ಇಂತಹ ವಿಚ್ಛಿದ್ರಕಾರಿ ಸಂಘಟನೆಗಳೊಂದಿಗೆ ಕವಿರಂ, ಪಿಡಬ್ಲ್ಯ್‌ಜಿ ಸಂಘಟನೆಗಳು ಹೊಂದಿರುವ ಸಂಪರ್ಕ, ನಡೆಸಿರುವ ಕಾರ್ಯಾಗಾರಗಳು, ವಿಚಾರ ಸಂಕಿರಣಗಳೆಷ್ಟು? ಕಾಶ್ಮೀರದ ಪ್ರತ್ಯೇಕತಾವಾದಿಗಳನ್ನು ಕರ್ನಾಟಕಕ್ಕೆ ಕರೆತಂದು ಇಲ್ಲಿ ಅವರನ್ನು ಮೆರೆಸಿಲ್ಲವೇ? ಎಂಬ ಪ್ರಶ್ನೆಗಳಿಗೆ ಮೊದಲು ಈ ಸಂಘಟನೆಗಳು ಉತ್ತರ ನೀಡಲಿ.

ಇಂತಹ ವಿಛಿದ್ರಕಾರಿ ನಿಲುವುಗಳಿಗೆ ಸಿಪಿಐ(ಎಂ) ಬೆಂಬಲಿಸಬೇಕೆಂದು ನಿರೀಕ್ಷಿಸಲಾಗುತ್ತಿದೆಯೇ? ಇದರ ಬಗ್ಗೆ ಜನತೆಯನ್ನು ಎಚ್ಚರಿಸುವ ಹೊಣೆಗಾರಿಕೆ ಸಿಪಿಐ(ಎಂ)ಗೆ ಇದೆ. ಕವಿರಂಗೆ ನಕ್ಸಲ್ ಸಂಪರ್ಕಗಳಿವೆ ಎಂಬುದು ಕಲ್ಪನೆಯಲ್ಲ. ಅದು ಪೀಪಲ್ಸ್ ವಾರ್ ಗುಂಪು ಕರ್ನಾಟಕದಲ್ಲಿ ಮರೆಮಾಚಿಕೊಂಡು ಕೆಲಸ ಮಾಡಲು ಸೃಷ್ಟಿಸಿದ ಮುಖವಾಡ ಎಂಬ ಸ್ಪಷ್ಟ ನಿಲುವಿನ ನಮ್ಮ ಬಹಿರಂಗ ಪತ್ರವು ಈಶರಂತಹ ಕಾವ್ರೇಡ್‌ಗಳಿಗೆ ಆಕ್ರೋಶ-ಹತಾಶೆ ಹುಟ್ಟಿಸಿರಬೇಕು.

ಜೀವ, ಜೀವನ ಹಾನಿ : ಭಿನ್ನ ದೃಷ್ಟಿ

ಕಾರಿಡಾರ್ ಯೋಜನೆಯಲ್ಲಿನ ಭ್ರಷ್ಟಾಚಾರ, ಅದರಿಂದ ಬಡರೈತರಿಗೆ, ಬಡಜನರಿಗೆ ಆಗುವ ತೊಂದರೆಯನ್ನು ನಿವಾರಿಸಿಕೊಳ್ಳುವ ಹೋರಾಟ ಬೇರೆ, ಕಾರಿಡಾರ್ ಯೋಜನೆಯನ್ನೇ ವಿರೋಧಿಸುವುದು ಬೇರೆ ಎಂಬುದು ಸಿಪಿಐ(ಎಂ)

ಜಗತ್ತಿಗೆ ಸದಾ ಪ್ರಜಾಪ್ರಭುತ್ವದ ಪಾಠ ಬೋಧಿಸುವ ಅಮೆರಿಕಾ ತನ್ನ ಜನತೆಗೆ ನೀಡಿರುವ ಸ್ಥಾನವೇನು? ಜಗದ ಅಧಿಪತ್ಯ ಸಾಧಿಸಲು ಹವಣಿಸುವ ಈ ಪೈಶಾಚಿಕ ಪ್ರಭುತ್ವದ ಕೃತ್ಯಗಳತ್ತ ಒಂದು ಇಣುಕು

ಅಮೇರಿಕ ನೆಲದಲ್ಲಿ ಎಂತಹ ಪ್ರಜಾಪ್ರಭುತ್ವ?

ಇರಾಕ್‌ನ ಅಬು ಗ್ರಾಯಿಬ್ ಬಂಧೀಖಾನೆಯಲ್ಲಿ ಅಮೇರಿಕಾದ ಸೈನಿಕರು ಮಾನವ ಜನಾಂಗ ಹಿಂದೆಂದೂ ಕೇಳರಿಯದ ನಾಚಿಕೆಗೇಡಿನ ಹಿಂಸಾಕೃತ್ಯಗಳನ್ನು ಬಂಧಿಗಳ ಮೇಲೆ ನಡೆಸುತ್ತಿದ್ದದ್ದು ಜಗಜ್ಜಾಹೀರಾದ ಕೂಡಲೇ "ಅಮೇರಿಕನ್ ಮೌಲ್ಯಗಳು" ಉಲ್ಲಂಘನೆ ಯಾಗುತ್ತಿವೆ ಯೆಂದು ಅಮೇರಿಕನ್ ಪ್ರಭುತ್ವ ಆಶ್ಚರ್ಯ ಗೊಂಡಂತೆ ನಟಿಸುತ್ತಿರುವುದು ಬೂಟಾಟಿಕೆಯೇ ಸರಿ. ಇರಾಕ್‌ನ ಅಬುಗ್ರಾಯಿಬ್, ಕ್ಯೂಬಾದ ಗ್ವಾಂಟನಾಮೊ, ಯುಗೋಸ್ಲೋವಿಯಾದ ಬೆಲ್‌ಗ್ರೇಡ್, ಅಫ್ಘಾನಿಸ್ತಾನ ಮತ್ತು ಜಗತ್ತಿನಿತರೆಡೆಯಲ್ಲೆಲ್ಲ ಅಮೆರಿಕಾ ನಡೆಸುತ್ತಿರುವ ಹಿಂಸಾಕೃತ್ಯಗಳು ಗೊತ್ತಿರುವುದೇ ಆದರೂ ಇಂತಹುದೇ ಪಾತಕಿ ಕೃತ್ಯಗಳು ಅಮೇರಿಕಾದ ಹೃದಯ ಭಾಗಗಳಲ್ಲೇ ನಡೆಯುತ್ತಿರುವುದು ಅನೇಕರಿಗೆ ಗೊತ್ತಿರಲಿಕ್ಕಿಲ್ಲ. ಇರಾಕಿ ಜನರಿಗೆ, ಅರಬ್ಬರಿಗೆ, ಮಧ್ಯ ಅಮೇರಿಕಾ, ದಕ್ಷಿಣ ಅಮೇರಿಕಾ, ಲ್ಯಾಟಿನ್ ಅಮೇರಿಕಾ, ಕೆರಿಬಿಯನ್, ಉತ್ತರಕೊರಿಯಾ, ವಿಯೆಟ್ನಾಂ ಮತ್ತು ಹಲವು ಇನ್ನಿತರ ಜನರಿಗೆ ನಾಗರಿಕ ಸಮಾಜದ ಲವಲೇಶ ಗಂಧಗಾಳಿಯೂ ಗೊತ್ತಿಲ್ಲದ್ದರಿಂದ ಇವರಿಗೆಲ್ಲ ಪ್ರಜಾಪ್ರಭುತ್ವದ ಪ್ರಾಥಮಿಕ ಪಾಠಗಳನ್ನು ಶ್ವೇತ ಭವನ, ಪೆಂಟಾಗಾನ್ ಮತ್ತು ಸಿಐಎ ಯಲ್ಲಿರುವ ಅಮೆರಿಕಾದ ಪ್ರೊಫೆಸರ್‌ಗಳು ಕಲಿಸಬೇಕಾಗಿದೆಯೆಂದು ಹೇಳಲಾಗುತ್ತಿದೆ. ಕಂದು, ಕಪ್ಪು ಮತ್ತು ಹಳದಿ ಬಣ್ಣದ ಜನರಿಗೆ ತಮ್ಮನ್ನು ತಾವು ಆಳುವ ಕಲೆ ಸ್ವಲ್ಪವೂ ಗೊತ್ತಿಲ್ಲ ಮತ್ತು ಅವರು ಯಾವುದು ಒಳ್ಳೆಯದೆಂಬ ತೀರ್ಮಾನ ಕೂಡ ತೆಗೆದುಕೊಳ್ಳಲಾರದಷ್ಟು ದಡ್ಡರು! ಲೆನಿನ್, ಸ್ಟಾಲಿನ್, ಮಾವೊ-ತ್ಸೆ-ತುಂಗ್, ಹೋಚಿಮಿನ್, ಕಿಮ್-ಇಲ್‌ಸ್ಸಂಗ್, ಸ್ಲೊಬೊದನ್ ಮಿಲೊಸೊವಿಕ್, ಫಿಡೆಲ್ ಕ್ಯಾಸ್ಟ್ರೋ ತರಹದ ಕೊಲೆಪಾತಕರು ಮತ್ತು ಇಂತಹ ಸರ್ವಾಧಿಕಾರಿಗಳ ತೆಕ್ಕೆಗೆ ಜನರು ಸಿಕ್ಕಿಕೊಳ್ಳುತ್ತಿದ್ದಾರೆಂದು ಪ್ರತಿಬಿಂಬಿಸುತ್ತಾ ಸತ್ಯವನ್ನು ತಿರುಚುತ್ತಿದ್ದಾರೆ. ಆದರೆ ಅಬುಗ್ರಾಯಿಬ್‌ನಲ್ಲಿನ ಮನೋವಿಕೃತ ಹಿಂಸೆ ಮತ್ತು ದೌರ್ಜನ್ಯಗಳು ಅಮೇರಿಕಾದೊಳಗಿನ ಘಟನೆಗಳ ಪ್ರತಿಫಲನವಷ್ಟೇ ಎಂಬುದನ್ನು ಅರಿಯಬೇಕಿದೆ.

28 ಕೋಟಿ ಜನಸಂಖ್ಯೆ ಮಾತ್ರವಿರುವ ರಾಷ್ಟ್ರದಲ್ಲಿ ಜೈಲುಗಳ ಸಂಖ್ಯೆ 1025ರಷ್ಟನ್ನು ಮೀರುತ್ತದೆ ಮತ್ತು 500 ಹೊಸ ಖಾಸಗಿ ಜೈಲುಗಳನ್ನು ನಿರಂತರವಾಗಿ ನಿರ್ಮಿಸಲಾಗುತ್ತಿದೆ. ಬಂಧಿಗಳ ಸಂಖ್ಯೆ 21 ಲಕ್ಷಕ್ಕಿಂತ ಹೆಚ್ಚಿದೆ. ಜಾರ್ಜ್ ಬುಶ್ ವಂಶಸ್ಥರ ರಾಜ್ಯವಾದ ಟೆಕ್ಸಾಸ್ ಒಂದರಲ್ಲೇ ಇಡಿ ರಷ್ಯಾಕ್ಕಿಂತ ಹೆಚ್ಚು ಬಂಧಿಗಳಿದ್ದಾರೆ. ಒ ಬ್ರಿಯಾನ್ (ಸಮಾಜದಲ್ಲಿ ಕುಟುಂಬಗಳು 82, 2001) ರವರ ಪ್ರಕಾರ ಜಗತ್ತಿ ಒಟ್ಟಾರೆ 80 ಲಕ್ಷ ಖೈದಿಗಳಲ್ಲಿ ಅಮೇರಿಕಾವೊಂದೇ ಶೇ.25 ರಷ್ಟನ್ನು ಹೊಂದಿದೆ.

ಅಮಾನುಷ ಕೃತ್ಯಗಳು

ಜೈಲಿನಲ್ಲಿರುವ ಪುರುಷರು ಮತ್ತು ಮಹಿಳೆಯರಲ್ಲಿ ಬಹುತೇಕರು, 18 ವರ್ಷದೊಳಗಿನ ಮಕ್ಕಳನ್ನು ಹೊಂದಿದವರಾಗಿದ್ದಾರೆ. ಅಂದಾಜು 15 ಲಕ್ಷ ಮಕ್ಕಳ ತಂದೆ ತಾಯಿಗಳು ಜೈಲಿನಲ್ಲಿದ್ದಾರೆ. ಇದೆಲ್ಲವೂ ಮಕ್ಕಳ ಮೇಲೆ ಎಂತಹ ವ್ಯತಿರಿಕ್ತ ಪರಿಣಾಮ ಬೀರುತ್ತದೆಂಬುದನ್ನು ಊಹಿಸಬಹುದು. "ಕಿರುಚಾಟದ ಮನೆ" ಎಂದೇ ಕುಖ್ಯಾತಿ ಪಡೆದಿರುವ ಇಲ್ಲಿನಾಯ್ಸ್ ಜೈಲಿನಲ್ಲಿ ಜನನಾಂಗಗಳಿಗೆ, ಕಿವಿ, ಮತ್ತು ಇತರೆ ಅಂಗಗಳಿಗೆ ವಿದ್ಯುತ್ ಶಾಕ್ ಕೊಡುವುದು, ಉಸಿರುಗಟ್ಟಿಸುವುದು, ಮತ್ತು ನೀರಲ್ಲಿ ಮುಳುಗಿಸುವುದು ನಿರಂತರ ನಡೆವಳಿಯಾಗಿದೆ. ಅಮ್ನೆಸ್ಟಿ ಅಂತರರಾಷ್ಟ್ರೀಯ ವರದಿ ಪ್ರಕಾರ 8 ಸೆಕೆಂಡ್‌ಗೆ 50,000 ವೋಲ್ಟ್ಸ್ ಶಾಕ್ ನೀಡಿ ದಿಢೀರ್ ಸಾಮರ್ಥ್ಯ ಕುಗ್ಗಿಸುವ ವಿದ್ಯುತ್ ಶಾಕ್ ಆಯುಧಗಳನ್ನು ಅಮೇರಿಕಾದ ಖೈದಿಗಳು ಧರಿಸಿಕೊಳ್ಳುವಂತೆ ಮಾಡಲಾಗುತ್ತದೆ. ಅರಿಜೋನಾ ಜೈಲಿನಲ್ಲಿ ಮಹಿಳೆಯರನ್ನು ಕಂದುಬಣ್ಣದ ಒಳಉಡುಪಿನಲ್ಲಿ ಬೆತ್ತಲೆ ನಿಲ್ಲಿಸಲಾಗುತ್ತದೆ. ಕ್ಯಾಲಿಫೋರ್ನಿಯಾ ಜೈಲಿನಲ್ಲಿ ಪುರುಷ ಖೈದಿಗಳನ್ನು ಅತ್ಯಾಚಾರ ಮಾಡಲು 'ಬೂಟಿ ಬಂಡಿಟ್' ಎಂಬ ವ್ಯಕ್ತಿಗಳನ್ನು ಬಳಸಲಾಗುತ್ತದೆ. 1993ರ ಅಮ್ನೆಸ್ಟಿ ಅಂತರರಾಷ್ಟ್ರೀಯ ವರದಿಯು 'ಖೈದಿಗಳು ಬೆಳಕನ್ನೇ ಕಾಣುವುದಿಲ್ಲ. ಅವರನ್ನು ನಿರಂತರ ವಿದ್ಯುತ್ ಪರಿವೀಕ್ಷಣೆಯಲ್ಲಿಡಲಾಗುತ್ತದೆ. ಕೆಲವರು ಗಂಭೀರವಾದ ದೈಹಿಕ ಹಾಗೂ ಮಾನಸಿಕ ಹಿಂಸೆ ಮತ್ತು ಕ್ಷೋಭೆಗೊಳಗಾಗಿ ಹುಚ್ಚರಾಗುತ್ತಾರೆ. ಸಲಿಂಗ ಅತ್ಯಾಚಾರ, ವಿಭಿನ್ನ ಲಿಂಗ ಅತ್ಯಾಚಾರ, ಹಿಂಸಾತ್ಮಕ ವರ್ಣಭೇದ ಬಿಕ್ಕಟ್ಟು ಮತ್ತು ದೌರ್ಜನ್ಯಗಳಿಗೆ ಪ್ರೋತ್ಸಾಹಿಸಲಾಗುತ್ತದೆ" ಎಂದು ತಿಳಿಸಿದೆ.

ಹಿಂಸೆ ಖೋರ ಸಿಐಎ

ಸಿಐಯ ಹಿಂಸೆಕೋರ ತಂತ್ರಗಳು ಕಳೆದ 50 ವರ್ಷಗಳಿಂದ ಕಂಡು ಹಿಡಿಯಲಾಗದ ಕ್ಯಾನ್ಸರ್‌ನಂತೆ ವ್ಯಾಪಕವಾಗಿವೆ. ಹುಚ್ಚಿಡಿಸುವ ಮಾದಕ ದ್ರವ್ಯಗಳು, ವಿದ್ಯುತ್ ಶಾಕ್ ಮತ್ತು ಇಂದ್ರಿಯನಾಶದ ಪ್ರಯೋಗದ ನಂತರ ನಿದ್ರೆನಾಶ ಮತ್ತು ಲೈಂಗಿಕ ಹೀನತೆಗಳಂಥಹ ಮಾನಸಿಕ ಹಿಂಸಾ ವಿಧಾನಗಳನ್ನು ಸಿಐಎ ಸಂಶೋಧನೆ ಕಂಡುಕೊಂಡಿತು. ಅಮೇರಿಕಾ ನಾಯಕರ ಮತ್ತು ಅಧಿಕಾರಿಗಳ ಮನೋವಿಕೃತ ಸ್ವಭಾವವನ್ನು ಸವಿಸ್ತಾರವಾಗಿ 'ದಿ ರೋಗ್ ಸ್ಟೇಟ್' ಎಂಬ ಪುಸ್ತಕದಲ್ಲಿ ಎಳೆಎಳೆಯಾಗಿ ವಿಲಿಯಮ್ ಬ್ಲುಮ್‌ರವರು ಬಿಡಿಸಿಟ್ಟಿದ್ದಾರೆ.

ಕಲ್ಲುಗಳಿಂದ ಹೊಡೆದು ತನ್ನ ಹೆತ್ತ ಮಕ್ಕಳನ್ನೇ ಸಾಯಿಸುವ, ತನ್ನ ಮಕ್ಕಳನ್ನು ಹಸಿವಿಂದ ಕೊಲ್ಲುವ, ಕಾರೊಳಗೆ ಮಕ್ಕಳನ್ನು ಮುಗಿಸುವ, ಹೆಂಡತಿಯರು ಗಂಡಂದಿರನ್ನು ಕೊಲ್ಲುವ, ಗಂಡದಿರು ಪತ್ನಿಯರನ್ನು ಸಾಯಿಸುವ, ಗಂಡುಮಕ್ಕಳು ಮತ್ತು ಹೆಣ್ಣುಮಕ್ಕಳು ಹೆತ್ತವರನ್ನು ಸಾಯಿಸುವ - ಇಂತಹ ಹಲವು ಹತ್ತಾರು ಘಟನೆಗಳು ವರದಿಯಾಗದೆ ಅಮೇರಿಕಾದಲ್ಲಿ ಒಂದು ದಿನವೂ ಸಾಗುವುದಿಲ್ಲ. ಮನೋವಿಕೃತರು, ಸ್ಯಾಡಿಸ್ಟರು, ಕೊಲೆಗಾರರು ಮತ್ತು ಪಾತಕಿಗಳಿರುವುದರಿಂದಲೇ ಅಮೇರಿಕಾ 'ಹುಚ್ಚು ಸಮಾಜ'ವೆಂಬ ಮತ್ತೊಂದು ಹೆಸರು ಪಡೆದಿರುವುದು. ಜಾಗತಿಕ ಮಟ್ಟದಲ್ಲಿ ಬಡರಾಷ್ಟ್ರಗಳ ಜನತೆಯನ್ನು ಆರ್ಥಿಕ ಪಾಶದಿಂದ ಬಿಗಿಯಲು ಅಮೇರಿಕಾದ ಐಎಂಎಫ್ ಮತ್ತು ವಿಶ್ವಬ್ಯಾಂಕ್‌ಗಳಿವೆ. ಸಮೂಹನಾಶ ಶಸ್ತ್ರಾಸ್ತ್ರಗಳನ್ನು ಉತ್ಪಾದಿಸುವ ಅಮೇರಿಕಾದ ಕಂಪನಿಗಳಾದ ರೆಥಿಯಾನ್ಸ್, ಉತ್ತರ ಅಮೇರಿಕಾದ ರಾಕ್‌ವೆಲ್ಸ್, ನರಲ್ ಡೈನಾಮಿಕ್ಸ್ ಮುಂತಾದವುಗಳಿದ್ದರೆ, ಇವುಗಳನ್ನು ಮಾರಾಟ ಮಾಡಲು ಟೊಂಕ ಕಟ್ಟಿ ನಿಂತಿರುವ ಅಮೇರಿಕಾದ ರಾಜಕೀಯ ಶಕ್ತಿ ಆಗಾಗ್ಗೆ ತನ್ನ ಮಿಲಿಟರಿಶಕ್ತಿಯನ್ನು ಜಳಪಿಸಿ ನಡುಕ ಉಂಟುಮಾಡಲು ಯತ್ನಿಸುತ್ತದೆ. ವಿದೇಶಿ ನಾಯಕರನ್ನು ಕೊಲ್ಲಲು ಬಹಿರಂಗವಾಗಿ ಎಲ್ಲ ನೆರವು ಮತ್ತು ಪ್ರೋತ್ಸಾಹವನ್ನು ನಾವು ಕಂಡಿರುವಂತೆ ಅಮೇರಿಕಾ ಮಾತ್ರ ಒದಗಿಸುತ್ತದೆ.



'ರಾಷ್ಟ್ರ ಕಟ್ಟುವುದು', 'ಪ್ರಜಾಪ್ರಭುತ್ವ', 'ಸ್ವಾತಂತ್ರ್ಯ' ಮುಂತಾದ ಅಲಂಕಾರಿಕ ಪದಗಳನ್ನು ಬಳಸುತ್ತಲೇ ತನ್ನ ಆರ್ಥಿಕ ಹಿತಾಸಕ್ತಿಯ ಬೇಳೆ ಬೇಯಿಸಿಕೊಳ್ಳಲು ಇತರೆ ರಾಷ್ಟ್ರಗಳನ್ನು ಶೋಷಿಸುವುದಷ್ಟೇ ಅಲ್ಲದೆ ತನ್ನ ದೇಶದೊಳಗೆ ತನ್ನ ನೀತಿಯನ್ನು ವಿರೋಧಿಸುವ ಜನತೆಯನ್ನು ಅತ್ಯುಗ್ರವಾಗಿ ದಮನ ಮಾಡುತ್ತಿರುವುದೇ ಅಮೇರಿಕಾದ ಭ್ರಮಾಲೋಕದ ಕಟ್ಟಡದ ಹಿಂದಿನ ವಾಸ್ತವತೆ ಇದನ್ನೇ ಚಾರ್ಲಿ ಚಾಪ್ಲಿನ್‌ರ ವ್ಯಂಗ್ಯ ಮಾತುಗಳಲ್ಲಿ ಹೇಳುವುದಾದರೆ 'ಒಂದು ಕೊಲೆ ಮಾಡಿದರೆ ಆ ವ್ಯಕ್ತಿ ಕೊಲೆಗಾರನಾಗುತ್ತಾನೆ. ಲಕ್ಷ ಕೊಲೆ ಮಾಡಿದರೆ ಹೀರೋ ಆಗುತ್ತಾನೆ. ಸಂಖ್ಯೆಗಳು ವ್ಯಕ್ತಿಯ ಪಾವಿತ್ರ್ಯತೆಯನ್ನು ಹೆಚ್ಚಿಸುತ್ತದೆ' ಜಗತ್ತಿನ ತುಂಬೆಲ್ಲ ಬಂಡವಾಳಶಾಹಿಯ ಪರಮತತ್ವ ನೀತಿಗಳಾದ 'ಅದರಿಂದ ನನಗಾಗುವ ಲಾಭವೇನು?, ಅವರವರು ತಂತಮ್ಮ ಕೆಲಸ ನೋಡಿಕೊಳ್ಳಬೇಕಷ್ಟೆ" ಎನ್ನುವಂತಹ ಖಾಸಗಿ ಕಂಪನಿಗಳ ಸಿದ್ಧಾಂತವನ್ನು ಹರಿಯಬಿಡಲಾಗುತ್ತಿದೆ.

2001ರ ಅಕ್ಟೋಬರ್ 26ರಂದು 'ಯುಎಸ್‌ಎ ರಾಷ್ಟ್ರಾಭಿಮಾನಿ ಕಾಯಿದೆ-1' ಜಾರಿಯಾದಂದಿನಿಂದ ಅಮೇರಿಕಾ ಪೊಲೀಸ್ ದೇಶವಾಗಿದೆ. ಈ ಕಾಯಿದೆ ಸರ್ಕಾರಕ್ಕೆ ರಾತ್ರೋರಾತ್ರಿ ಹಲವು ಅಧಿಕಾರಗಳನ್ನು ನೀಡಿದೆ. ಅಹಿಂಸಾತ್ಮಕ ಪಿಕೆಟಿಂಗ್, ಪ್ರದರ್ಶನಗಳು, ರ್‍ಯಾಲಿಗಳು, ಅಸಹಕಾರ ಚಳುವಳಿ ಮತ್ತು ಕಾರ್ಮಿಕ ಬಂದ್‌ಗಳನ್ನು ಭಯೋತ್ಪಾದಕ ಚಟುವಟಿಕೆಯೆಂದು ಪರಿಗಣಿಸಿ ಕಾನೂನಿನಡಿ ಶಿಕ್ಷಿಸಬಹುದಾಗಿದೆ. ಯಾರೊಬ್ಬರ ಮನೆಯನ್ನು ಯಾವ ಹೊತ್ತಿನಲ್ಲಾದರ ಶೋಧಿಸಲು, ಕಾರ್ಮಿಕ ಮುಖಂಡರ ಮೇಲೆ ನಿಗಾ ವಹಿಸಿ, ಟೆಲಿಫೋನ್ ಕದ್ದಾಲಿಸಲು, ವಲಸೆ ಬಂದವರನ್ನು ಏಕಾಏಕಿ ಜೈಲಿನಲ್ಲಿಡಲು ಎಲ್ಲ ಅಧಿಕಾರವನ್ನು ಪೊಲೀಸರು ಹೊಂದಿದ್ದಾರೆ. ಅಂಕಣಕಾರರೊಬ್ಬರು ಹೇಳುವಂತೆ "ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಪ್ರೀತಿಸುತ್ತೇವೆಂದು ನಾವು ಹೇಳಿಕೊಂಡರೂ, ನಾವು ಏನನ್ನು ವ್ಯಕ್ತಪಡಿಸಲೂ ಹಿಂಜರಿಯುತ್ತೇವೆ ಇಲ್ಲದಿದ್ದಲ್ಲಿ ಮೊದಲ ತಿದ್ದುಪಡಿಬೇಕೆಂದು ಕೇಳುವಷ್ಟರಲ್ಲೇ ತೋಳಗಳು ಬಂದೆರಗುತ್ತವೆ. ನಿಮ್ಮ ಇ-ಮೇಲ್ ಕಳುಹಿಸುವಾಗ ಹುಷಾರಾಗಿರಿ ಇಲ್ಲದಿದ್ದಲ್ಲಿ ಅಟಾರ್ನಿ ಜನರಲ್ ಜಾನ್ ಆಶ್‌ಕ್ರಾಫ್ಟ್ ನಿಮ್ಮನ್ನು ದೇಶ-ವಿರೋಧಿಯೆಂದು ಪರಿಗಣಿಸಬಹುದು". (ದಿ ಬೋಸ್ಟನ್ ಗ್ಲೋಬ್, ಅಕ್ಟೋಬರ್ 12, 2003). ಜನರು ಓದುವ ಪುಸ್ತಕಗಳ ಮೇಲೆ ಜಾಗ್ರತೆ ವಹಿಸಲಾಗುತ್ತಿದ್ದು ಕ್ರಾಂತಿಕಾರಿ ಸಾಹಿತ್ಯ ಓದುವವರ ಮೇಲೆ ನಿಗಾವಹಿಸಲಾಗುತ್ತಿದೆ. 'ಮಾಲೀಕರನ್ನು ವಿರೋಧಿಸುವುದೇ ಅಮೇರಿಕಾದಲ್ಲಿ ಭಯೋತ್ಪಾದನೆಯಾಗಿದೆ' ಎಂದು ಪೀಪಲ್ಸ್ ವೀಕ್ಲಿ ವರ್ಲ್ಡ್ (ಸೆಪ್ಟೆಂಬರ್ 20-26, 2003) ಹೇಳಿದೆ. ಪ್ರಪಂಚದ ಉದ್ದಗಲಕ್ಕೂ ಪ್ರಜಾಪ್ರಭುತ್ವದ ಹರಿಕಾರನೆಂದು ಯಜಮಾನಿಕೆ ಸ್ಥಾಪಿಸುತ್ತಿರುವ ಅಮೇರಿಕಾದ ಪ್ರಭುತ್ವ ತನ್ನ ನೆಲದಲ್ಲಿಯೇ ನಾಗರೀಕರನ್ನು ಬಂಧಿಸಿಟ್ಟಿರುವುದನ್ನು ಅಂಕಿ-ಅಂಶಗಳು, ಜನವಿರೋಧಿ ಧೋರಣೆಗಳು ಎತ್ತಿ ಸಾರುತ್ತವೆ.

- ರಾಯ್ ಮತ್ತು ಜಯ

→

...ನ ಸ್ಪಷ್ಟವಾದ ನಿಲುವು.

ಇಂದು ರಾಜ್ಯದಲ್ಲಿ ಕೈಗಾರಿಕೆ ಮೊದಲಾದ ಕೆಲ ಬೆಳವಣಿಗೆಗಳು ಬೆಂಗಳೂರಿನಲ್ಲೇ ಕೇಂದ್ರೀಕೃತವಾಗಿರುವುದರಿಂದ ಒಂದು ಕಡೆ ಬೆಂಗಳೂರು ಟ್ರಾಫಿಕ್ ಜಾಮ್‌ಗಳ, ಜನಸಂಖ್ಯಾ ಒತ್ತಡಗಳ ಸಂಕಟವನ್ನು, ಅದರಿಂದ ಉಂಟಾಗುವ ಪರಿಸರ ಹಾನಿಯನ್ನು ಜೀವನ ಹಾನಿಯನ್ನು ಅನುಭವಿಸುತ್ತಿದೆ. ಅದೇ ಸಮಯದಲ್ಲಿ ರಾಜ್ಯದ ವಿವಿಧ ಭಾಗಗಳಲ್ಲಿ ಬೆಂಗಳೂರಿನ ಸಮೀಪದಲ್ಲಿಯೇ ಅಭಿವೃದ್ಧಿ ಕಾಣದೆ ನಿರುದ್ಯೋಗ ತಾಂಡವವಾಡುತ್ತಿದೆ. ಆಗ ಬೆಂಗಳೂರು ಮತ್ತು ಸುತ್ತಮುತ್ತಲಿನ ಎಲ್ಲ ನಗರ, ಜಿಲ್ಲೆಗಳ ನಡುವೆ ಸಂಪರ್ಕ ಸಾಧನಗಳು - ರಸ್ತೆ, ರೈಲು ಎಲ್ಲ ರೀತಿಯ ಸಂಪರ್ಕವೂ ವಿಸ್ತರಿಸಬೇಕು. ಆ ಮೂಲಕ ಬೆಂಗಳೂರು ಹಬ್ಬ ಬೇಕು ಎಂಬ ಜೀವನ ಪರವಾದ ಸಿಪಿಐ(ಎಂ) ದೃಷ್ಟಿಗೂ ಅದನ್ನು ವಿರೋಧಿಸುವ ಜೀವನ ವಿರೋಧಿ ಪೀಪಲ್ಸ್ ವಾರ್ ಗುಂಪು/ ಕವಿರಂ ದೃಷ್ಟಿಗೂ ಅಂತರ ನಿಚ್ಚಳವಾಗಿದೆ.

ಕಾರಿಡಾರ್ ಹೋರಾಟದಲ್ಲಿ ಭಾಗವಹಿಸಬೇಡಿ ಎಂದು ಸಿಪಿಐ(ಎಂ) ಎಂದೂ, ಎಲ್ಲೂ ಹೇಳಿಲ್ಲ. ಆದರೆ ಕವಿರಂಗೆ ನಕ್ಸಲೀಯರ ಸಂಪರ್ಕವಿದೆ ಎಂಬ ಮುಖವಾಡ ಬಯಲುಗೊಂಡಿದ್ದರಿಂದ ಈಶರಂಗೆ ಆಗುತ್ತಿರುವ ಸಂಕಟ ಅರ್ಥವಾಗುವಂತಹದೇ? ಯಾವುದೇ ಅಭಿವೃದ್ಧಿ-ಸಮಾಜದ ಬೆಳವಣಿಗೆ ಬಗ್ಗೆ ಮಾರ್ಕ್ಸ್‌ವಾದಿ ತಿಳುವಳಿಕೆ ಏನೆಂದು ಹುಸಿ ಪದಪುಂಜದಿಂದ ಹೊರಬಂದು ಅರ್ಥಮಾಡಿಕೊಂಡರೆ ಯಾರು ಯಾರ ಮಿತ್ರರು ಎಂಬುದು ಅರ್ಥವಾದೀತು.

ದುಸ್ಸಾಹಸವಾದಿ ಮಾರ್ಗ ತ್ಯಜಿಸಿ


ನಕ್ಸಲೀಯ ಚಳುವಳಿ-ಚಟುವಟಿಕೆಗಳನ್ನು ಕೇವಲ ಹಿಂಸೆ-ಅಹಿಂಸೆ ಅಥವಾ ಶಸ್ತ್ರ ಬಳಕೆಯ ನಿರಾಕರಣೆಯನ್ನಾಗಿ ನೋಡಲಾಗುವುದಿಲ್ಲ. ಇದು ಮಾರ್ಕ್ಸ್‌ವಾದ-ಲೆನಿನ್‌ವಾದವನ್ನು ಸೃಜನಶೀಲವಾಗಿ ಭಾರತದ ಪರಿಸ್ಥಿತಿಗೆ ಅಳವಡಿಸುವುದರ ಬಗೆಗೆ ಇರುವ ಮೂಲಭೂತ ಭಿನ್ನಾಭಿಪ್ರಾಯವಾಗಿದೆ. ಮಾವೋಯಿಸ್ಟರ ದುಸ್ಸಾಹಸದ ಮಾರ್ಗಗಳು ಮತ್ತು ಪ್ರಭುತ್ವದ ದಮನಖೋರ ಕ್ರಮಗಳಿಂದ ಪಾರ್ವತಿ, ಹಾಜಿಮಾ, ಸಾಕೇತ್‌ರಾಜನ್, ಶಿವಲಿಂಗು ರಂತಹವರ ಹತ್ಯೆ ತಡೆಯಬೇಕು ಎಂಬುದು ಸಿಪಿಐ(ಎಂ) ಆಶಯ. ವೈಚಾರಿಕತೆ, ಬದ್ಧತೆಯುಳ್ಳವರು ಜನತೆಯ ಪ್ರಜಾಸತ್ತಾತ್ಮಕ ಚಳುವಳಿಗೆ ಶಸ್ತ್ರ ಬಿಟ್ಟು ಮರಳಬೇಕು. ಈಗಾಗಲೇ ಹಲವಾರು ನಕ್ಸಲೀಯ ಗುಂಪುಗಳ ಹಿಂದಿನ ಹಾದಿಯನ್ನು ಪುನರ್‌ವಿಮರ್ಶಿಸಿಕೊಂಡಿದ್ದು, ಈ ಅನುಭವದಿಂದ ಪಾಠ ಕಲಿತಿವೆ.

ಪ್ರಭುತ್ವದ ದಮನ - ಸಿಪಿಐ(ಎಂ) ವಿರೋಧ

ಪುಟ 12 ಕ್ಕೆ

ಫ್ಯಾಸಿಸಂ ಸೋಲಿನ 60ನೇ ವಾರ್ಷಿಕೋತ್ಸವ - ಮೇ 9, 2005

ಎರಡನೇ ಮಹಾಯುದ್ಧದಲ್ಲಿ ಫ್ಯಾಸಿಸಂ ಸೋತು 60 ವರ್ಷಗಳಾಗುತ್ತಿವೆ. ಬರ್ಲಿನ್‌ಗೆ ಸೋವಿಯತ್‌ನ ಕೆಂಪು ಸೇನೆಯು ಪ್ರವೇಶಿಸಿ ಹಿಡಿತ ಸಾಧಿಸುವ ಮೂಲಕ ಹಿಟ್ಲರ್‌ನನ್ನು ಪುಡಿಗುಟ್ಟಿದ ಐತಿಹಾಸಿಕ ವರ್ಷ 1945. ಇದು 20ನೇ ಶತಮಾನದ ಇತಿಹಾಸದಲ್ಲಿ ತಿರುಗು ಬಿಂದು ಮತ್ತು ಪ್ರಗತಿಪರ ಹಾಗೂ ಕ್ರಾಂತಿಕಾರಿ ಶಕ್ತಿಗಳ ಮುನ್ನಡೆಗೆ ಹೊಸ ಹಾದಿ ತೆರೆದ ಮಹಾನ್ ಘಟನೆ. ಇಂತಹ ಮಹಾನ್ ವಿಜಯದ ಮಹತ್ವವನ್ನು ಸಾರುವ - ಪ್ರಚುರ ಪಡಿಸುವ, ಮನನಗೊಳಿಸಲು ಅದರ ಸಂದೇಶ, ಹಲವು ವೈಚಾರಿಕ ಲೇಖನಗಳನ್ನು ಪತ್ರಿಕೆ ಪ್ರಕಟಿಸಲಿದೆ. ಈ ವಾರ ಅಂತಿಮ ವಿಜಯ ಸಾರಿದ ಘಟನೆಯ ಕಥೆ ಇಲ್ಲಿದೆ. ಖ್ಯಾತ ಬರಹಗಾರ ಎಸ್.ಅಲೆಕ್ಸಿಯೇವ್‌ರವರ ಸುಪ್ರಸಿದ್ಧ ಗ್ರಂಥ ರಶಿಯನ್ ಇತಿಹಾಸದಿಂದ ಕಥೆಗಳು ಮುಂದೆ ಹಲವು ಲೇಖನಗಳು......





ವಿಜಯ ಪತಾಕೆ

ಸೋವಿಯತ್ ಸೈನ್ಯದಳಗಳು ಬರ್ಲಿನ್ನಿನ ಕೇಂದ್ರಕ್ಕೆ ಭೇಧಿಸಿಕೊಂಡು ಹೋಗಿ ರೈಹ್‌ಸ್ತಾಗ್ ಮೇಲೆ ದಾಳಿ ಮಾಡತೊಡಗಿದವು.

ರೈಹ್‌ಸ್ತಾಗ್-ಜರ್ಮನ್ ಪಾರ್ಲಿಮೆಂಟು.

"ಸಾರ್ಜಂಟ್ ಎಗೋರೊವ್!"

"ಹಾಜರಿದ್ದೇನೆ."

"ಪ್ರೈವೇಟ್ ಕಂತಾರಿಯಾ!"

"ಇದ್ದೇನೆ."

ಕಮಾಂಡರ್ ಈ ಸೈನಿಕರನ್ನು ಅವರಿಗೆ ಗೌರವಾರ್ಹ ಕಾರ್ಯಭಾರವೊಂದನ್ನು ವಹಿಸಿಕೊಡಲೆಂದು ಕರೆಯುತ್ತಿದ್ದ. ಅವರಿಗೆ ಸೋವಿಯತ್ ಕದನ ಪತಾಕೆಯೊಂದನ್ನು ನೀಡಿ ಅದನ್ನು ರೈಹ್‌ಸ್ತಾಗ್ ಮೇಲೆ ಹಾರಿಸಬೇಕೆಂದು ಆದೇಶ ನೀಡಲಾಯಿತು.

ಸೈನಿಕರು ಸೆಲ್ಯೂಟ್ ಮಾಡಿ ಹೊರಟರು. ಅನೇಕರು ಅವರು ಹೋಗುವುದನ್ನೇ ಈರ್ಷ್ಯೆಯಿಂದ ನೋಡಿದರು, ಏಕೆಂದರೆ ಅವರ ಸ್ಥಳದಲ್ಲಿ ತಾವೇ ಇರಲು ಯಾರು ಬಯಸುವುದಿಲ್ಲ?

ರೈಹ್‌ಸ್ತಾಗ್‌ಗಾಗಿ ಕದನ ಎಲ್ಲ ಉಗ್ರತೆಯೊಂದಿಗೆ ನಡೆಯುತ್ತಿದೆ.

ಬಾಗಿ ನಡೆಯುತ್ತ ಎಗೋರೊವ್ ಮತ್ತು ಕಂತಾರಿಯಾ ಚೌಕವನ್ನು ದಾಟಿ ಹೋದರು. ಸೋವಿಯತ್ ಸೈನಿಕರು ಅವರ ಪ್ರತಿಯೊಂದು ಚಲನೆಯನ್ನೂ ಕಾತರ ಕುತೂಹಲಗಳಿಂದ ಗಮನಿಸಿದರು. ಆಗ ಇದ್ದಕ್ಕಿದ್ದಂತೆ ನಾಜಿಗಳು ಘಾತುಕ ಫಿರಂಗಿಗುಂಡುಗಳ ಸುರಿಮಳೆ ಕರೆಯತೊಡಗಿದರು. ಪತಾಕೆ ಹೊತ್ತು ಹೊರಟಿದ್ದ ಸೈನಿಕರು ಬೇಗನೆ ಬಾಗಿ ಮರೆಯಲ್ಲಿ ನಿಲ್ಲಬೇಕಾಗಿ ಬಂದಿತು. ಆಮೇಲೆ ಸೋವಿಯತ್ ಸೈನಿಕರು ಮತ್ತೆ ದಾಳಿ ಪ್ರಾರಂಭಿಸಿದರು. ಆಗ ಎಗೋರೊವ್ ಮತ್ತು ಕಂತಾರಿಯಾ ಮತ್ತೆ ಹೊರಬಂದರು.

ಈ ಹೊತ್ತಿಗೆ ಅವರಾಗಲೇ ಮಹಡಿ ಮೆಟ್ಟಿಲ ಬಳಿ ಬಂದಿದ್ದರು. ಅವರು ಕಟ್ಟಡದ ಪ್ರವೇಶದ್ವಾರಕ್ಕೆ ಆಸರೆಯಾಗಿದ್ದ ಕಂಬಗಳ ಬಳಿ ನಿಂತರು, ರೈಹ್‌ಸ್ತಾಗ್‌ನ ಪ್ರವೇಶದ್ವಾರದ ಮೇಲೆ ಬಾವುಟ ಹಾರಿಸಲು ಯತ್ನಿಸುತ್ತಿದ್ದ ಎಗೋರೊವ್‌ಗೆ ಕಂತಾರಿಯಾ ಬೆಂಬಲ ಕೊಟ್ಟ.

"ಹೇಯ್, ಅಲ್ಲಲ್ಲ ಕಣ್ರೋ ಇನ್ನೂ ಎತ್ತರಕ್ಕೆ, ಕಟ್ಟಡದ ಮೇಲೆ ಹಾರಿಸಬೇಕು!" ಅವರನ್ನೇ ನೋಡುತ್ತಿದ್ದ ಸೈನಿಕರು ಬಿಸುಯ್ಯುತ್ತ ತಮ್ಮಲ್ಲೇ ಹೇಳಿಕೊಂಡರು. ತಮ್ಮ ಸಂಗಾತಿಗಳ ಕೋರಿಕೆಗೆ ಓಗೊಡುತ್ತಿರುವರೋ ಎಂಬಂತೆ ಎಗೋರೊವ್ ಮತ್ತು ಕಂತಾರಿಯಾ ತಾವು ನೆಟ್ಟಿದ್ದ ಬಾವುಟವನ್ನು ತೆಗೆದು ಮತ್ತೆ ಮೇಲಕ್ಕೆ ಹತ್ತಿ ಹೋದರು. ಅವರು ರೈಹ್‌ಸ್ತಾಗ್ ಒಳಕ್ಕೆ ನುಗ್ಗಿ ಅದರ ಬಾಗಿಲುಗಳ ಹಿಂದೆ ಕಣ್ಮರೆಯಾದರು.

ಕದನ ಆಗಲೇ ಎರಡನೇ ಮಹಡಿಯಲ್ಲಿ ಜರುಗುತ್ತಿದ್ದಿತು. ಕೆಲವು ನಿಮಿಷಗಳು ಕಳೆದವು, ಆಗ ಕೆಂಬಾವುಟವೊಂದು ಕಿಟಕಿಗಳೊಂದರಿಂದ ಕೇಂದ್ರ ಪ್ರವೇಶದ್ವಾರದಿಂದ ಅನತಿ ದೂರದಲ್ಲಿ ಹೊರಚಾಚಿ ಕಾನಿಸಿಕೊಂಡಿತು. ಅದು ಕಾಣಿಸಿಕೊಂಡಿತು. ಕ್ಷಣಕಾಲ ಗಾಳಿಯಲ್ಲಿ



ಹಾರಾಡಿತು, ಅನಂತರ ಮತ್ತೆ ಕಣ್ಮರೆಯಾಯಿತು.

ಹೊರಗೆ ನಿಂತು ನೋಡುತ್ತಿದ್ದ ಸೈನಿಕರು ಚಡಪಡಿಸತೊಡಗಿದರು ; ಅವರ ಸಂಗಾತಿಗಳಿಗೆ ಏನಾಯಿತೋ ಏನೋ! ಅವರು ಕೊಲ್ಲಲ್ಪಟ್ಟರೆ?

ಒಂದು ನಿಮಿಷ, ಆಮೇಲೆ ಎರಡು, ಅನಂತರ ಹತ್ತು ನಿಮಿಷಗಳು ಕಳೆದವು. ಸೈನಿಕರ ಮಧ್ಯೆ ಕಳವಳ ಹೆಚ್ಚಾಯಿತು. ಮತ್ತೂ ಮೂವತ್ತು ನಿಮಿಷಗಳು ಕಳೆದವು. ಆದರೆ ಎಗೋರೊವ್ ಹಾಗೂ ಕಂತಾರಿಯಾರ ಸುಳಿವಾಗಲೀ, ಬಾವುಟದ ಸುಳಿವಾಗಲೀ ಇಲ್ಲವೇ ಇಲ್ಲ.

ಆಮೇಲೆ ಇದ್ದಕ್ಕಿದ್ದಂತೆ ಹೊರಗಿದ್ದ ನೂರಾರು ಸೈನಿಕರ ತುಟಿಗಳಿಂದ ಹರ್ಷೋದ್ಗಾರ ಹೊರಹೊಮ್ಮಿತು. ಸದ್ಯಕ್ಕೆ ಬಾವುಟ ಸುರಕ್ಷಿತವಾಗಿದ್ದಿತು, ಅವರು ಮಿತ್ರರೂ ಜೀವಂತವಾಗಿದ್ದರು. ಬಾಗಿಕೊಂಡು ಆ ಇಬ್ಬರು ಸೈನಿಕರೂ ಕಟ್ಟಡದ ಮೇಲೆ ಎತ್ತರಕ್ಕೆ, ಮಾಳಿಗೆಯ ಉದ್ದಕ್ಕೂ ಧಾವಿಸಿ ಹೋದರು. ಈಗ ಅವರು ನೆಟ್ಟಗೆ ನಿಂತರು. ಬಾವುಟಗಳನ್ನು ಕೈಗಳಲ್ಲಿ ಹಿಡಿದು ಕೆಳಗೆ ನಿಂತಿದ್ದ ತಮ್ಮ ಸಂಗಾತಿಗಳಿಗೆ ಶುಭಾಶಯ ಸಲ್ಲಿಸುವಂತೆ ಅದನ್ನು ಗಾಳಿಯಲ್ಲಿ ಆಡಿಸಿದರು. ಅನಂತರ ಅವರು ಬೇಗನೆ ಗಾಜಿನಿಂದ ಆವೃತವಾಗಿದ್ದ, ರೈಹ್‌ಸ್ತಾಗ್ ಕಟ್ಟಡದ ಮಾಳಿಗೆಯ ಮೇಲೆ ಎದ್ದು ಕಾಣುವಂತೆ ನಿಂತಿದ್ದ ಗುಮ್ಮಟದೊಳಕ್ಕೆ ನುಗ್ಗಿ ಎಚ್ಚರಿಕೆಯಿಂದ ಇನ್ನೂ ಎತ್ತರಕ್ಕೆ ಏರತೊಡಗಿದರು.

ಚೌಕದಲ್ಲೂ ಕಟ್ಟಡದೊಳಗೂ ಕದನ ಇನ್ನೂ ಉಗ್ರತೆಯೊಂದಿಗೆ ನಡೆಯುತ್ತಲೇ ಇದ್ದಿತು. ಆದರೆ ರೈಹ್‌ಸ್ತಾಗ್‌ನ ಮಾಳಿಗೆಯ ಮೇಲೆ ಅದರ ಅತ್ಯುನ್ನತ ಸ್ಥಳದಲ್ಲಿ ವಿಜಯಪತಾಕೆ ಆಗಲೇ ಪರಾಭವಗೊಂಡಿದ್ದ ಬರ್ಲಿನ್ ಮೇಲೆ ವಸಂತ ಆಗಸದಲ್ಲಿ ಆತ್ಮವಿಶ್ವಾಸದಿಂದ ಹಾರಾಡುತ್ತಿದ್ದಿತು. ಇಬ್ಬರು ಸೋವಿಯತ್ ಸೈನಿಕರು, ರಷ್ಯನ್ ಕಾರ್ಮಿಕ ವಿಹಯಾಲ್ ಎಗೋರೊವ್ ಹಾಘೂ ಜಾರ್ಜಿಯನ್ ಯುವಕ ಮಿಲಿತೋನ್ ಕಂತಾರಿಯಾ ಮತ್ತು ಅವರೊಂದಿಗೆ ನಾನಾ ಸೈನಾಂಗಗಳಿಗೆ ಸೇರಿದ ಸಹಸ್ರಾರು ಇತರ ಸೈನಿಕರು ಹಿಮವಾತ ಹಾಗೂ ಪ್ರತಿಕೂಲ ಹವಾಮಾನಗಳಲ್ಲೂ ಈ ಬಾವುಟವನ್ನು ಇಲ್ಲಿಗೆ, ನಾಜಿಗಳ ಈ ಗುಹೆಗೇ, ತಂದುಮುಟ್ಟಿಸಿದ್ದರು, ಭಯಗ್ರಸ್ತ ಶತ್ರುವಿನ ತಲೆಗಳ ಮೇಲೆ, ಸೋವಿಯತ್ ಶಕ್ತಿಯ ಅಜೇಯತೆಯ ಸಂಕೇತವಾಗಿ ಇರಿಸಿದ್ದರು.

ಕೆಲವು ದಿನಗಳನಂತರ ನಾಜಿ ಜನರಲ್ಲರು ಸಂಪೂರ್ಣ ಪರಾಭವವನ್ನು ಒಪ್ಪಿಕೊಂಡರು. ಹಿಟ್ಲರನ ಜರ್ಮನಿಯನ್ನು ಧ್ವಂಸ ಮಾಡಲಾಗಿದ್ದಿತು. ಸೋವಿಯತ್ ಜನ ನಾಜಿಸಂ ವಿರುದ್ಧ ನಡೆಸಿದ ವಿಮೋಚನೆಯ ಮಹಾಯುದ್ಧ ನಮ್ಮ ಸಂಪೂರ್ಣ ವಿಜಯದಲ್ಲಿ ಕೊನೆಗಂಡಿದ್ದಿತು.

1945ರ ಮೇ ಮಾಸ. ಗಾಳಿಯಲ್ಲಿ ವಸಂತೋಲ್ಲಾಸ ತುಂಬಿದ್ದಿತು. ಭೂಮಿ ಆನಂದಿಸುತ್ತಿದ್ದಿತು. ಮಾನವರೂ ಆನಂದಿಸುತ್ತಿದ್ದರು. ಮಾಸ್ಕೋದ ಆಗಸದಲ್ಲಿ ಬಾಣಬಿರುಸುಗಳ ವರ್ಣಮಯ ಪ್ರದರ್ಶನ. ಭೂಮಿಯ ಮೇಲೆ ಸುಖ ಶಾಂತಿ, ಆಗಸದಲ್ಲಿ ಪ್ರಜ್ವಲಿಸುವ ಕಾಂತಿ!

ಮೂರು ವರ್ಷಗಳಿಗೂ ಹೆಚ್ಚು ಕಾಲ ಕ್ರೂರ ರಕ್ತಮಯ ಯುದ್ಧ ಜರುಗಿದ ಸೋವಿಯತ್ ದೇಶದ ಗಡಿಗಳತ್ತ ಹೋಗುವ ಮಾರ್ಗ ಕಷ್ಟವಾದುದಾಗಿತ್ತು. ಆದರೆ ಈ ಗಡಿಗಳಾಚೆ ಇತರ ಯುರೋಪಿಯನ್ ದೇಶಗಳು ಇನ್ನೂ ನಾಜಿ ದಬ್ಬಾಳಿಕೆಯ ನೊಗದಡಿ ಸಿಕ್ಕಿ ನರಳುತ್ತಿದ್ದವು. ಜಗತ್ತಿನ ಪ್ರಪ್ರಥಮ ಕಾರ್ಮಿಕ ರೈತ ರಾಜ್ಯದ ಸೈನ್ಯ ಈ ಜನರಿಗೆ ಅವರು ನಿರೀಕ್ಷಿಸುತ್ತಿದ್ದ ನೆರವು ನೀಡಬಲ್ಲುದಿದ್ದಿತೆ? ಹಾಗೆ ಪ್ರಾರಂಭವಾಯಿತು ಯುರೋಪಿನ ವಿಮೋಚನೆ...

○

ಗುರಿ

ನಮ್ಮದೋ ಸಮಪಾಲು ಸಮಬಾಳು ಧರ್ಮ
ನಿಮ್ಮದೋ ಕೋಮು ಕುಲ ಸಂಕುಚಿತ ಕರ್ಮ
ನಮ್ಮ ಗುರಿ ಎಲ್ಲರಿಗೆ ಬಾಳಾವಕಾಶ
ನಿಮ್ಮ ಗುರಿ ಕೆಲವರಿಗೆ ಭೋಗವಿಲಾಸ

- ವಿಡಂಬಾರಿ

ವಿಛಿದ್ರಕಾರಿ ಚಳುವಳಿ.....

ಪುಟ 11 ರಿಂದ

ಪೀಪರ್ಸ್ ವಾರ್ ಗುಂಪಿನ ಜೊತೆ ಹಲವಾರು ಸೈದ್ಧಾಂತಿಕ ತಕರಾರು ಇರಬಹುದು, ಇರಬಾರದೆಂದೇನಲ್ಲ. ಆದರೆ ಅದೇ ಸಮಯದಲ್ಲಿ ಅವರ ಮೇಲೆ ಪ್ರಭುತ್ವ ಆಡಳಿತ ನಡೆಸುವ ಧಾಳಿ-ಹತ್ಯೆಗಳನ್ನು ಸಮರ್ಥಿಸಲಾಗದು. ಅದರ ವಿರುದ್ಧ ಸಿಪಿಐ(ಎಂ) ಧ್ವನಿ ಎತ್ತಿದೆ. ಹಿಂದೆ ಪಶ್ಚಿಮ ಘಟ್ಟಕ್ಕೆ ಎಸ್‌ಟಿಎಫ್ ಕಳಿಸುವ ಪ್ರಸ್ತಾಪ ಬಂದಾಗ ಅದು ಕೂಡದು ಎಂದು ಪಕ್ಷವು ಹೇಳಿತು. ಬುದ್ಧಿಜೀವಿಗಳ ಮೇಲೆ ಸಂಘ ಪರಿವಾರ ಧಾಳಿ ನಡೆಸುತ್ತಿರುವಾಗಲೂ ಪಕ್ಷ ಅದನ್ನು ಖಂಡಿಸಿದೆ. ಮತ್ತು ಸರ್ಕಾರ ಈ ನಿಟ್ಟಿನಲ್ಲಿ ಬುದ್ಧಿಜೀವಿಗಳು, ಶಿಕ್ಷಕರ ಬೌದ್ಧಿಕ ಸ್ವಾತಂತ್ರ್ಯದ ಮೇಲೆ ಹರಿಹಾಯಬಾರದೆಂದು ಒತ್ತಾಯಿಸಿದೆ. ಅದೇ ಸಂದರ್ಭದಲ್ಲಿ ನಕ್ಸಲೀಯರು ಶಸ್ತ್ರ ತ್ಯಜಿಸಬೇಕೆಂಬುದು ಸಿಪಿಐ(ಎಂ)ನ ಅಭಿಪ್ರಾಯ ತಳೆದಿದೆ. ಭಾರತದ ಸಾಮಾಜಿಕ ವಾಸ್ತವಿಕತೆಯನ್ನು ಮಾರ್ಕ್ಸ್‌ವಾದದ ಬೆಳಕಿನಲ್ಲಿ ಅರಿತು, ಜನತೆಯ ಪ್ರಜಾಸತ್ತಾತ್ಮಕ ಚಳುವಳಿಯನ್ನು ಬಲಗೊಳಿಸಲು - ವಿಸ್ತರಿಸುವುದರತ್ತ ತಪ್ಪು ಹಾದಿಯಿಂದ ಹೊರಬರಲಿ.

ಪ್ರಿಯ ಸಂಪಾದಕರೇ, ಯಾರು ಯಾರನ್ನು ಯೂಸ್ ಮಾಡಿಕೊಳ್ಳುತ್ತಿದ್ದಾರೆ?

'ನಕ್ಸಲೀಯರು ಯೂಸ್ ಮಾಡಿಕೊಳ್ಳುತ್ತಾರೆ' ಎಂದು ಕಂಡವರಿಗೆಲ್ಲಾ ಹೇಳಿದ್ದೇನೆ ಎಂಬ ಬಗ್ಗೆ. ಮನಸ್ಸಿಗೆ ತೋಚಿದಂತೆ ರೈಲು ಬಿಡುವುದರಲ್ಲಿ ಈಶರವರು ಪ್ರವೀಣರೆನಿಸುತ್ತದೆ. ಈಶರವರ ಸಮ್ಮುಖದಲ್ಲೇ ಪತ್ರಿಕೆಯ ಮೊದಲ ಸಂಚಿಕೆಯು ಬಿಡುಗಡೆಗೆ ಸಿದ್ಧವಾಗುತ್ತಿರುವಾಗ ನಿಮ್ಮೊಡನೆ ನನಗಿದ್ದ ಅಭಿಪ್ರಾಯವನ್ನು ತಿರುಚಿರುವ ಪರಿ ಅದು. 'ಲಂಕೇಶ್' ಪತ್ರಿಕೆಯೊಳಗೆ ನಕ್ಸಲೀಯರು ಇದ್ದಾರೆ ಅಥವಾ ಅವರ ಸುದ್ದಿಗಳು ಹೆಚ್ಚು ಜಾಗ ಪಡೆದುಕೊಂಡಿದೆ ಎಂಬ ವಿಷಯದ ಬಗ್ಗೆ ಚರ್ಚೆ ಬಂದಾಗ 'ನಾನು ಅದರ ಕೆಲವು ಲೇಖನಗಳನ್ನು ಪ್ರಸ್ತಾಪಿಸಿ ಅವು ಕಾಡಿನೊಳಗಿಂದ ನಾಡಿಗೆ ನೇರವಾಗಿ ಓಡೋಡಿ ಬಂದ ವರದಿಗಳಾಗಿದ್ದವು ಎಂಬುದನ್ನು ತಮ್ಮಲ್ಲಿ ಪ್ರಸ್ತಾಪಿಸಿದೆ. ಮುಖ್ಯಮಂತ್ರಿಗಳು ಕರೆದ ಸಭೆಯೊಂದರ ಸಂದರ್ಭದಲ್ಲಿ ನಕ್ಸಲೀಯರಿಂದ ಅಪಹರಣ ಕ್ಕೊಳಗಾಗಿದ್ದ ಚಂದ್ರಶೇಖರಯ್ಯನೆಂಬಾತನ ಜಾತಿಯೇ ಬೇರೆ ಆತ ಹೇಗೆ ನೆಂಟನಾದಾನು ಎಂದು ಸ್ವತಃ ಮಾಜಿ ಸಚಿವ ಚಂದ್ರೇಗೌಡರು ಹೇಳಿದ್ದನ್ನು ಕಂಡಿದ್ದೇವೆ. ಇಂತಹ ವರದಿಗಳು ಸಂಘ ಪರಿವಾರದೆದುರೇ ಅನಾವರಣಗೊಂಡಾಗ ಪತ್ರಿಕೆಯ ಹಾಗೂ ಸಂಪಾದಕರ ಸ್ಥಾನ ಏನಾದೀತು ಎಂಬುದು ಯೋಚಿಸಬೇಕಾದ ವಿಷಯ. ಯಾರಾದರೂ ಯಾರನ್ನು ಸ್ವಲ್ಪಕಾಲ ಮೂರ್ಖರನ್ನಾಗಿಸಬಹುದು. ಎಲ್ಲಾ ಕಾಲಕ್ಕೂ ಅಲ್ಲ!.

○

PRB DECR 319-79/79 AIKYARANGA WEEKLY Reg. No. 17015/64 CPM(G)/KA/BGS-119/2003-05

ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಜಿ.ಎನ್.ನಾಗರಾಜ್
ಸಂಪಾದಕರು: ಎಸ್.ವೈ.ಗುರುಶಾಂತ್ ಸಂಪಾದಕೀಯ ಕಛೇರಿ: ನಂ. 12, 18ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು - 27 ಫೋನ್ ನಂ. 22236462,
ಮುದ್ರಣ: ಹನಿ ಪ್ರಿಂಟರ್ಸ್, ಕ್ವೀನ್ ರಸ್ತೆ, ಬೆಂಗಳೂರು.
Printed & Published by Communist Party of India(Marxist), Karnataka State Committee. Editor : S.Y.GURUSHANTH